ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 19

ಮೇ 06, 2012

ಪುಟ 16 ರೂ. 5/-



ಬರ:
ಸರ್ವಪಕ್ಷಗಳ ಸಭೆ ನಡೆಸಿ ಸುಮ್ಮನಾದ ಸರ್ಕಾರ

ರಾಯಚೂರು : ರಣಬಿಸಿಲ ಬೇಗೆಯಲ್ಲಿ ಬದುಕೇ ಒಂದು ಹೋರಾಟ




ತಲೆ ಮೇಲೊಂದು ಸೂರು ನೆಲೆಯೂರಲೊಂದು ಬೇಕು ಭೂಮಿ ಚೂರು



ಗಣಿ ಮಾಫಿಯಾದ ರಾಜಕೀಯ ಯಾತ್ರೆ

ಸಂಘ ಪರಿವಾರದ ಅಡ್ಡೆಯಾಗಿರುವ ತುಮಕೂರು ವಿಶ್ವ ವಿದ್ಯಾಲಯದ ರಗಳೆಗಳು





ಅಸಮಾನ್ಯ ಜನನಾಯಕ ಕಾಂ. ಪಿ.ಸುಂದರಯ್ಯ

ತಲೆಯ ಮೇಲೊಂದು ಸೂರು – ನೆಲೆಯೂರಲು ಬೇಕು ಭೂಮಿ ಚೂರು

ರಾಜ್ಯದಲ್ಲಿ ಆರಂಭವಾಗಿರುವ ಭೂಮಿ ಚಳುವಳಿಯ ಪ್ರಧಾನ ಪ್ರಶ್ನೆಗಳಲ್ಲಿ ಮನೆ ನಿವೇಶನದ ಪ್ರಶ್ನೆಯೂ ಒಂದು. ಇದು ಲಕ್ಷಾಂತರ ಬಡವರ ಬದುಕಿನ ಒಂದು ಜ್ವಲಂತ ಪ್ರಶ್ನೆ. ಇದು ಎರಡು ವರ್ಷಗಳ ಹಿಂದೆ ನಡೆದ ಹೋರಾಟದ ಮುಂದುವರಿಕೆ. ಈ ಹಿಂದಿನ ಹೋರಾಟದ ಸ್ಫೂರ್ತಿಯೊಂದಿಗೆ ಇನ್ನಷ್ಟು ದೃಢ ಹೋರಾಟ ಈಗ ಮೂಡಿಬರಬೇಕಿದೆ.

ಜಿ.ಸಿ.ಬಯ್ಯಾರೆಡ್ಡಿ


ಕಾಡಿನಲ್ಲಿ ವಾಸಿಸುವ ಪ್ರಾಣಿ, ಪಕ್ಷಿಗಳೂ ತಮಗೆ ಅದ್ಭುತ, ವಿಸ್ಮಯ ಎನ್ನುವಂತಹ ಗೂಡುಗಳನ್ನು ಕಟ್ಟಿಕೊಳ್ಳುತ್ತವೆ. ಆದರೆ 'ಬುದ್ಧಿವಂತ', 'ನಾಗರೀಕ' ಅನ್ನಿಸಿಕೊಂಡ ಮನುಷ್ಯರಲ್ಲಿ ಎಲ್ಲರಿಗೂ ಆತ್ಮ ಗೌರವದೊಂದಿಗೆ ಬದುಕಲು ಕನಿಷ್ಟ ಅವಶ್ಯಕತೆಯಾದ ಒಂದು ಮನೆ ಕಟ್ಟಿಕೊಳ್ಳಲಾಗುವುದಿಲ್ಲ ಎಂಬುದು ನಿಜ ಕ್ಕೂ ದುರಂತ. ಇದು ಮನೆ ಕಟ್ಟಿಕೊಳ್ಳಲಾರದ ಬಡವರ ತಪ್ಪಲ್ಲ. ಉಳ್ಳವರು, ಇಲ್ಲದವರು ಎಂದು ವಿಭಜಿತವಾಗಿರುವ ನಮ್ಮ ಸಮಾಜದಲ್ಲಿ ದುರ್ಬಲ ವರ್ಗಗಳನ್ನು ಇಡಲಾಗಿರುವ ಸ್ಥಿತಿ ಇದು.

ಚುನಾವಣೆಗಳ ಕಾಲದಲ್ಲಿ ತಾವು ಜನರ ಪರ ಎನ್ನುವ ಆಳುವ ವರ್ಗಗಳ ರಾಜಕೀಯ ಪಕ್ಷಗಳು ಸರ್ಕಾರ ರಚಿಸಿ ಅಧಿಕಾರಕ್ಕೆ ಬಂದ ಮೇಲೆ ಯಾರ ಪರ ವಹಿಸುತ್ತವೆ ಎಂಬುದಕ್ಕೆ ಹೆಚ್ಚೇನು ವಿವರಣೆಗಳು ಬೇಕಾಗಿಲ್ಲ.

2008ರ ರಾಜ್ಯ ವಿಧಾನ ಸಭಾ ಚುನಾವಣೆಗಳ ಕಾಲಕ್ಕೆ ಜನರಿಗೆ 2 ಲಕ್ಷ ಮನೆ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದ ಬಿಜೆಪಿ ಸರ್ಕಾರ ಯಾವ ರೀತಿಯಾಗಿ ಜನರಿಗೆ ದ್ರೋಹ ಮಾಡಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಬೆಂಗಳೂರಿನಂತಹ ಒಂದು ನಗರದಲ್ಲಿ ಗಂಡ-ಹೆಂಡತಿ ಇಬ್ಬರು ಮಕ್ಕಳು ಇರುವ ಒಂದು ಸಂಸಾರ ವಾಸ ಮಾಡಲು ಅಗತ್ಯವಾದ ಮನೆಗೆ ಸಾವಿರಾರು ರೂಪಾಯಿ ಬಾಡಿಗೆ ಕೊಡಬೇಕಾದ ಪರಿಸ್ಥಿತಿ ಇದೆ. ಬಡಾವಣೆಯಿಂದ ಬಡಾವಣೆಗೆ ಬಾಡಿಗೆ ದರಗಳು ಹೆಚ್ಚು-ಕಡಿಮೆ ಆಗುವುದಿದ್ದರೂ ಮನೆ ಬಾಡಿಗೆಯಂತೂ ಸಾವಿರಗಳ ಲೆಕ್ಕದಲ್ಲೇ ಇದೆ ಎನ್ನುವುದು ಮಾತ್ರ ಸುಳ್ಳಲ್ಲ.

ಯಾವುದೇ ಕುಟುಂಬ ಇದ್ದಂತೆಯೇ ಇರುವುದಿಲ್ಲ. ಮಕ್ಕಳು ಬೆಳೆದು ದೊಡ್ಡವರಾಗಿ ಮದುವೆಯಾದರೆ ದೊಡ್ಡ ಮನೆ, ಅಥವಾ ಹೊಸದೊಂದು ಮನೆಯ ಅಗತ್ಯ ಬರುತ್ತದೆ. ನಗರ ಪ್ರದೇಶಗಳಲ್ಲಿ ಯಾವುದೋ, ಗಾರ್ಮೆಂಟ್ ಕಾರ್ಖಾನೆ, ಅಥವಾ ವ್ಯಾಪಾರ ಮಳಿಗೆಯಲ್ಲಿ ಕೆಲಸ ಮಾಡುವ ನೌಕರರು, ದಿನ ದಿನವೂ ದುಡಿದು ತಿನ್ನ ಬೇಕಾದ ಆಟೋ ಚಾಲಕರು, ಸಣ್ಣ ಪುಟ್ಟ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಅಸಂಘಟಿತ ಕಾರ್ಮಿಕರು, ಸೆಕ್ಯುರಿಟಿ ಗಾರ್ಡ್‌ಗಳು, ಹಮಾಲಿಗಳು, ಕಟ್ಟಡ ಕಾರ್ಮಿಕರು ಮುಂತಾದವರು ದುಬಾರಿ ಬಾಡಿಗೆ ಕಟ್ಟಿ ಜೀವನ ಮಾಡುವುದು ದಿನೇ ದಿನೇ ದುಸ್ತರವಾಗುತ್ತಿದೆ. ದುಡಿಮೆಯ ದೊಡ್ಡ



ಭಾಗವನ್ನು ಮನೆ ಬಾಡಿಗೆಗಾಗಿಯೇ ಮೀಸಲಿಡಬೇಕಾದ ಪರಿಸ್ಥಿತಿ ಈ ಬಡಜನಗಳ ವಿಭಾಗವಾಗಿದೆ.

ಗಗನ ಕುಸುಮವಾದ ಬಿಡಿಎ ನಿವೇಶನ

ಮನೆ ಬಾಡಿಗೆಯನ್ನೇ ಕಟ್ಟಲಾಗದ ಈ ಜನಗಳಿಗೆ ಸ್ವಂತ ಸೈಟು-ಮನೆ ಕೈಗೆ ನಿಲುಕದ ಗಗನ ಕುಸುಮವಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ದ ನೀತಿ ಬೆಂಗಳೂರಿನ ಬಡವರು, ಕೆಳ ಮಧ್ಯಮ ವರ್ಗವನ್ನು ಗಮನದಲ್ಲಿಟ್ಟು ಕೊಂಡಿರುವುದಲ್ಲ. ಅದು ಬಹುತೇಕ ಬೆಂಗಳೂರಿನ ಇದ್ದುಳ್ಳ ಜನರ ಅಗತ್ಯಗಳಿಗೆ ಯೋಜನೆ ರೂಪಿಸುವ ಸಂಸ್ಥೆಯಾಗಿದೆ. ಜೊತೆಗೆ ಹಂಚಲಾಗುತ್ತಿರುವ ಸೈಟುಗಳ ಪ್ರಮಾಣ ಬೆಂಗಳೂರಿನ ಜನರ ಅಗತ್ಯಗಳಿಗೆ ಹೋಲಿಸಿದರೆ ರಾವಣಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಿದೆ. ಹೀಗಾಗಿ ಬಡವರ ಪಾಲಿಗೆ ಬಿಡಿಎ ಹಂಚುವ ಸೈಟುಗಳು ಕನಸಿನ ಗಂಟೇ ಸರಿ. ಕಡಿಮೆ ಆದಾಯದ ಜನರಿಗೆಂದು ಬಿಡಿಎ ಒದಗಿಸುವ ಸೈಟಿಗೆ ಒಂದು ದಶಕದ ಹಿಂದೆಯೇ ಸು. ಅರ್ಧ ಲಕ್ಷ ಹಣ ತೆರಬೇಕಾಗಿತ್ತು. ಈಗೇನಿದ್ದರೂ ಲಕ್ಷಗಳ ಲೆಕ್ಕ. ಇದಕ್ಕಿಂತಲೂ ದೊಡ್ಡ ಸಮಸ್ಯೆ ಎಂದರೆ ಸಾಲ ಸೋಲ ಮಾಡಿಯಾದರೂ ಬಡ ಜನ ಈ ದುಡ್ಡು ಹೊಂದಿಸುತ್ತಾರೆ ಎಂದರೂ ಈ ಸೈಟುಗಳು ಎಲ್ಲರಿಗೂ ದಕ್ಕುವುದಿಲ್ಲ. ಹತ್ತಾರು ನಿಯಮಗಳ ಗೋಡೆಗಳು, ಇಪ್ಪತ್ತೆಂಟು ಷರತ್ತುಗಳು. ಅನಕ್ಷರಸ್ಥರು, ಹೆಚ್ಚು ಶಿಕ್ಷಣವಿಲ್ಲದ ಬಡ ಜನರಿಗೆ ಬಿಡಿಎ ಕಛೇರಿ ಕಡೆ ತಲೆ ಹಾಕಿ ಮಲಗಲೂ ಧೈರ್ಯವಾಗುವುದಿಲ್ಲ.

ಬಡವರಿಗಿಲ್ಲ ಆಶ್ರಯ

ಬಡ ಜನರಿಗೆ ಮನೆ-ನಿವೇಶನ ನೀಡುವ ಆಶ್ರಯ ಮುಂತಾದ ಯೋಜನೆಗಳು ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಹುತೇಕ ಸ್ಥಗಿತಗೊಂಡಿವೆ. ಜಾರಿಯಾಗುತ್ತಿರುವ ಕಡೆ ಅವು ಊರಿನ ಅಧಿಕಾರಸ್ಥರು, ಬಲಾಢ್ಯರ ಸ್ವಜನ ಪಕ್ಷಪಾತಕ್ಕೆ, ಭ್ರಷ್ಟಾಚಾರಕ್ಕೆ ಬಲಿಯಾಗಿವೆ ಹೊರತು ನಿಜವಾದ ಬಡವರಿಗೆ ಸಿಗುತ್ತಿಲ್ಲ. ಉಚಿತ ನಿವೇಶನ ಎನ್ನಲಾಗುವ ಈ ನಿವೇಶನಗಳನ್ನು ಬಹುತೇಕ ಮಾರುಕಟ್ಟೆ ದರಕ್ಕೆ (ಸ್ವಲ್ಪ ಮಾತ್ರವೇ ಕಮ್ಮಿ) ಖರೀದಿ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಇದೆ.

ಪೇಟೆ, ಪಟ್ಟಣಗಳ, ಗ್ರಾಮೀಣ ಪ್ರದೇಶದ ಬಡವರು, ದಲಿತರು, ಅಂಗನವಾಡಿ ನೌಕರರು, ಬಿಸಿಯೂಟ ನೌಕರರು, ಕೂಲಿಕಾರರು ಮಾರುಕಟ್ಟೆ ದರದ ಲಂಚ ಕೊಟ್ಟು ಈ 'ಉಚಿತ ನಿವೇಶನ'ಗಳನ್ನು ಪಡೆದುಕೊಳ್ಳುವುದು ಸಾಧ್ಯವೇ?

ಇಂಥ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ 2010 ರ ಭೂ ಆಂದೋಲನದ ಸಂದರ್ಭದಲ್ಲಿ ಹಲವು ಬೇಡಿಕೆಗಳನ್ನು ಎತ್ತಲಾಗಿತ್ತು ಅವು ಇಂದಿಗೂ ಪ್ರಸ್ತುತವಾಗಿವೆ.

ಈ ಅಂಶಗಳ ಜಾರಿಗಾಗಿ ಚಳುವಳಿ ಒತ್ತಾಯಿಸಬೇಕು.

ಪ್ರಮುಖ ಬೇಡಿಕೆಗಳು

30*40 ಅಳತೆಯ ನಿವೇಶನ

ನಿವೇಶನ ಕೊಡುವ ಸಂದರ್ಭದಲ್ಲಿ ಬಡಜನರಿಗೆಂದು 20*30 ಅಡಿ ಅಳತೆಯ ನಿವೇಶನ ಕೊಡಲಾಗುತ್ತದೆ. ಆದರೆ ಅದು ಬಡವರ ಅಗತ್ಯಕ್ಕೆ ಖಂಡಿತ ಸಾಕಾಗುವುದಿಲ್ಲ. ಬಹಳಷ್ಟು ಪ್ರಸಂಗಗಳಲ್ಲಿ ಬಡವರ ಮನೆಯ ಸದಸ್ಯರ ಸಂಖ್ಯೆ ಜಾಸ್ತಿ ಇರುತ್ತದೆ. ಕುಟುಂಬ ಸದಸ್ಯರ ಸಂಖ್ಯೆ ಸ್ವಲ್ಪ ಜಾಸ್ತಿ ಇದ್ದರೆ ಈ ಅಳತೆಯ ಜಾಗ ಸಾಲದು. ಮನೆ ವೃಕ್ಷ ಒಂದೆರಡು, ಹಸು ಎಮ್ಮೆ ಸಾಕಬೇಕೆಂದು ಕೊಂಡರೆ, ಮನೆಯಲ್ಲಿ ಒಂದೋ ಎರಡೋ ಹೊಲಿಗೆ ಯಂತ್ರ ಇಟ್ಟುಕೊಂಡು ಬಟ್ಟೆ ಹೊಲೆದು ಜೀವನ ನಿರ್ವಹಣೆ ಮಾಡಬೇಕೆಂದುಕೊಂಡರೆ... ಅಥವಾ ಬಡವರು ತಮ್ಮ ಬದುಕಿನ ಅನಿವಾರ್ಯತೆಗಾಗಿ ಬೇರೆ ಏನು ಮಾಡಬೇಕೆಂದುಕೊಂಡರೂ ಈ ಅಳತೆಯ ಮನೆ, ನಿವೇಶನ ಯಾತಕ್ಕೂ ಆಗುವುದಿಲ್ಲ. ಇನ್ನೂ ಕೃಷಿಕರ ಅಗತ್ಯಗಳಿಗೆ ಈ ಜಾಗ ಸಾಲುವ ಮಾತೇ ಇಲ್ಲ. ಆದ್ದರಿಂದ ಈ ನಿವೇಶನದ ಅಳತೆಯನ್ನು 30*40 ಅಡಿಗಳಿಗೆ ನಿಗದಿ ಮಾಡಬೇಕು.

ಜಿಲ್ಲಾಡಳಿತದ ಹೊಣೆ

ಬಡ ಜನರಿಗೆ ಉಚಿತ ನಿವೇಶನ ನೀಡುವ ಪ್ರಶ್ನೆಯಲ್ಲಿ ಜಿಲ್ಲಾಡಳಿತದ ಪಾತ್ರವೂ ಮುಖ್ಯವಾದುದು. ಸರ್ಕಾರಿ ಭೂಮಿ ಇರುವ ಕಡೆಗಳಲ್ಲಿ ಜಿಲ್ಲಾಧಿಕಾರಿಗಳು ಅದನ್ನು ವಶಕ್ಕೆ ಪಡೆದು ನಿವೇಶನ ಮಾಡಿ ಹಂಚಲು ಕ್ರಮವಹಿಸಬೇಕು. ಒಂದು ಪಕ್ಷ ಸರ್ಕಾರಿ ಜಮೀನು ಲಭ್ಯವಿಲ್ಲವಾದಲ್ಲಿ ಖಾಸಗಿ ಭೂಮಿಯನ್ನು ಖರೀದಿಸಿ ಕೊಡುವ ಜವಾಬ್ದಾರಿ ಜಿಲ್ಲಾಡಳಿತಕ್ಕೆ ಇದೆ. ಈ ಉದ್ದೇಶಕ್ಕಾಗಿ ರೈತರ ಭೂಮಿ ಪಡೆದುಕೊಳ್ಳುವುದಾದರೆ ರೈತರ ಸಮ್ಮತಿಯೊಂದಿಗೆ ಅವರಿಗೆ ಮಾರುಕಟ್ಟೆ ದರದ ಆಧಾರದ ಸೂಕ್ತ ಪರಿಹಾರ, ಭವಿಷ್ಯದ ಜೀವನದ ಭದ್ರತೆಗೆ ಆಧಾರ ಒದಗಿಸಿ ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಜನ ಚಳುವಳಿ ಜಿಲ್ಲಾಡಳಿತದ ಮೇಲೆ ಒತ್ತಡ ಹೇರುವ ಕೆಲಸ ಆಗಬೇಕಿದೆ.

ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಸುಮಾರು 100 ತಾಲ್ಲೂಕುಗಳಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿಗಳಲ್ಲಿ

ಪುಟ 4 ಕ್ಕೆ

ಸಂಪಾದಕೀಯ

ಲೋಕಾಯುಕ್ತ ನೇಮಕವಾಗಲಿ ಸಂಸ್ಥೆ ಉಳಿಯಲಿ

ಉಪಲೋಕಾಯುಕ್ತರಲ್ಲಿ ಒಬ್ಬರಾಗಿರುವ ನ್ಯಾ.ಮಜಗೆಯವರ ಮೇಲೂ ಕಳಂಕದ ಆರೋಪ ಬಂದಿರುವ ಹಿನ್ನೆಲೆಯಿಂದಾಗಿ ಅವರ ಸ್ಥಾನವೂ ಖಾಲಿಯಾಗುವ ಸಂಭವ ಎದುರಾಗುತ್ತಿದೆ. ಹೀಗಾದಲ್ಲಿ ಇಡೀ ಕರ್ನಾಟಕ ಲೋಕಾಯುಕ್ತ ಸಂಸ್ಥೆಯೇ ನಾವಿಕನಿಲ್ಲದ, ನಾಯಕತ್ವವಿಲ್ಲದ ಹಡಗಿನಂತಾಗುವುದರಲ್ಲಿ ಅನುಮಾನವೇ ಇಲ್ಲ.

ಈಗಾಗಲೇ ನ್ಯಾ. ಸಂತೋಷ ಹೆಗ್ಡೆಯವರಿಂದ ಲೋಕಾಯುಕ್ತ ಸ್ಥಾನ ಖಾಲಿಯಾಗಿ ಹತ್ತು ತಿಂಗಳಾದರೂ ಸರಕಾರ ಅದಕ್ಕೆ ನೇಮಕ ಮಾಡಲೇ ಇಲ್ಲ. ಬಂದ ಸಾರ್ವಜನಿಕ ಒತ್ತಡ, ತೀವ್ರ ಟೀಕೆಗಳಿಂದಾಗಿ ನೇಮಿಸುವ ಪ್ರಕ್ರಿಯೆಗೆ ಚಾಲನೆ ನೀಡುವಂತೆ ನಟಿಸಲಾಯಿತಷ್ಟೇ. ಈಗಲೂ ಸರಕಾರ ಅದೇ ಮಾತನ್ನಾಡಲಾಗುತ್ತಿದೆಯಾದರೂ ವಸ್ತುತಃ ಯಾವುದೇ ಪ್ರಯತ್ನಗಳೇ ಇಲ್ಲವಾಗಿವೆ. ಒಲ್ಲದ ಮನಸ್ಸಿನಿಂದ ಲೋಕಾಯುಕ್ತರನ್ನು ನೇಮಿಸುವ ಪ್ರಕ್ರಿಯೆಯಲ್ಲಿ ಬಂದ ಕೆಲವು ಪ್ರಶ್ನೆಗಳಿಗೆ ಸ್ಪಷ್ಟನೆಯನ್ನು ಸುಪ್ರಿಂ ಕೋರ್ಟ್‌ನಿಂದ ಸಮಾಲೋಚಿಸಿಕೊಂಡು ನೇಮಕ ಮಾಡಲಾಗುವುದೆಂದು ಮುಖ್ಯಮಂತ್ರಿ ಸದಾನಂದಗೌಡರು ಹೇಳಿದ್ದು ಸಹ ವಿಳಂಬದ ಒಂದು ತಂತ್ರ, ಅಂದರೆ ಹೀಗೇ ವಿಳಂಬಿಸುತ್ತಾ ಅಂತಿಮವಾಗಿ ಲೋಕಾಯುಕ್ತರ ನೇಮಿಸದೇ ಪೂರ್ಣಾವಧಿ ಕಾಲ ತಳ್ಳುವ ದುಷ್ಟ ಹುನ್ನಾರವೆ ಇದಾಗಿದೆ.

ಉಪ ಲೋಕಾಯುಕ್ತ ನ್ಯಾ. ಚಂದ್ರಶೇಖರಯ್ಯನವರ ನೇಮಕಾತಿಯಲ್ಲಿ ಪಾಲಿಸಬೇಕಾದ ನಿಯಮಗಳನ್ನು ಪಾಲಿಸದೆ ಇರುವ ಬಗ್ಗೆ ಈಗಾಗಲೇ ಹೈಕೋರ್ಟ್ ನಿಂದ ಸರಕಾರ ತೀವ್ರ ಟೀಕೆಗೊಳಗಾಗಿದ್ದು ನೇಮಕಾತಿಯನ್ನೇ ರದ್ದು ಪಡಿಸಿದೆ.ಈ ಎಲ್ಲಾ ಸಂಗತಿಗಳನ್ನು ಗಮನಿಸಿದಾಗ ಅಧಿಕಾರದಲ್ಲಿರುವ ಬಿಜೆಪಿಗೆ ಭ್ರಷ್ಟಾಚಾರವನ್ನು ತಡೆಯುವ, ಮಟ್ಟ ಹಾಕುವ ಯಾವ ಉದ್ದೇಶವೇ ಇಲ್ಲವಾಗಿದೆ. ಸ್ವತಃ ಭ್ರಷ್ಟಾಚಾರ, ಅಕ್ರಮ, ಹಲವು ಹಗರಣಗಳಲ್ಲಿ ಸಿಕ್ಕಿ ಹಾಕಿಕೊಂಡಿರುವ ಆಮು-ತನ್ನೆಲ್ಲಾ ಹಗರಣಗಳನ್ನು ಮುಚ್ಚಿಕೊಳ್ಳಲು ಇಡೀ ಲೋಕಾಯುಕ್ತ ಸಂಸ್ಥೆಯನ್ನೇ ನಿಷ್ಕ್ರಿಯಗೊಳಿಸಲು ಹೊರಟಿದೆ. ಬಿಜೆಪಿಯ ರಾಜ್ಯಾಧ್ಯಕ್ಷ ಹಾಗೂ ಮು.ಮಂತ್ರಿಗಳೇ ಈ ಸಂಸ್ಥೆಯನ್ನು ಮುಚ್ಚಿ ಬಿಡುವ ಮಾತನ್ನಾಡಿದ್ದರು. ಈಗ ಕಾರ್ಯತಃ ಅದನ್ನೇ ಮಾಡುತ್ತಿದ್ದಾರೆ.

ಈಗಲೂ ಆಯಕಟ್ಟಿನಲ್ಲಿದ್ದ ದಕ್ಷ ಅಧಿಕಾರಿಗಳನ್ನು ಎತ್ತಂಗಡಿ ಮಾಡಿ ತಮಗೆ 'ಹಿತಕರವಾದ' ಅಧಿಕಾರಿಗಳನ್ನು ನೇಮಿಸಿಕೊಂಡು ಮೊಕದ್ದಮೆ ಪ್ರಕರಣಗಳಲ್ಲಿ ಬಿ ರಿಪೋರ್ಟ್ ಹಾಕಿಸಿಕೊಂಡು ಖುಲಾಸೆಯಾಗುತ್ತಿರುವುದು ಹಾಡ ಹಗಲೇ ನಡೆವ ನಗ್ನ ಸಂಗತಿಗಳು. ಈಗಲೂ ಜಿಂದಾಲ್, ಅದಾನಿ ಗಣಿ ಕಂಪನಿಗಳಿಂದ ಲಂಚ ಪಡೆದ ಪ್ರಕರಣದಲ್ಲಿ ಯಡಿಯೂರಪ್ಪ ಮತ್ತು ಕುಟುಂಬ ಸದಸ್ಯರ ಮೇಲೆ ಸಿ.ಬಿ.ಐ. ತನಿಖೆಗೆ ಕೇಂದ್ರ ಉನ್ನತಾಧಿಕಾರ ಸಮಿತಿ ಸುಪ್ರಿಂ ಕೋರ್ಟ್‌ಗೆ ವರದಿ ಸಲ್ಲಿಸುತ್ತಿದ್ದಂತೆ ತಮ್ಮ ಕಡು ಹಗೆ, ದ್ವೇಶ, ಕಿತ್ತಾಟಗಳನ್ನು ಬದಿಗಿಟ್ಟು ನಾವೆಲ್ಲಾ ಒಂದು ,ಬಂಧು ಎಂದು ಒಂದಾಗಿರುವುದೇ ಬಿಜೆಪಿಯ ಭ್ರಷ್ಟಚಾರದಲ್ಲಿನ ನಂಟುಗಳ ನಿಜ ಮುಖವನ್ನು ಬಯಲುಗೊಳಿಸಿದೆ. ಇಂತಹವರಿಂದ ಭ್ರಷ್ಟಾಚಾರ ತಡೆವ, ಲೋಕಾಯುಕ್ತ ಸಂಸ್ಥೆ ಉಳಿಸುವುದನ್ನು ನಿರೀಕ್ಷಿಸಲೂ ಸಾಧ್ಯವಿಲ್ಲ: ಹಾಗಾಗಿ ಅವರು ಮುಂದೆಯೂ ಸಂಸ್ಥೆ ಮೇಲೆ ಇನ್ನಷ್ಟು ಧಾಳಿಗಳನ್ನು ನಡೆಸಲಿದ್ದಾರೆ.


ಇದೇ ಸಂದರ್ಭದಲ್ಲಿ ಲೋಕಾಯುಕ್ತ ಸಂಸ್ಥೆಯನ್ನು ಕಾಪಾಡುವಲ್ಲಿ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿ (ಎಸ್)ಗಳೂ ನಿರಾಸಕ್ತರಾಗಿವೆ. ಹಲವು ಹಗರಣಗಳಲ್ಲಿರುವುದೂ ಒಂದು ಕಾರಣ. ಇಂತಹ ಸನ್ನಿವೇಶದಲ್ಲಿ ಲೋಕಾಯುಕ್ತ ಸಂಸ್ಥೆಯನ್ನು ಉಳಿಸಲು, ಲೋಕಾಯುಕ್ತರನ್ನು ಕೂಡಲೇ ನೇಮಿಸಲು ತೀವ್ರವಾದ ಒತ್ತಡವನ್ನು ಜನತೆ ಹಾಕಲೇಬೇಕಿದೆ. ಇಲ್ಲವಾದಲ್ಲಿ ಇರುವ ಒಂದು ಸಂವಿಧಾನಾತ್ಮಕ ಸಂಸ್ಥೆಯಲ್ಲಿನ ಜನಪರ ಅವಕಾಶವನ್ನು ಹಾಳಾಗಲು ಬಿಟ್ಟಂತಾಗುವುದು. ಆದ್ದರಿಂದ ಈ ದೇಶೆಯಲ್ಲಿ ಎಲ್ಲಾ ಭ್ರಷ್ಟಾಚಾರ ವಿರೋಧಿ ,ಪ್ರಜಾಸತ್ತಾತ್ಮಕ ಶಕ್ತಿಗಳು ,ಪ್ರಗತಿಪರರು ಕಾರ್ಯ ಪ್ರವೃತ್ತರಾಗಬೇಕಿದೆ.

ಗಣಿ ಮಾಫಿಯಾದ ರಾಜಕೀಯ ಯಾತ್ರೆ

ಬಿಎಸ್‌ಆರ್ ಪಕ್ಷ ಎಂದರೆ ಬಿ. ಶ್ರೀರಾಮುಲು ಪಕ್ಷ ಎಂದೇ ಬಹಳಷ್ಟು ಜನ ಅಂದುಕೊಂಡಿದ್ದಾರೆ. ಇನ್ನು ಕೆಲವರು ಬಿ, ಶ್ರೀರಾಮುಲು, ರೆಡ್ಡಿಗಳ ಪಕ್ಷ ವೆಂದೂ ಭಾವಿಸಿದ್ದಾರೆ. ಇಲ್ಲ ಬಡವರ, ಶ್ರಮಿಕರ, ರೈತರ ಪಕ್ಷವೆಂದಾದರೂ ವ್ಯಾಖ್ಯಾನಿಸಿಕೊಳ್ಳುವವರೂ ಅಥವಾ ವೈ.ಎಸ್.ಆರ್. ಪಕ್ಷದಂತೆ ಇದು ಬಿಎಸ್ಆರ್ ಪಕ್ಷವೆಂದೂ... ಹೇಗೋ ಇರಲಿ, ಹೆಸರೇ ಖಾತ್ರಿಯಾಗಿ ಇನ್ನೂ ಜನರಿಗೆ ಗೊತ್ತಿಲ್ಲದ ಈ ಪಕ್ಷದ ಸಂಸ್ಥಾಪಕ, ಶಾಸಕ ಬಿ. ಶ್ರೀರಾಮುಲು ಪಾದಯಾತ್ರೆ ಹೊರಟಿದ್ದಾರೆ.

ಇತಿಹಾಸ ಗೊತ್ತಿಲ್ಲದವರು

ಅದು ಏಪ್ರಿಲ್ 24, ಬಸವ ಜಯಂತಿ, ಬಸವಕಲ್ಯಾಣದಲ್ಲಿ ಭಾರೀ ಸಮಾರಂಭದ ಬಳಿಕ ಬೆಂಗಳೂರಿನತ್ತ ಪಾದಯಾತ್ರೆ ಆರಂಭ'ಗೊಂಡಿದೆ. 'ಅನುಭವ ಮಂಟಪದಿಂದ ಅಧಿಕಾರ ಕೇಂದ್ರ'ದತ್ತ ಈ ಯಾತ್ರೆಯಂತೆ, ಬರದ ಬವಣೆಗಳನ್ನು ಖುದ್ದಾಗಿ ಅರಿತು ಅಧಿಕಾರದಲ್ಲಿರುವವರಿಗೆ ಮುಟ್ಟಿಸುವುದು ಗುರಿಯಂತೆ, 54 ದಿನಗಳ 951 ಕಿ.ಮಿ. ನ ಈ ಪಾದಯಾತ್ರೆಯು ರಾಜ್ಯದಲ್ಲಿಯೇ ಪ್ರಪ್ರಥಮ, ಐತಿಹಾಸಿಕ ಎಂದೆಲ್ಲಾ ಅವರ ಹಿಂದೆ ಮುಂದೆ ಇದ್ದವರೆಲ್ಲಾ ಬಣ್ಣಿಸಿದ್ದಾರೆ. ಗಣಿಗಳ್ಳರ ಕೂಟದ ಈ ಶ್ರೀರಾಮುಲುನನ್ನು 'ಆಧುನಿಕ ಬಸವಣ್ಣ' ಎಂದೆಲ್ಲಾ ಕೆಲವರು ಕಿರುಚಿದ್ದು ಭಟ್ಟಂಗಿತನದ ಪರಾಕಾಷ್ಠೆ!. ವರ್ತಮಾನವೇ ಅರ್ಥವಾಗದಿರುವ ಅಂತಹವರಿಗೆ ಇತಿಹಾಸ ಗೊತ್ತಿರಲಾದರೂ ಹೇಗೆ ಸಾಧ್ಯ? .




ಬಹಳ ದೂರ ಬೇಡ, ನರಗುಂದ-ನವಲಗುಂದ ರೈತ ಬಂಡಾಯ, ಗುಂಡೂರಾಯರ ಸರಕಾರದ ರೈತರ ಕಗ್ಗೊಲೆಗಳು, ಪ್ರಜಾಸತ್ತಾತ್ಮಕ ಚಳುವಳಿಯ ದಮನಕಾಂಡದ ವಿರುದ್ಧ ನಡೆದ ಮಹಾಪಾದಯಾತ್ರೆ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಬದಲಾವಣೆಗೆ ಕಾರಣವಾಯಿತು. ಅದು ನರಗುಂದದಲ್ಲಿ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ್ ಅರಸರಿಂದ ಉದ್ಘಾಟನೆಗೊಂಡದ್ದು 1981ರ ಜನವರಿ16ರಂದು. ಒಂದು ತೊರೆಯಾಗಿ ಸಾವಿರಾರು ಜನರಿಂದ ಆರಂಭಗೊಂಡ ಪಾದಯಾತ್ರೆ ರಾಜಧಾನಿಗೆ ಬರುವ ಹೊತ್ತಿಗೆ ಲಕ್ಷಾಂತರ ಜನರ ಮಹಾಯಾತ್ರೆಯಾಗಿ, ಬೆಂಗಳೂರು ಮಹಾನಗರದ ನಾಗರೀಕರು-ವಿಶೇಷವಾಗಿ ಕಾರ್ಮಿಕವರ್ಗ ಜೊತೆಗೂಡಿ, ಭವ್ಯ ಸ್ವಾಗತ ನೀಡಿದ್ದು ನೆನಪು ಮಾಡಿಕೊಂಡರೆ ಸಾಕು?. ಭೂಮಿ, ನೀರಿಗಾಗಿ, ಹಲವಾರು ಪಾದಯಾತ್ರೆಗಳು ನಡೆದೇ ಇವೆ. ಇವುಗಳಲ್ಲಿಯೂ ಶ್ರೀರಾಮ, ರಾಮಪ್ಪ, ರಾಮಕ್ಕಗಳೇ ಪ್ರಧಾನವಾಗಿದ್ದರು. ಆದರೆ ಅವರು ಕೋಟಿ ನೋಟಿನ ಮೂಟೆಗಳ ಹೊತ್ತ ಶ್ರೀರಾಮುಲುನಂತಿರಲಿಲ್ಲ. ನೂರಾರು ನೋವುಗಳ ಮೂಟೆ ಹೊತ್ತೇ ಬಂದಿದ್ದರು. ಹೀಗೆ ರಾಜಿನಾಮೆ ಜಪಿಸುವಭಟ್ಟಂಗಿಗಳಿಗೆ ಎಡಶಕ್ತಿಗಳು ನಡೆಸುವ ಪಾದಯಾತ್ರೆಗಳು ಕಾಣಿಸುವುದೇ ಇಲ್ಲ!

ಏನಾ ಒತ್ತಾಸೆ ?

ಬಹಳ ವಿಚಿತ್ರವೆಂದರೆ ಅದು ಐತಿಹಾಸಿಕವೋ ಅಲ್ಲವೋ ಮುಂದೆ ನೋಡೋಣ, ಆದರೆ ಶ್ರೀರಾಮುಲು ಈಗಲೇ ಪಾದಯಾತ್ರೆ ಹೊರಡುವ ಜರೂರತ್ತಾದರೂ ಏನಿತ್ತು? ಅದರಲ್ಲಿಯೂ ನಿಜಕ್ಕೂ ಅವರು ಹೇಳುವಂತಹ ಬರವೇ ? , ಜನರ ನೋವುಗಳ ಅರಿಯುವ ಹಂಬಲವೇ?. ಅಥವಾ ಪಾತಕಗಳ ಪಾಪ ಪ್ರಜ್ಞೆಯೇ?, ನಾಟಕವೇ ?.

ಪಾದಯಾತ್ರೆ ಅನುಭವ ಮಂಟಪದಿಂದ ಹೊರಡಲಾಯಿತಾದರೂ ಶ್ರೀರಾಮುಲು ಹೇಳಿಕೊಂಡಂತೆ 'ಯಾತ್ರೆ ಆರಂಭಿಸುವ ಮೊದಲು ಗೆಳೆಯ ಜನಾರ್ಧನ ರೆಡ್ಡಿಯನ್ನು ಚಂಚಲಗಡದ ಜೈಲಿನಲ್ಲಿ ಭೇಟಿಯಾಗಿ ಆಶೀರ್ವಾದ ಪಡೆದಾಯಿತು. ನಂತರ ರೆಡ್ಡಿಯ ಮನೆಯಲ್ಲಿ ಪೂಜೆ ಮಾಡಿಯೇ ಯಾತ್ರೆಗೆ ಮುಂದೆಜ್ಜೆ ಇಡಲಾಯಿತು!

– ಪುಟ 10 ಕ್ಕೆ



ಕೃಪೆ : ದಿ ಹಿಂದೂ

ಉದಾರೀಕರಣದ ಯುಗದಲ್ಲಿ ಸಾಗುವಳಿ ಚೀಟಿ–ಹಕ್ಕುಪತ್ರ ಕೊಡುವುದನ್ನೇ ಕೈ ಬಿಟ್ಟಿರುವ ಸರ್ಕಾರಗಳು...

ಏಪ್ರಿಲ್ 20 ರಂದು ಮಂಡ್ಯದಲ್ಲಿ 'ಭೂ ಹೋರಾಟ'ದ ಜಾಥಾದ ಉದ್ಘಾಟನೆಗೊಂಡಿದೆ. ಕರ್ನಾಟಕ ಪ್ರಾಂತ ರೈತ ಸಂಘ, ಪ್ರಾಂತ ಕೂಲಿಕಾರರ ಸಂಘಗಳ ನೇತೃತ್ವದ ಈ ಜಾಥಾ ಬೆಂಗಳೂರಿನಲ್ಲಿ ಮೇ 21 ರಂದು ಆರಂಭವಾಗಲಿರುವ ಅನಿರ್ದಿಷ್ಟಾವಧಿ ಧರಣದ ಹಿನ್ನೆಲೆಯಲ್ಲಿ ನಡೆಯುತ್ತಿದೆ. ಸಮಾರಂಭದ ಒಂದು ವರದಿ.

ಬರದ ಸಮಯದಲ್ಲಿ ಸರ್ಕಾರ ರಾಜ್ಯದಲ್ಲಿರುವ 40 ಲಕ್ಷ ರೇಷನ್ ಕಾರ್ಡ್‌ಗಳನ್ನು ರದ್ದುಗೊಳಿಸಲು ತೀರ್ಮಾನಿಸಿದ್ದು, ಕೂಡಲೇ ಈ ತೀರ್ಮಾನವನ್ನು ವಾಪಸ್ ಪಡೆಯಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ ಆಗ್ರಹಿಸಿದರು. ಮಂಡ್ಯದ ಕೇಂದ್ರ ಅಂಚೆ ಕಚೇರಿ ಬಳಿ 'ಭೂಮಿಗಾಗಿ ಹೋರಾಟ- ಜನಜಾಗೃತಿ ಜಾಥಾ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಪಿಎಲ್ ಮತ್ತು ಬಿಪಿಎಲ್ ಎಂಬ ತಾರತಮ್ಯ ಮಾಡದೆ ಗೋದಾಮುಗಳಲ್ಲಿ ಕೊಳೆಯುತ್ತಿರುವ ಲಕ್ಷಾಂತರ ಟನ್ ಆಹಾರ ಪದಾರ್ಥಗಳನ್ನು 2 ರೂ. ದರದಲ್ಲಿ ನೀಡುವಂತೆ ಸುಪ್ರೀಂಕೋರ್ಟ್ ತೀರ್ಪು ನೀಡಿದ್ದರೂ, ಆ ಬಗ್ಗೆ ಸರ್ಕಾರ ಮೌನ ವಹಿಸಿದೆ ಎಂದ ಅವರು ಬರದ ಸಮಯದಲ್ಲಿ ಬಡವರಿಗೆ ಆಹಾರ ಪದಾರ್ಥಗಳನ್ನು ವಿತರಿಸದೆ ಸಂಕಷ್ಟಕ್ಕೆ ಗುರಿಪಡಿಸಿರುವುದನ್ನು ತೀವ್ರವಾಗಿ ಖಂಡಿಸಿದರು.

ಸರ್ಕಾರ ಬರಗಾಲವನ್ನು ಬಂಡವಾಳ ಮಾಡಿಕೊಳ್ಳಲು ಯತ್ನಿಸುತ್ತಿದ್ದು, ಬರ ಪರಿಹಾರ ಕಾಮಗಾರಿಗಳನ್ನು ಕಮೀಷನ್ ಮಾಡಿಕೊಳ್ಳಲು ಯತ್ನಿಸುತ್ತಿದೆ ಎಂದು ಟೀಕಿಸಿದ ಅವರು, ರಾಜ್ಯದಲ್ಲಿರುವ 1.10 ಲಕ್ಷಕೋಟಿ ಬಡ ಕುಟುಂಬಗಳ ಪೈಕಿ 36 ಲಕ್ಷ ಕುಟುಂಬಗಳಿಗೆ ಒಂದಡಿ ಜಾಗವಿಲ್ಲ. ಸಾರ್ವಜನಿಕ ಸ್ಮಶಾನಗಳು ಒತ್ತುವರಿಯಾಗಿವೆ. ಬೆವರು ಸುರಿಸಿ ದುಡಿವ ಕುಟುಂಬಗಳಿಗೆ ಭೂಮಿಯೇ ಇಲ್ಲವಾಗಿದ್ದು, ಸಾವಿರಾರು ಎಕರೆ ಭೂಮಿಗಳೆಲ್ಲವೂ ಬಂಡವಾಳಶಾಹಿಗಳ ಪಾಲಾಗಿದೆ ಎಂದರು.



ಬೆಂಗಳೂರು-ಮೈಸೂರು ಹೆದ್ದಾರಿ ನಿರ್ಮಾಣ ನೆಪದಲ್ಲಿ ರಾಜ್ಯ ಸರ್ಕಾರ ಅಶೋಕ್ ಖೇಣಿಗೆ 21 ಸಾವಿರ ಎಕರೆ ಭೂಮಿ ನೀಡಿದರೆ ಬೇನಾಮಿ ಹೆಸರಿನಲ್ಲಿ 4 ಸಾವಿರ ಎಕರೆ ಭೂಮಿ ಖೇಣಿ ಪಾಲಾಗಿದೆ.

ಗೋಪಾಲನ್ ಮಾಲ್ ಮಾಲೀಕ ಬೆಂಗಳೂರು ಸುತ್ತಮುತ್ತ 800 ಎಕರೆ ಭೂಮಿಯನ್ನು ಹೊಂದಿದ್ದಾರೆ, ವಿಜಯ್ ಮಲ್ಯ ಕೂಡ ನೂರಾರು ಎಕರೆ ಭೂಮಿಯನ್ನು ಹೊಂದಿದ್ದಾರೆ ಎಂದು ಅವರು ಹೇಳಿದರು.

ಜಿಲ್ಲೆಯಲ್ಲಿ ಸುಮಾರು 97,850 ಬಗರ್‌ಹುಕುಂ ಸಾಗುವಳಿದಾರರ ಬಳಿ 1,82,050 ಎಕರೆ ಭೂಮಿ ಸ್ವಾಧೀನ ಅನುಭವದಲ್ಲಿದ್ದಾರೆ. ಆದರೆ, ಇವರಿಗೆ ಇನ್ನೂ ಹಕ್ಕುಪತ್ರ ನೀಡಿಲ್ಲ. ಆ ಅರ್ಜಿಗಳೆಲ್ಲವನ್ನೂ ತಿರಸ್ಕರಿಸುವ ಮೂಲಕ ಬಡವರಿಗೆ ಭೂಮಿ ಇಲ್ಲದಂತೆ ಮಾಡಿದ್ದಾರೆ ಎಂದು ಕಿಡಿಕಾರಿದರು.

ನಾಮಕಾವಸ್ತೆ ಸಭೆ:- ಬೆಂಗಳೂರಿನಲ್ಲಿ ಸರ್ವಪಕ್ಷಗಳ ಸಭೆ ಕೇವಲ ನಾಮಕಾವಸ್ಥೆಯ ಬರ ಪರಿಶೀಲನಾ ಸಭೆಯಾಗಿದ್ದು, ಯಾವುದೇ ಸಮಸ್ಯೆಗಳಿಗೂ ಮುಖ್ಯಮಂತ್ರಿಗಳಿಂದ ಸಮರ್ಪಕ ಉತ್ತರ ದೊರೆಯಲಿಲ್ಲವೆಂದು ಅವರು ವಿಷಾದಿಸಿದರು.

ಉದ್ಯೋಗವಿಲ್ಲದೇ ಗುಳೆ ಹೊರಟಿರುವ ಜನರಿಗೆ ಉದ್ಯೋಗವಕಾಶ ಕಲ್ಪಿಸುವಂತೆ, ಬಾಕಿ ಇರುವ ಉದ್ಯೋಗ ಖಾತ್ರಿ ಹಣವನ್ನು ಕೂಡಲೇ ಬಿಡುಗಡೆ ಮಾಡುವಂತೆ ಸರ್ಕಾರದ ಗಮನ ಸೆಳೆಯಲಾಯಿತಾದರೂ ಮುಖ್ಯಮಂತ್ರಿಯವರೂ ಈ ವಿಷಯಗಳ ಬಗ್ಗೆ ಸ್ಪಷ್ಟ ತೀರ್ಮಾನ ಕೈಗೊಳ್ಳುವ ಪ್ರಯತ್ನ ಮಾಡಲೇ ಇಲ್ಲ. ಹಾಗಾಗಿ ಸರ್ವಪಕ್ಷಗಳ ಸಭೆ ಕೇವಲ ಜನರ ಕಣ್ಣೊರೆಸುವ ಸಭೆಯಾಗಿತ್ತೇ ವಿನಃ ಅಲ್ಲಿ ಯಾವುದೇ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಲಿಲ್ಲ ಎಂದು ತಿಳಿಸಿದರು.

ಖಾಸಗೀಕರಣ, ಉದಾರೀಕರಣ, ಜಾಗತೀಕರಣ ನೀತಿಗಳು ಜಾರಿಯಾದ ನಂತರ ಬಡವರಿಗೆ ಭೂಮಿಯ ಹಕ್ಕುಪತ್ರ ನೀಡುವುದನ್ನೇ ಸರ್ಕಾರದವರು ಕೈಬಿಟ್ಟಿದ್ದಾರೆ. ಬಲವಂತವಾಗಿ ಬಡವರಿಂದ ಭೂ ಸ್ವಾಧೀನ ನಡೆಸುತ್ತಿದ್ದಾರೆ. ಇವರ ವಿರುದ್ಧ ಜನಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ. ಬಡವರು, ಕೂಲಿ


ರೇಷನ್ ಕಾಡ ಕಡಿತ ವಿರೋಧಿಸಿ ಮಳವಳ್ಳಿಯಲ್ಲಿ ಸಿಪಿಐ(ಎಂ) ಪ್ರತಿಭಟನೆ

ಕಾರ್ಮಿಕರು, ರೈತರು, ದಲಿತರನ್ನು ಸಂಘಟಿಸಿ ಮೇ 21 ರಿಂದ ಬೆಂಗಳೂರಿನಲ್ಲಿ ನಡೆಯುವ ಅನಿರ್ದಿಷ್ಟ ಮಹಾಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಸರ್ಕಾರದ ಒತ್ತಡ ತರುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಬಯ್ಯಾರೆಡ್ಡಿ ಹೇಳಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ ಕೃಷಿ ಕೂಲಿಕಾರರ ಸಂಘದ ಕಾರ್ಯದರ್ಶಿ ಪುಟ್ಟಮಾದು, ಟಿ.ಎಲ್.ಕೃಷ್ಣೇಗೌಡ, ರಾಜೇಂದ್ರಸಿಂಗ್, ಸಿ.ಕುಮಾರಿ, ಟಿ.ಯಶವಂತ್, ನೂರ್‌ಜಹಾನ್ ಮತ್ತಿತರರು ಉಪಸ್ಥಿತರಿದ್ದರು.

ತಲೆಯ ಮೇಲೊಂದು ಸೂರು..........

ಪುಟ 2 ರಿಂದ

ಸು. 1.5 ಲಕ್ಷದಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ. ಈಗ ಮತ್ತೆ ಸು. ಒಂದು ಲಕ್ಷ ಬಡಜನರಿಂದ ಮನೆ ನಿವೇಶನ ಕೋರಿ ಅರ್ಜಿ ಹಾಕಿಸುವ ಸಿದ್ಧತೆಗಳು ನಡೆಯುತ್ತಿವೆ. ಮನೆ ನಿವೇಶನವಿಲ್ಲದ ಬಡವರು ಒಂದಾಗಿ ಸಾಮೂಹಿಕವಾಗಿ ಅರ್ಜಿ ಸಲ್ಲಿಸುವುದು, ಬಡ ಜನವಿಭಾಗಗಳಲ್ಲಿ ಒಗ್ಗಟ್ಟು ಮೂಡಿಸುವ ದೃಷ್ಟಿಯಿಂದ ಬಹಳ ಮಹತ್ವದ ಕೆಲಸವಾಗಿದೆ. ಅದನ್ನು ಜನಪರ ಸಂಘಟನೆಗಳು ಒಂದು ಆದ್ಯತೆಯ ಪ್ರಶ್ನೆಯನ್ನಾಗಿ ತೆಗೆದುಕೊಳ್ಳಬೇಕು.

ಮನೆ ನಿವೇಶನದ ಪ್ರಶ್ನೆ ನಗರ, ಪಟ್ಟಣ, ಗ್ರಾಮಾಂತರ ಎಲ್ಲ ಪ್ರದೇಶಗಳ ಜನರನ್ನು ಕಾಡುತ್ತಿರುವ ಸಮಸ್ಯೆಯಾಗಿದೆ. 2010 ರ ಸಂದರ್ಭದಲ್ಲಿ ಭೂಮಿ ಹೋರಾಟ ನಡೆದಾಗ ಅದರಲ್ಲಿ ಮನೆ ನಿವೇಶನದ ಪ್ರಶ್ನೆಯೂ ಪ್ರಧಾನವಾಗಿತ್ತು.


ಏಪ್ರಿಲ್, ಮೇ-2012ರ ಈ ಹಂತದ ಭೂಮಿ ಹೋರಾಟದಲ್ಲಿಯೂ ಮನೆ ನಿವೇಶನದ ಪ್ರಶ್ನೆ ಒಂದು ಪರಮುಕ ಬೇಡಿಕೆಯಾಗಿದೆ.

ರಾಜ್ಯದ ಬಿಜೆಪಿ ಸರ್ಕಾರಕ್ಕೆ ಬಡವರ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಘ ಪರಿವಾರದ ಅಡ್ಡೆಯಾಗಿರುವ ತುಮಕೂರು ವಿಶ್ವವಿದ್ಯಾಲಯದ ಶಿಕ್ಷಣ ವಿರೋಧಿ ರಗಳೆಗಳು

ವಿಶ್ವ ವಿದ್ಯಾಲಯಗಳೆಂದರೆ ಉನ್ನತ ಅಧ್ಯಯನ ಕೇಂದ್ರಗಳು. ವೈಚಾರಿಕತೆ, ಜಾತ್ಯತೀತತೆ, ಸಾಮಾಜಿಕ ನ್ಯಾಯದಂತಹ ಉನ್ನತ ಸಾಂವಿಧಾನಿಕ ಮೌಲ್ಯಗಳ ಆಧಾರದಲ್ಲಿ ನಡೆಯ ಬೇಕಾದ ವಿಶ್ವ ವಿದ್ಯಾಲಯಗಳಲ್ಲಿ ಮೂಢ ನಂಬಿಕೆ, ಜಾತಿವಾದ, ಸ್ವಜನ ಪಕ್ಷಪಾತ, ಮೆರೆಯುವಂತೆ ಆಗಿರುವುದು ಒಂದು ದುರಂತದ ಸ್ಥಿತಿ. ಆರೆಸ್ಸೆಸ್ ಪ್ರೇರಿತ ವಿಚಾರ ಧಾರೆ ರಾಜ್ಯದ ತುಮಕೂರು ವಿಶ್ವ ವಿದ್ಯಾಲಯದಲ್ಲಿ ಹೇಗೆ ವಿಶಾಲ ವಿದ್ಯಾರ್ಥಿ ಸಮುದಾಯಕ್ಕೆ ಶಿಕ್ಷಣವನ್ನೇ ವಂಚಿಸಿದೆ. ಮತ್ತು ಹೇಗೆ ವಿಶ್ವ ವಿದ್ಯಾಲಯವೊಂದರ ಘನತೆಯನ್ನು ನಾಶ ಮಾಡುತ್ತಿದೆ ನೋಡಿ.



ಬದಲಾದ ಲಾಂಛನ ಅಂದು-ಇಂದು

ಪುಟ್ಟಯ್ಯ

ತುಮಕೂರು ವಿಶ್ವವಿದ್ಯಾಲಯ ಆರ್‌ಎಸ್‌ಎಸ್‌ನ ಪ್ರಾಯೋಗಿಕ ಕೇಂದ್ರವೂ ಹೌದು, ಬಿಜೆಪಿಯ ಕಚೇರಿಯೂ ಹೌದು.! ಇದು ಈಗ ಮೌಢ್ಯ ಬಿತ್ತುವ, ಸನಾತನ ಏಕಮುಖಿ ಸಂಸ್ಕೃತಿಯನ್ನು ಹೇಳಿಕೊಡುವ ಪಾಠ ಶಾಲೆಯಂತೆಯೂ ಕೆಲಸ ಮಾಡುತ್ತಿದೆ. ಹೀಗೆಂದು ಹೇಳಿದರೆ ಅತಿಶಯೋಕ್ತಿ ಏನೂ ಅಲ್ಲ.

ಬೆಂಗಳೂರು ವಿಶ್ವವಿದ್ಯಾಲಯದ ಒತ್ತಡ ಕಡಿಮೆಗೊಳಿಸಲು ತುಮಕೂರು ಸ್ನಾತಕೋತ್ತರ ಕೇಂದ್ರ ಆರಂಭಿಸಲಾಯಿತು. ಮೊದಲು ಎಸ್‌ಐಟಿ ಕಾಲೇಜಿನಲ್ಲಿ, ನಂತರ ಸರ್ಕಾರಿ ಜ್ಯೂನಿಯರ್ ಕಾಲೇಜು ಮೈದಾನದಲ್ಲಿರುವ ಹಳೆಯ ಕಟ್ಟಡಕ್ಕೆ ಈ ಕೇಂದ್ರವನ್ನು ಸ್ಥಳಾಂತರ ಮಾಡಲಾಯಿತು. ಭಳಿಕ 2004ರಲ್ಲಿ ಇದನ್ನು ತುಮಕೂರು ವಿ.ವಿ.ಯನ್ನಾಗಿ ಸರ್ಕಾರ ಅಧಿಕೃತವಾಗಿ ಘೋಷಿಸಿತು. ಮೊದಲ ಕುಲಪತಿಯಾಗಿ ಡಾ.ಓ.ಅನಂತರಾಮಯ್ಯ ನೇಮಕಗೊಂಡರೂ ತಮ್ಮ ಅವಧಿಯಲ್ಲಿ ಯಾವ ಕೆಲಸ ಮಾಡಲು ಕೂಡ ದುಷ್ಟಶಕ್ತಿಗಳು ಬಿಡಲಿಲ್ಲ. ಇದು ಅನಂತರಾಮಯ್ಯನವರಿಗೆ ಬೇಸರ ತಂದರೂ ಅದನ್ನು ತೋರಿಸಿಕೊಳ್ಳಲಿಲ್ಲ. ಜಿಲ್ಲೆಯ ಪ್ರಗತಿಪರರು, ಜನಪ್ರತಿನಿಧಿಗಳನ್ನು, ಶಿಕ್ಷಣ ತಜ್ಞರ ವಿಶ್ವಾಸ ಗಳಿಸಿ ಪ್ರಗತಿ ಮಾಡಲೂ ಅಷ್ಟಾಗಿ ಆಸಕ್ತಿ ತೋರಿಸಲಿಲ್ಲ. ಇಂತಹ ಗೊಂದಲಗಳಲ್ಲಿಯೇ ಅನಂತರಾಮಯ್ಯ ನವರ ಅವಧಿಯೂ ಮುಗಿದು ಹೋಯಿತು. ಬಳಿಕ ಡಾ.ಎಸ್.ಸಿ ಶರ್ಮಾ ಬಂದರು. ಆರ್‌ಎಸ್‌ಎಸ್ ಗರ್ಭಗುಡಿಯಲ್ಲಿ 'ಆಚಾರ್ಯ' ದೇವೋಭವ ಮಂತ್ರ ಕಲಿತು ಬಂದ ಡಾ.ಎಸ್.ಸಿ. ಶರ್ಮಾ ಅವರಿಂದ ಈಗ ಜನದ್ರೋಹಿಯಾದ ಕರ್ಮಠ ವೈದಿಕ ಸಂಸ್ಕೃತಿಗೆ ನೀರು ಎರೆದು ಪೋಷಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ.

ಗುಳ್ಳೆನರಿ ಬುದ್ಧಿಯ ಈತ ವಿವಿಗೆ ಕುಲಪತಿಯಾಗಿ ವಕ್ಕರಿಸುತ್ತಿದ್ದಂತೆ ಮೊದಲು ವಿ.ವಿ.ಯನ್ನು 'ಶುದ್ಧೀಕರಿಸುವ' ಕಾರ್ಯಕ್ಕೆ ಕೈಹಾಕಿದ. 'ತನ್ನವರು' ಎಷ್ಟಿದ್ದಾರೆ? ತಾನೇನು ಮಾಡಬೇಕು ಎಂದು ಆಲೋಚಿಸಿ ಅನಂತರಾಮಯ್ಯ ಕಾಲದಲ್ಲಿ ನಡೆದಿದ್ದ ನೇಮಕಾತಿಗೆ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದು ತಾನು ತನ್ನದೇ ನೇಮಕಾತಿ ಮಾಡಿಕೊಂಡ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕಾತಿಯಲ್ಲಿ ಬಿಜೆಪಿ, ಆರ್‌ಎಸ್‌ಎಸ್ ವಿಚಾರಧಾರೆಗೆ ಮನ್ನಣೆ ನೀಡುವ, ಹೇಳಿದ ಮಾತು ಕೇಳುವಂತಹ, ತಾನು ಮಾಡುವ ಯಾವುದೇ ಕೆಲಸವನ್ನು ಪ್ರಶ್ನಿಸದಂತಹ ಅಭ್ಯರ್ಥಿಗಳಿಗೆ ಹೆಚ್ಚು ಮನ್ನಣೆ ನೀಡಿರುವುದು ಗುಟ್ಟಾಗಿ ಉಳಿದಿಲ್ಲ. ಬೋಧಕ ಸಿಬ್ಬಂದಿ ನೇಮಕಾತಿಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾದ ಸ್ಥಾನಗಳಲ್ಲಿ ಶೇಕಡ 75ಕ್ಕೂ ಹೆಚ್ಚು ಹುದ್ದೆಗಳನ್ನು ಬ್ರಾಹ್ಮಣರಿಗೆ ನೀಡಿರುವುದು ಕುಲಪತಿ ಶರ್ಮಾ ಎಷ್ಟು ಜಾತಿವಾದಿ ಎಂಬುದನ್ನು ತೋರಿಸುತ್ತದೆ.

ವಿವಿಯೊಳಗೆ ದೇವಾಲಯ, ನಾಗಬನ, ಅರ್ಚಕರು.....ಇತ್ಯಾದಿ

ವಿವಿಯ ಒಳಗೆ ಪ್ರವೇಶಿಸುತ್ತಿದ್ದಂತೆ ಆಳೆತ್ತರದ ಹನುಮಂತನ ವಿಗ್ರಹ ಎಲ್ಲರನ್ನು ಸ್ವಾಗತಿಸುತ್ತದೆ. ಇದಕ್ಕೆ ಪೂಜೆ ಸಲ್ಲಿಸಲು ಬ್ರಾಹ್ಮಣ ಅರ್ಚಕರೊಬ್ಬರನ್ನು ನೇಮಕ ಮಾಡಿ ತಿಂಗಳಿಗೆ ಇಂತಿಷ್ಟೆಂದು ಹಣ ನೀಡಲಾಗುತ್ತಿದೆ. ಅರ್ಚಕ ಪೂಜೆ ಸಲ್ಲಿಸಿದ ನಂತರವೇ ವಿವಿಯಲ್ಲಿ ಕೆಲಸಗಳು ಆರಂಭವಾಗುವುದು ಎಂದರೆ ಈ ಶರ್ಮಾ ಎಷ್ಟೊಂದು ಕರ್ಮಠವಾದಿ ಎಂಬುದು ತಿಳಿಯುತ್ತದೆ. ಜಡ್ಡುಗಟ್ಟಿದ ವ್ಯವಸ್ಥೆಯ ಕನ್ನಡಿಯಂತಿರುವ ಡಾ.ಶರ್ಮಾ ತನ್ನೊಳಗಿನ ಮಾನವ ದ್ವೇಷಿ ಸಿದ್ಧಾಂತಗಳನ್ನು ಬಹುಜನರ ಮೇಲೆ ಹೇರುವ ಕೆಲಸ ವಿವಿಯಲ್ಲಿ ಮಾಡುತ್ತಿದ್ದಾರೆ.



ಮರವೊಂದಕ್ಕೆ ಮಾಟ ಮಾಡಿಸಿ ಅರಿಸಿನ, ಕುಂಕುಮ ಹಚ್ಚಿದ ಯಂತ್ರಗಳನ್ನು ಕಟ್ಟಲಾಗಿದೆ. ದೆವ್ವಗಳು, ಪ್ರೇತಗಳು ವಿವಿಯೊಳಕ್ಕೆ ನುಸುಳಬಾರದೆಂಬುದೇ ಇದರ ಉದ್ದೇಶವಂತೆ. ಇದನ್ನು ಶರ್ಮಾ ವಂದಿ ಮಾಗಧರು, ಹೊಗಳು ಭಟ್ಟರು ಸಮರ್ಥಿಸಿಕೊಂಡು ವಿಶೇಷ ಸುಖ ಅನುಭವಿಸುತ್ತಾರೆ. ವಿವಿ ಸಂಯೋಜಿತ ಕಲಾ ಕಾಲೇಜು ಮುಂಭಾಗದಲ್ಲಿ 'ನಾಗ ಬನ' ರೂಪಿಸಲಾಗಿದ್ದು, ಇದರಲ್ಲಿ ನಾಗರ ಕಲ್ಲುಗಳನ್ನು ಇಟ್ಟಿದ್ದಾರೆ. ಇದು ಕೂಡ ಕುಲಪತಿ ಶರ್ಮಾ ಅವರ ಕನಸಿನ ಕೂಸು. ಇಂಜಿನಿಯರ್ ಪದವಿ ಜೊತೆಗೆ ಏಳೆಂಟು ಡಾಕ್ಟರೇಟ್ ಪದವಿ ಪಡೆದಿರುವ ಸರ್ವಾಧಿಕಾರಿ ಡಾ.ಶರ್ಮಾ ತಾನು ಹೇಳಿದ್ದೇ ವೇದ ವಾಕ್ಯ ತನ್ನ ಮಾತನ್ನು ಎಲ್ಲರೂ ಕೇಳಬೇಕು. ಇಲ್ಲದಿದ್ದರೆ ವಿವಿಯಿಂದ ಹೊರಗಟ್ಟುವ ಕೆಲಸ ಮಾಡುವುದಾಗಿ ಸಿಬ್ಬಂದಿಗೆ ಬೆದರಿಕೆ ಹಾಕುತ್ತಿರುವುದನ್ನು ವಿವಿಯ ಕಲ್ಲುಕಲ್ಲುಗಳು ಸಾರಿ ಹೇಳುತ್ತಿವೆ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಆಡಿಕೊಳ್ಳುತ್ತಿರುವ ಮಾತುಗಳನ್ನು ಕೇಳಿಸಿಕೊಳ್ಳುವ ಗೋಡೆಯ ಕಲ್ಲುಗಳು ಮರುಗುತ್ತಿವೆಯಂತೆ!?

ಬಿಜೆಪಿ ಕಛೇರಿಯಾಗಿ

ತುಮಕೂರು ವಿವಿ ಬಿಜೆಪಿಯ ಕಚೇರಿಯಂತೆ ಕೆಲಸ ನಿರ್ವಹಿಸುತ್ತಿದೆ. ಸರ್ಕಾರದಿಂದ ನೇಮಕಗೊಂಡಿರುವ ಸಿಂಡಿಕೇಟ್ ಸದಸ್ಯರು ಕುಲಪತಿಗಳು ಕೈಗೊಳ್ಳುವ ಯಾವುದೇ ನಿರ್ಣಯಗಳ ಸಂಬಂಧ ಸೊಲ್ಲೆತ್ತದೆ ಸಹಿ ಹಾಕುತ್ತಿರುವುದನ್ನು ನೋಡಿದರ ಇಲ್ಲಿ ಪ್ರಜಾಪ್ರಭುತ್ವವೇ ಇಲ್ಲವೇನೋ ಎಂದೆನಿಸುತ್ತದೆ.

ಇತ್ತೀಚೆಗೆ ನಿಧನರಾದ ಉನ್ನತ ಶಿಕ್ಷಣ ಸಚಿವ


ಪುಟ 14 ೯



ವಿವಿ ಮತ್ತು ಕುಲಪತಿ ಶರ್ಮಾ

ಮಳೆ ನೀರ ತಿರುವೇ ಹೊರತು ನೇತ್ರಾವತಿ ತಿರುವಲ್ಲ

ಕರಾವಳಿ–ಮಲೆನಾಡು ಜಿಲ್ಲೆಗಳ ನೀರಿನ ಸಮಸ್ಯೆ ಕುರಿತ ಸಮಾವೇಶದಲ್ಲಿ ಸ್ಪಷ್ಟ ಅಭಿಪ್ರಾಯ



ವರದಿ: ವಾ.ಉ.

ನೀರಾವರಿ ತಜ್ಞರಾದ ಡಾ. ಜಿ.ಎಸ್. ಪರಮಶಿವಯ್ಯನವರು ಕರ್ನಾಟಕದಲ್ಲಿ ಕುಡಿಯುವ ನೀರು ಮತ್ತು ನೀರಾವರಿಗೆ ಲಭ್ಯವಿರುವ ನೀರನ್ನು ಬಳಕೆ ಮಾಡುವ ಸಂಬಂಧ ಅಧ್ಯಯನ ನಡೆಸುತ್ತಿದ್ದು, ಕುಡಿಯುವ ನೀರಿನ ತೀವ್ರ ಕೊರತೆಯಿರುವ ಮಧ್ಯಕರ್ನಾಟಕಕ್ಕೆ ನೀರೊದಗಿಸುವ ಬಗೆಗಿನ ವರದಿಯೊಂದನ್ನು 2004 ರಲ್ಲೇ ರಾಜ್ಯ ಸರಕಾರಕ್ಕೆ ಸಲ್ಲಿಸಿದ್ದರು. ಅವರ ವರದಿಯಲ್ಲಿನ ಪ್ರೊಜೆಕ್ಟ್ 6 ಮತ್ತು 7 ಕ್ರಮವಾಗಿ ಕರಾವಳಿ ಜಿಲ್ಲೆಗಳಿಗೆ ಕುಡಿಯುವ ನೀರು ಹಾಗೂ ನೀರಾವರಿ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದ್ದು, ಅದರ ಬಗ್ಗೆ ವಿಸ್ತೃತ ವರದಿಯನ್ನು ಮುಂದೆ ಸಲ್ಲಿಸುವುದಾಗಿ ತಿಳಿಸಿದ್ದಾರೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು ಜಿಲ್ಲೆಗಳ ಬಹುತೇಕ ಭಾಗಗಳಲ್ಲಿ, ಚಿತ್ರದುರ್ಗ, ದಾವಣಗೆರೆ ಮತ್ತಿತರ ಜಿಲ್ಲೆಗಳಲ್ಲಿ ಅಂತರ್ಜಲ ತೀರಾ ಕೆಳಮಟ್ಟ ತಲುಪಿದ್ದು, ಕುಡಿಯುವ ನೀರಿಗೆ ಮತ್ತು ಕೃಷಿಗೆ ತುಂಬಾ ತೊಂದರೆಯಾಗಿದೆ. ಡಾ.ಪರಮಶಿವಯ್ಯನವರ ವರದಿಯಲ್ಲಿ ಕಾಣಿಸಿದ ಪ್ರೊಜೆಕ್ಟ್ 1,2,3 ಮತ್ತು 4 ರಲ್ಲಿ ಪಶ್ಚಿಮಘಟ್ಟಗಳಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿಯುವ ಹಳ್ಳ (ನದಿ ಹಾಗೂ ಉಪ ನದಿಗಳೆಂದು ಕರಾವಳಿಯಲ್ಲಿ ಕರೆಯುತ್ತಾರೆ)ಗಳ ಉಗಮಸ್ಥಾನದಲ್ಲಿ (ಅಂದರೆ ಪಶ್ಚಿಮ ಘಟ್ಟಗಳಲ್ಲಿ) ಲಭ್ಯವಿರುವ ಮಳೆಯ ನೀರನ್ನು ಗಾರ್ಲಂಡ್ ನಾಲೆಗಳಲ್ಲಿ ಸಂಗ್ರಹಿಸಿ ಪೂರ್ವಾಭಿಮುಖವಾಗಿ ಸರ್ವಿಸ್ ನಾಲೆಗಳ ಮೂಲಕ ಮೇಲೆ ಹೇಳಿದ ಮಧ್ಯ ಕರ್ನಾಟಕದ ಜಿಲ್ಲೆಗಳಿಗೆ ಹರಿಸುವ ಯೋಜನೆ ಇರುತ್ತದೆ. ಈ ವರದಿಯನ್ನು ಸರಿಯಾಗಿ ಅಧ್ಯಯನ ಮಾಡದೆ ಇರುವುದರಿಂದ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳನ್ನು ಘಟ್ಟಗಳಲ್ಲೇ ತಡೆಹಿಡಿದು ಪೂರ್ವಕ್ಕೆ ಹರಿಯಿಸುವುದರಿಂದ, ಕರಾವಳಿ ಭಾಗದಲ್ಲಿ ನೀರಿನ ಕೊರತೆ ಹಾಗೂ ಜಲಕ್ಷಾಮ ಉಂಟಾಗಬಹುದು ಎಂಬ ಚರ್ಚೆಯನ್ನು ಕರಾವಳಿ ಜಿಲ್ಲೆಯಲ್ಲಿ ಕೆಲವು ಕಲಹ ಪ್ರಿಯರು ಹುಟ್ಟು ಹಾಕಿದ್ದಾರೆ. ಪರಿಸರವಾದಿಗಳು ಎಂದು ಗುರುತಿಸಲ್ಪಟ್ಟ ಕೆಲವರು ಹಾಗೂ ಕೆಲವು ಪತ್ರಕರ್ತರು ಎಬ್ಬಿಸಿರುವ ಬೊಬ್ಬೆಯಿಂದಲಾಗಿ, ಕರಾವಳಿಯ ಜನ ಆತಂಕಗೊಂಡಿದ್ದಾರೆ.

ಸಮಾವೇಶ

ಈ ಹಿನ್ನೆಲೆಯಲ್ಲಿ ಕರಾವಳಿ ಜಿಲ್ಲೆಗಳ ನೀರಿನ ಸಮಸ್ಯೆಯ ಸ್ವರೂಪ ಯಾವುದು, ಅಲ್ಲಿನ ನೀರಿನ ಕೊರತೆಯನ್ನು ಶಾಶ್ವತವಾಗಿ ನಿವಾರಿಸಲು ಕೈಗೊಳ್ಳಬೇಕಾಗಿರುವ ಯೋಜನೆಗಳೇನು – ಈ ಬಗ್ಗೆ ಚರ್ಚಿಸಿ ಒಂದು ಅಂದಾಜನ್ನು ಸಿದ್ಧಪಡಿಸುವ ಸಂಬಂಧ ಸಿಪಿಐ(ಎಂ) ಪಕ್ಷದ ಉ.ಕ., ಉಡುಪಿ, ದ.ಕ., ಕೊಡಗು ಜಿಲ್ಲಾ ಸಮಿತಿ ಹಾಗೂ ವಲಯ ಸಮಿತಿ ಸದಸ್ಯರ ಸಮಾವೇಶವನ್ನು ಏಪ್ರಿಲ್ 20, 2012 ರಂದು ಮಂಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಚರ್ಚೆಗೆ ಆಧಾರವಾಗಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅವರು ದ.ಕ.ಜಿಲ್ಲೆಯ ಮಾಹಿತಿಯನ್ನೇ ಕೇಂದ್ರವಾಗಿ ಉಳ್ಳ ಒಂದು ಟಿಪ್ಪಣಿಯನ್ನು ಮಂಡಿಸಿದ್ದರು.

ಮಂಗಳೂರು ತಾಲೂಕಿನ ಉಳ್ಳಾಲ ಪ್ರದೇಶದ ಹಲವಾರು ಗ್ರಾಮಗಳಲ್ಲಿ ಬೇಸಗೆಯಲ್ಲಿ ತೀವ್ರ ನೀರಿನ ಅಭಾವವಿದೆ. ಮಂಗಳೂರು ಮಹಾನಗರ ಪಾಲಿಕೆಯು ನೇತ್ರಾವತಿ ನದಿಯ ತುಂಬೆ ಅಣೆಕಟ್ಟಿನಿಂದ ಕುಡಿಯುವ ನೀರನ್ನು ಪಡೆಯುತ್ತಿದ್ದು, ಸಮೀಪದ ಒಂದೆರಡು ಪುರಸಭೆ, ಗ್ರಾಮ ಪಂಚಾಯತಿಗೂ ಒದಗಿಸುತ್ತಿದೆಯಾದರೂ, ಮಂಗಳೂರು ನಗರದ ಕೆಲವು ವಾರ್ಡ್‌ಗಳಲ್ಲಿ ನಳ್ಳಿ ನೀರು ಪೂರೈಕೆ ಕಡಿಮೆಯಾಗಿದ್ದು, ನಾಗರಿಕರು ಟ್ಯಾಂಕರ್ ಮೂಲಕ ನೀರು ಖರೀದಿಸುತ್ತಿದ್ದಾರೆ. ತುಂಬೆ ಅಣೆಕಟ್ಟಿನಲ್ಲಿ ನೀರಿನ ಸಂಗ್ರಹ ತೀರಾ ಕಡಿಮೆಯಾಗಿದ್ದು, ಜಿಲ್ಲಾಡಳಿತವು ಎಂಆರ್‌ಪಿಎಲ್ ಸ್ಥಾವರಕ್ಕೆ ನೀರಿನ ಪೂರೈಕೆ ಕಡಿಮೆಗೊಳಿಸಿದೆ. ಉಡುಪಿ ನಗರ ಸಭೆಗೆ ನೀರು ಪೂರೈಕೆ ಮಾಡುವ ಸ್ವರ್ಣಾ ನದಿಯ ನೀರನ್ನು ಬಳಸಿಕೊಳ್ಳಲು ಎಂಆರ್‌ಪಿಎಲ್ ಪ್ರಯತ್ನಿಸುತ್ತಿದ್ದು ಇದು ಕಾರ್ಯಗತವಾದರೆ ಉಡುಪಿ ನಗರಕ್ಕೂ ನೀರು ಕೊರತೆ ಉಂಟಾಗಬಹುದಾಗಿದ್ದು, ಉಡುಪಿ ನಗರ ಸಭೆಯು ಇದಕ್ಕೆ ವಿರೋಧ ವ್ಯಕ್ತಪಡಿಸಿದೆ. ಬಂಟ್ವಾಳ ಮತ್ತು ಬೆಳ್ತಂಗಡಿ ತಾಲೂಕುಗಳನ್ನು 'ಬೂದು ಪ್ರದೇಶ' ಎಂದು ಸರಕಾರ ಪರಿಗಣಿಸಿದ್ದು, ಬೆಳ್ತಂಗಡಿ ತಾಲೂಕು ನೀರಿನ ತೀವ್ರ ಅಭಾವ ಎದುರಿಸುತ್ತಿದೆ.



ಮಾರ್ಚ್ 22 ರಂದು ವಿಶ್ವ ಜಲ ದಿನಾಚರಣೆಯನ್ನು ಪಕ್ಷದ ನೇತೃತ್ವದಲ್ಲಿ ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿ ಎದುರು ನಡೆಸಿ ಸತ್ಯಾಗ್ರಹಕ್ಕೆ ಮಾಧ್ಯಮಗಳು ನೀಡಿದ ವ್ಯಾಪಕ ಪ್ರಚಾರ, ಕುಡಿಯುವ ನೀರಿನ ಬಗ್ಗೆ ನಾಗರಿಕರನ್ನು ಎಚ್ಚರಗೊಳಿಸುವ ಒಂದು ಸನ್ನಿವೇಶವಾಗಿ ಮೂಡಿ ಬಂದುದನ್ನು ಬಿ.ಮಾಧವ ಅವರು ತಮ್ಮ ಟಿಪ್ಪಣಿಯಲ್ಲಿ ಉಲ್ಲೇಖಿಸಿದರು. ಮರುದಿನವೇ ಶಾಸಕರೂ ವಿಧಾನಸಭಾ ಉಪಾಧ್ಯಕ್ಷರೂ ಆದ ಯೋಗೀಶ್ ಭಟ್ ಅವರು ತುಂಬೆ ಅಣೆಕಟ್ಟಿಗೆ ಭೇಟಿ ನೀಡಿ ನೀರಿನ ಮಟ್ಟ ಕಡಿಮೆಯಾಗಿರುವ ಕುರಿತು ಹೇಳಿಕೆ ನೀಡಿದರು. ಜಿಲ್ಲಾಧಿಕಾರಿಗಳು ಪತ್ರಿಕಾಗೋಷ್ಠಿ ನಡೆಸಿ ನೀರಿನ ಸಮಸ್ಯೆಯನ್ನು ಎದುರಿಸಲು ಪರ್ಯಾಯ ವ್ಯವಸ್ಥೆಗಳನ್ನು ಒದಗಿಸುವ ಭರವಸೆ ನೀಡಿದರು.

ಕರಾವಳಿ ಜಿಲ್ಲೆಗಳಲ್ಲಿರುವ ನದಿಗಳಿಗೆ ಮತ್ತು ತೋಡುಗಳಿಗೆ ಸಾಕಷ್ಟು ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸುವ ಮೂಲಕ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಲು ಸರಕಾರವು ಈ ನಿಟ್ಟಿನಲ್ಲಿ ತಕ್ಷಣ ಕಾರ್ಯಪ್ರವೃತ್ತರಾಗಬೇಕೆಂದು ಒತ್ತಾಯಿಸಬೇಕಾಗಿದೆ ಎಂಬ ತಮ್ಮ ಪ್ರಸ್ತಾಪವನ್ನು ಬಿ.ಮಾಧವ ಅವರು ಮಂಡಿಸಿದರು.

ಎತ್ತಿಹೊಳೆ ಯೋಜನೆಯೊಂದೇ ಮಧ್ಯಪೂರ್ವ ಕರ್ನಾಟಕದ ನೀರಿನ ಕೊರತೆಗೆ ಪರಿಹಾರವಲ್ಲ: ಜಿ.ವಿ.ಶ್ರೀರಾಮರೆಡ್ಡಿ

ರಾಜ್ಯಗಳನ್ನು ಆಳಿದ ಪಕ್ಷಗಳು ಕೃಷ್ಣಾ ಕಾವೇರಿ ನದಿ ನೀರಿನ ಬಗ್ಗೆ ರಾಜಕಾರಣ ಮಾಡುವುದಕ್ಕಾಗಿ ತಕರಾರು ಮಾಡಿದ್ದಾವೆಯೇ ಹೊರತು ಲಭ್ಯ ನೀರನ್ನು ಗರಿಷ್ಠ ಬಳಕೆ ಮಾಡುವ ಬಗ್ಗೆ ಅಲ್ಲ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು.

ಈಗ ಪರಮಶಿವಯ್ಯ ವರದಿಯನ್ನು ಆಧಾರವಾಗಿಟ್ಟು ಬಯಲು ಸೀಮೆ ಮತ್ತು ಕರಾವಳಿ ನಡುವಿನ ಸಂಘರ್ಷವಾಗಿ ಮೂಡಿಸಲಾಗಿದೆ. ವರದಿಯಲ್ಲಿ 'ನೇತ್ರಾವತಿ ನದಿ ತಿರುವು' ಎಂಬ ಪ್ರಯೋಗವೇ ಇಲ್ಲದಿದ್ದರೂ, ಕರಾವಳಿ ಪತ್ರಿಕೆಗಳಲ್ಲಿ ಬಂದ ಈ ವಾಕ್ಯ ಪ್ರಯೋಗ ಈ ತಪ್ಪು ಅಭಿಪ್ರಾಯಕ್ಕೆ ಕಾರಣವಾಗಿದೆ. ಪಶ್ಚಿಮ ಘಟ್ಟಗಳಲ್ಲಿ ಸುರಿದು ವ್ಯರ್ಥವಾಗಿ ಹೋಗುವ ಮಳೆ ನೀರಿನ ಭಾಗವನ್ನು ಅಲ್ಲಿಯೇ ಗಾರ್ಲಂಡ್ ನಾಲೆಗಳಲ್ಲಿ ಸಂಗ್ರಹಿಸಿ, ಅಲ್ಲಿಂದ ಬಯಲು ಸೀಮೆಗೆ ಹರಿಸುವ ಯೋಜನೆ ಇದಾಗಿದ್ದು, ಇದು ಯಾವುದೇ ನದಿ ತಿರುವು ಯೋಜನೆ ಅಲ್ಲ ಎಂದು ಶ್ರೀರಾಮರೆಡ್ಡಿ ಸ್ಪಷ್ಟಪಡಿಸಿದರು. ಪರಮಶಿವಯ್ಯ ವರದಿಯನ್ನೇ ಜಾರಿಗೊಳಿಸಬೇಕೆಂದು ಬಯಲುಸೀಮೆಯವರು ಆಗ್ರಹಿಸುತ್ತಿಲ್ಲ; ನೀರಿನ ಲಭ್ಯತೆ ಬಗ್ಗೆ ವಾಸ್ತವ ಸರ್ವೆ ನಡೆಸಿ ಅದರ ಆಧಾರದಲ್ಲಿ ಪರಿಣತರ ಸಮಿತಿ ವರದಿ ನೀಡಬೇಕೆಂದು ಅವರು ಆಗ್ರಹಿಸುತ್ತಿದ್ದಾರೆ. ಎತ್ತಿನಹೊಳೆ ಯೋಜನೆಯೂ ಪರಮಶಿವಯ್ಯ ವರದಿಯ ಭಾಗವೇ ಆಗಿದೆ. ಪರಮಶಿವಯ್ಯ ವರದಿಯನ್ನು ಸಮಗ್ರವಾಗಿ ಜಾರಿಮಾಡಿದಾಗಲಷ್ಟೇ ಬಯಲು ಸೀಮೆಯ ಜಿಲ್ಲೆಗಳ ನೀರಿನ ಸಮಸ್ಯೆಗಳ ನಿವಾರಣೆಯಾಗಬಲ್ಲುದೇ ಹೊರತು ಕೇವಲ ಎತ್ತಿನಹೊಳೆ ಯೋಜನೆಯೊಂದರ ಅನುಷ್ಠಾನದಿಂದಲ್ಲ. ಕೇಂದ್ರ ಸಚಿವ ವೀರಪ್ಪ ಮೊಯಿಲಿಯವರು ಕರಾವಳಿಯಲ್ಲಿ ಪರಮಶಿವಯ್ಯ ವರದಿಗೆ ವಿರೋಧ ಸೂಚಿಸಿ, ತಾನು ಪ್ರತಿನಿಧಿಸುವ ಚಿಕ್ಕಬಳ್ಳಾಪುರದಲ್ಲಿ ಎತ್ತಿನಹೊಳೆ ಯೋಜನೆಯಿಂದ ನೀರು ಒದಗಿಸಲಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದಾರೆ. ಅಂತೆಯೇ ಕರಾವಳಿ ಜಿಲ್ಲೆಗಳಲ್ಲೂ ನೇತ್ರಾವತಿ ನದಿ ನೀರು ತಿರುಗಿಸಲಾಗುತ್ತದೆ ಎಂಬ ಅಪಪ್ರಚಾರ ಸಾಗಿದೆ ಎಂದು ಶ್ರೀರಾಮರೆಡ್ಡಿ ವಿವರಿಸಿದರು.

ಪ್ರೊಜೆಕ್ಟ್ 6 ರಲ್ಲಿ ಕರಾವಳಿಯ ನದಿಗಳಿಗೆ ನೀರು ಸಂಗ್ರಹದ ಸಾಮರ್ಥ್ಯವನ್ನು ಹೆಚ್ಚಿಸುವ ನಿರ್ಮಾಣಗಳನ್ನು ಮಾಡುವ ಬಗ್ಗೆ ಅಧ್ಯಯನ ಮಾಡಬೇಕಾಗಿದೆ ಎಂದು ಡಾ.ಪರಮಶಿವಯ್ಯ ಹೇಳುತ್ತಾರೆ. ಅಲ್ಲದೆ ಕಾಳಿ, ಶರಾವತಿ ಮತ್ತು ವಾರಾಹಿಗಳ ವಿದ್ಯುತ್ ಘಟಕಗಳಿಂದ ಹರಿಯುವ ಟೇಲ್‌ರೇಸ್ ಯೋಜನೆಯಿಂದ ಕರಾವಳಿ ಜಿಲ್ಲೆಗಳಿಗೆ ಕೃಷಿಗೆ ನೀರು ಒದಗಿಸಬೇಕೆಂದು ಪ್ರೊಜೆಕ್ಟ್ 7 ರಲ್ಲಿ ಸೂಚಿಸಿದ್ದಾರೆ. ಈ ಸೂಚನೆಗಳನ್ನು ಕರಾವಳಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಬೇಕಾಗಿದೆ ಎಂದು ಶ್ರೀರಾಮರೆಡ್ಡಿ ಹೇಳಿದರು.


ಪುಕ್ಕಟೆ ಲಭ್ಯವಾಗುತ್ತಿರುವ ನೀರು ಕೂಡಾ ಮಾರಾಟವಾಗುತ್ತಿದೆ: ಮಾರುತಿ ಮಾನ್ಪಡೆ

ನಾವು ಚರ್ಚಿಸುತ್ತಿರುವುದು ನೀರಿನ ರಾಜಕಾರಣ. ಪುಕ್ಕಟೆಯಾಗಿ ಲಭ್ಯವಾಗುತ್ತಿದ್ದ ನೀರು ಕೂಡಾ ಇವತ್ತು ಮಾರಾಟವಾಗುತ್ತಿದೆ. ಬಾಟಲುಗಳ ಮೂಲಕ ಬಂದಡೆ.

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಸಾಮಾನ್ಯ ಕಮ್ಯೂನಿಸ್ಟ್ ನಾಯಕ ಪಿ.ಸುಂದರಯ್ಯ ಜನ್ಮಶತಮಾನೋತ್ಸವ



ದೇಶ ಕಂಡ ಒಬ್ಬ ಅಪ್ರತಿಮ ಕಮ್ಯುನಿಸ್ಟ್ ನೇತಾರ, 'ಕಮ್ಯುನಿಸ್ಟ್ ಋಷಿ' ಎಂದೇ ಕರೆಸಿಕೊಂಡ ಕ್ರಾಂತಿಕಾರಿ ಹೋರಾಟಗಾರ ಪುಚ್ಚಲ ಪಲ್ಲಿ ಸುಂದರಯ್ಯ ಅವರು ಹುಟ್ಟಿ ನೂರು ವರ್ಷ ಆಗುತ್ತಿರುವ ಹೊತ್ತಲ್ಲಿ ಅವರ ಬದುಕು ಕೊಡುಗೆಗಳ ಬಗೆಗೆ ಒಂದು ಲೇಖನ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳಿಂದ

ಪ್ರಕಾಶ್ ಕಾರಟ್

ಮೇ 1, 2012 ಪುಚ್ಚಲಪಲ್ಲಿ ಸುಂದರಯ್ಯನವರ ಜನ್ಮಶತಮಾನೋತ್ಸವದ ದಿನವಾಗಿದೆ. ಇದು ಅಸಾಮಾನ್ಯ ಕಮ್ಯೂನಿಸ್ಟ್ ನಾಯಕರಾದ ಪಿ.ಸುಂದರಯ್ಯನವರ ಜೀವನ ಮತ್ತು ಕಾರ್ಯವನ್ನು ಸ್ಮರಿಸುವ ಅಪೂರ್ವ ಸಂದರ್ಭವಾಗಿದೆ. ಪಿಎಸ್ ಎಂದೇ ಜನಜನಿತವಾಗಿರುವ ಸುಂದರಯ್ಯನವರು ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಪಾಳೇಗಾರಿ ವಿರೋಧಿ ಚಳುವಳಿಯಲ್ಲಿ ರೂಪುಗೊಂಡವರು. ಅವರು ಎರಡು ದಶಕಗಳ ಕಾಲ, ಭಾರತ ಸ್ವಾತಂತ್ರ್ಯ ಪಡೆಯುವವರೆಗೆ ಚಳುವಳಿಯನ್ನು ಮುನ್ನಡೆಸಿದರು. 17ನೇ ವಯಸ್ಸಿನಲ್ಲೇ ಸ್ವಾತಂತ್ರ್ಯ ಚಳವಳಿಗೆ ದುಮುಕಿದ ಪಿಎಸ್, ಕಾಂಗ್ರೆಸ್ ಕಾರ್ಯಕರ್ತನಾಗಿ ತಮ್ಮ ರಾಜಕೀಯ ಜೀವನ ಆರಂಭಿಸಿ ಆ ನಂತರ ಕಟಿಬದ್ಧ ಕಮ್ಯೂನಿಸ್ಟರಾದರು.

ಕಮ್ಯೂನಿಸ್ಟರಾಗಿ ಬದಲಾದ ಹಲವಾರು ಸ್ವಾತಂತ್ರ್ಯ ಹೋರಾಟಗಾರರಂತೆ ಸುಂದರಯ್ಯನವರೂ ಸಹ ಜಾತಿ ವ್ಯವಸ್ಥೆ ವಿರುದ್ಧವೂ ಸಿಡಿದೆದ್ದರು. ಸುಂದರಯ್ಯನವರು ತಮ್ಮ ಗ್ರಾಮದಲ್ಲಿ ದಲಿತರ ವಿರುದ್ಧ ನಡೆಯುತ್ತಿದ್ದ ಜಾತಿ ತಾರತಮ್ಯ ವಿರೋಧಿಸಿ ಉಪವಾಸ ಕೈಗೊಂಡಿದ್ದು ಅವರ ಮೊಟ್ಟಮೊದಲ ಸಾರ್ವಜನಿಕ ಪ್ರತಿಭಟನೆಯಾಗಿತ್ತು.


ದಕ್ಷಿಣ ಭಾರತಕ್ಕೆ ಭೇಟಿ ನೀಡಿದ ಮೊದಲ ಕಮ್ಯುನಿಸ್ಟ್ ಅಮೀರ್ ಹೈದರ್ ಖಾನ್ ಅವರು ಸುಂದರಯ್ಯನವರನ್ನು ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿಸಿಕೊಂಡರು. ಯುವ ವಿದ್ಯಾರ್ಥಿ ಸುಂದರಯ್ಯನವರಲ್ಲಿನ ಕ್ರಾಂತಿಕಾರಿ ಸಾಮರ್ಥ್ಯವನ್ನು ಖಾನ್ ಆಗಲೇ ಗುರುತಿಸಿದ್ದರು. ಅಲ್ಲಿಂದ ಪಿಎಸ್ ಅವರ ಕ್ರಾಂತಿಕಾರಿ ಹಾದಿ ಆರಂಭಗೊಂಡಿತು.



ಯುವ ಸುಂದರಯ್ಯ

ಇತಿಹಾಸದ ಕಡೆಗೆ ವಿಶಾಲ ಹಿನ್ನೋಟ ಹರಿಸಿದರೆ ಸುಂದರಯ್ಯನವರು ಕಮ್ಯೂನಿಸ್ಟ್ ಪಕ್ಷದ ನಿರ್ಮಾತೃಗಳಲ್ಲೊಬ್ಬರು ಎಂದು ಚರಿತ್ರೆ ಹೇಳುತ್ತದೆ. ಸುಂದರಯ್ಯನವರು 24ರ ವಯಸ್ಸಿನಲ್ಲಿ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದರು. ಇದು ಕೇಂದ್ರೀಕೃತ ಮರು-ಸಂಘಟಿತ ಪಕ್ಷದ ಮೊಟ್ಟ ಮೊದಲ ಕೇಂದ್ರ ಸಮಿತಿಯಾಗಿತ್ತು. ಆಗ ಅವರಿಗೆ ದಕ್ಷಿಣ ಭಾರತದಲ್ಲಿ ಪಕ್ಷ ಕಟ್ಟುವ ಜವಾಬ್ದಾರಿಯನ್ನು ವಹಿಸಲಾಯಿತು. ಕೇರಳದ ಮೊಟ್ಟ ಮೊದಲ ಕಮ್ಯೂನಿಸ್ಟರ ತಂಡವನ್ನು ಪಕ್ಷಕ್ಕೆ ಸೆಳೆಯುವುದರಲ್ಲಿ ಸುಂದರಯ್ಯನವರು ನಿರ್ಣಾಯಕ ಪಾತ್ರ ನಿರ್ವಹಿಸಿದ್ದರು ಎಂದು 'ಕೇರಳದ ಕಮ್ಯೂನಿಸ್ಟ್ ಪಕ್ಷದ ಇತಿಹಾಸ' ಪುಸ್ತಕದಲ್ಲಿ ಇಎಂಎಸ್ ನಂಬೂದರಿಪಾದ್ ಬರೆದಿದ್ದಾರೆ. ತಮ್ಮ ಸ್ವಂತ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಕಮ್ಯೂನಿಸ್ಟ್ ಚಳವಳಿಯನ್ನು ಕಟ್ಟಿ ಬೆಳೆಸಲು ಸುಂದರಯ್ಯನವರು ಅವಿರತ ಶ್ರಮಿಸಿದರು. ಸ್ವಾತಂತ್ರ್ಯ ಚಳಿವಳಿಯಲ್ಲಿ ತೊಡಗಿಸಿಕೊಂಡಿದ್ದ ಕ್ರಾಂತಿಕಾರಿ ಮನೋಭಾವದ ಯುವಜನರನ್ನು ಕಮ್ಯೂನಿಸ್ಟ್ ಚಳವಳಿಯತ್ತ ಸೆಳೆದರು. ಪಿಎಸ್ ಅವರ ಈ ಅವಿಶ್ರಾಂತ ಹೋರಾಟವೇ ಆಂಧ್ರಪ್ರದೇಶದಲ್ಲಿ ಬಲಿಷ್ಠ ಕಮ್ಯೂನಿಸ್ಟ್ ಚಳವಳಿಗೆ ಅಡಿಪಾಯ ಹಾಕಿತು. ಪಿಎಸ್ ಅವರು ತಮಿಳುನಾಡಿನ ಮೊದಲ ಹಂತದ ಕಮ್ಯೂನಿಸ್ಟ್ ನಾಯಕರೊಂದಿಗೆ ನಿರಂತರ ಸಂಬಂಧ ಹೊಂದಿದ್ದರು. ಈ ಪ್ರದೇಶ ಮೊದಲು ಮದ್ರಾಸ್ ಪ್ರಾವಿನ್ಸ್ ಆಗಿದ್ದು, ಆಂಧ್ರಪ್ರದೇಶದ ಹಲವು ಭಾಗಗಳನ್ನೂ ಒಳಗೊಂಡಿತ್ತು.

ನಂತರ ಪಿಎಸ್ ಅವರು ಸಿಪಿಐ(ಎಂ) ಸ್ಥಾಪಿಸುವಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಿದರು. 1964ರಲ್ಲಿ ನಡೆದ ಸಿಪಿಐ(ಎಂ) ಪಕ್ಷದ ಸಂಸ್ಥಾಪನಾ ಏಳನೇ ಅಧಿವೇಶನದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾದರು. ಹನ್ನೆರಡು ವರ್ಷ ಪಿಎಸ್ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ಪಕ್ಷವನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಂಘಟನೆಯಾಗಿ ಕಟ್ಟಲು ತಮ್ಮಲ್ಲಿನ ಎಲ್ಲ ಶಕ್ತಿಯನ್ನು ಸಮರ್ಪಿಸಿದರು. 1967ರಲ್ಲಿ ಕೇಂದ್ರ ಸಮಿತಿ ಅಳವಡಿಸಿಕೊಂಡ 'ಪಕ್ಷದ ಸಂಘಟನೆ ಸವಾಲುಗಳು' (Tasks On Party Organisation) ಕ್ರಾಂತಿಕಾರಿ ಸಂಘಟನೆಗೆ ಅಗತ್ಯವಾದ ನೀಲನಕ್ಷೆ ರೂಪಿಸಿಕೊಟ್ಟಿದ್ದು ಅದು ಪಿಎಸ್ ಅವರ ಛಾಪು ಹೊತ್ತಿದೆ.



ಚಾರಿತ್ರಿಕ ವೀರ ತೆಲಂಗಾಣ ಹೋರಾಟ

ಕಾರ್ಷಿಕ ಕ್ರಾಂತಿಯ ಕಾರ್ಯತಂತ್ರವನ್ನು ರೂಪಿಸಿ ಅಭಿವೃದ್ಧಿಪಡಿಸುವಲ್ಲಿ ಸುಂದರಯ್ಯನವರ ಕೊಡುಗೆ ಅಪಾರವಾಗಿದೆ. 1936ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ಕಿಸಾನ್ ಸಭಾ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದಾರೆ. ಆಗ ಅವರು ಎಐಕೆಎಸ್ ಜಂಟಿ ಕಾರ್ಯದರ್ಶಿಯಾಗಿದ್ದರು. ಕೃಷಿ ಕಾರ್ಮಿಕರನ್ನು ಸಂಘಟಿಸಬೇಕಾದ ಮಹತ್ವ ಮತ್ತು ಗ್ರಾಮೀಣ ಶ್ರಮಿಕ ವರ್ಗವಾಗಿ ಅವರ ಪಾತ್ರದ ಮಹತ್ವವನ್ನು ಗುರುತಿಸಿದ ಮೊದಲಿಗರಲ್ಲಿ ಸುಂದರಯ್ಯನವರೂ ಒಬ್ಬರು. ತೆಲಂಗಾಣ ರೈತರ ಸಶಸ್ತ್ರ ಹೋರಾಟಕ್ಕೆ ಅವರು ನೀಡಿದ ನಾಯಕತ್ವ ಪ್ರಖ್ಯಾತ ಗಾಥೆಯಾಗಿದೆ. ಅವರು ಬರೆದಿರುವ ' ದಿ ತೆಲಂಗಾಣ ಸಶಸ್ತ್ರ ಹೋರಾಟ ಮತ್ತು ಅದರ ಪಾಠ'ಗಳು ಪುಸ್ತಕ ಈ ಐತಿಹಾಸಿಕ ಹೋರಾಟದ ಸಮಗ್ರ ಚಿತ್ರಣ ನೀಡುತ್ತದೆ.

ನಂತರ ಸುಂದರಯ್ಯನವರು ಕೃಷಿ ಪರಿಸ್ಥಿತಿಯ ವಿವಿಧ ಆಯಾಮಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ವರ್ಗಗಳ ಕುರಿತು ಆಳವಾಗಿ ಅಧ್ಯಯನ ಮಾಡುವುದನ್ನು ಮುಂದುವರೆಸಿದರು. ಕೃಷಿಕ ವರ್ಗಗಳು ಮತ್ತು ಭೂಮಿ ಪ್ರಶ್ನೆ ಕುರಿತು ವೈಜ್ಞಾನಿಕವಾಗಿ ಅರ್ಥ ಮಾಡಿಕೊಳ್ಳಲು 70ರ ದಶಕದ ಮಧ್ಯಾವಧಿಯ ನಂತರ ಆಂಧ್ರಪ್ರದೇಶದ ಹಳ್ಳಿಗಳಲ್ಲಿ ಸಮೀಕ್ಷೆಯೊಂದನ್ನು ಸಂಘಟಿಸಿದರು. ಈ ಮೂಲಕ ಅವರಿಗೆ ಬಡ ರೈತರು ಮತ್ತು ಕೃಷಿ ಕಾರ್ಮಿಕರ ಬದುಕನ್ನು ವಿಮೋಚನೆಗೊಳಿಸುವಂತಹ ಕೃಷಿ ಕ್ರಾಂತಿ ಇಲ್ಲದೆ ಭಾರತದಲ್ಲಿ ಪ್ರಜಾಪ್ರಭುತ್ವ ಕ್ರಾಂತಿ ಪೂರ್ಣಗೊಳ್ಳುವುದಿಲ್ಲ ಎಂಬುದು ಮನದಟ್ಟಾಯಿತು.

ಪಿಎಸ್ ಅವರು ಮಾರ್ಕಿಸ್ಟ್-ಲೆನಿನಿಸ್ಟ್ ಸಿದ್ಧಾಂತ ಮತ್ತು ಸೂತ್ರಗಳ ಕಟ್ಟಾ ಸಮರ್ಥಕರಾಗಿದ್ದಾರೆ. ಪಕ್ಷದೊಳಗಿನ ಪರಿಷ್ಕರಣವಾದಿಗಳೊಂದಿಗೆ ನಿರಂತರವಾಗಿ ಹೋರಾಟ ನಡೆಸಿದ ಅವರು, ಅದೇ ಸಂದರ್ಭದಲ್ಲಿ ಎಡ ತೀವ್ರವಾದಿಗಳ ವಿರುದ್ಧವೂ ಅಷ್ಟೇ ತೀಕ್ಷ್ಣವಾಗಿ ಹೋರಾಟ ನಡೆಸಿದರು. ತೆಲಂಗಾಣ ಸಶಸ್ತ್ರ ಗೆರಿಲ್ಲಾ ಹೋರಾಟವನ್ನು ಮುನ್ನಡೆಸಿದ ನಾಯಕನಾದ ಪಿಎಸ್, ಎಡ ಸಾಹಸವಾದ

ಪುಟ 10ಕ್ಕೆ

ಬರ ನಿರ್ವಹಣೆ :

ಸರ್ವ ಪಕ್ಷ ಸಭೆ ನಡೆಸಿ ಸುಮ್ಮನಾದ ಸರ್ಕಾರ

ಬರದ ವಿಷಯದಲ್ಲಿ ರಾಜಕೀಯ ಸಲ್ಲದು ಸಲ್ಲದು ಎನ್ನುತ್ತಲೇ ಇದ್ದ ಮುಖ್ಯ ಮಂತ್ರಿ ಸದಾನಂದಗೌಡರು ತಾವೇ ಒಂದು ದೊಡ್ಡ 'ರಾಜಕೀಯ' ನಡೆಸಿದರು ಏನದು ? ಓದಿ

ನಿತ್ಯಾನಂದ ಸ್ವಾಮಿ

ರಾಜ್ಯದಲ್ಲಿ ಭೀಕರ ಬರ ಆವರಿಸಿರುವ ಹಿನ್ನೆಲೆಯಲ್ಲಿ ಎಪ್ರಿಲ್ 19, 2012 ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಅವರು ಕರೆದಿದ್ದ ಸರ್ವ ಪಕ್ಷಗಳ ಸಭೆಯಲ್ಲಿ ಎಲ್ಲಾ ಹಿರಿಕಿರಿಯ ರಾಜಕೀಯ ಪಕ್ಷಗಳ ಮುಖಂಡರು ತಪ್ಪದೆ ಹಾಜರಿದ್ದರು ಮಾತ್ರವಲ್ಲ ಎಲ್ಲರೂ ಸಕಾರಾತ್ಮಕ ಸಲಹೆಗಳನ್ನು ನೀಡಿದರು. ಪ್ರಸಕ್ತ ಪರಿಸ್ಥಿತಿಯಲ್ಲಿ ಅದು ಅವರ ಕರ್ತವ್ಯವೂ ಹೊಣೆಗಾರಿಕೆಯೂ ಆಗಿತ್ತು.




ಆದರೆ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿಗಳು ಮಾತ್ರ ಮಧ್ಯ ಮಧ್ಯದಲ್ಲಿ "ಇಲ್ಲಿ ಯಾವುದೇ ರಾಜಕೀಯ ಚರ್ಚೆಗೆ ಅವಕಾಶವಿಲ್ಲ" ಎಂದು ಹೇಳುತ್ತಿದ್ದರು. ಆದರೆ ಅಂತಿಮವಾಗಿ, ಸತತ ಐದು ಗಂಟೆಗಳ ಕಾಲ ನಡೆದ ಸರ್ವಪಕ್ಷಗಳ ಸಭೆಯಿಂದ ಸರ್ವಪಕ್ಷಗಳ ನಿಯೋಗವನ್ನು ದೆಹಲಿಗೆ ಕರೆದೊಯ್ದು ಬರದ ಹೆಸರಿನಲ್ಲಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವು ಕೋರುವ ತಮ್ಮ ರಾಜಕೀಯ ಉದ್ದೇಶವನ್ನು ಈಡೇರಿಸಿಕೊಂಡಿದ್ದಾರೆಯೇ ಹೊರತು ಬರಪೀಡಿತ ಜನತೆಗೆ ಇದುವರೆಗೆ ರಾಜ್ಯ ಸರ್ಕಾರದಿಂದ ಹೆಚ್ಚಿನ ನೆರವು ಹರಿದು ಬರಲಿಲ್ಲ.

ಸರ್ವಪಕ್ಷಗಳ ಸಮಾಲೋಚನಾ ನಂತರ ಮುಖ್ಯಮಂತ್ರಿ ಸದಾನಂದಗೌಡರು ಹೊರಡಿಸಿದ ಒಂದೇ ಒಂದು ಆದೇಶ ಏನೆಂದರೆ-ಬರ ಪರಿಸ್ಥಿತಿ ತೀವ್ರಗೊಂಡ ಹಿನ್ನೆಲೆಯಲ್ಲಿ ಸಚಿವರು, ಶಾಸಕರು, ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ಉಳಿದು ಬರ ನಿರ್ವಹಣೆ ಕಾರ್ಯ ನೋಡಿಕೊಳ್ಳಬೇಕು. ಜತೆಗೆ, ಸಂಕಷ್ಟದ ಈ ಸಂದರ್ಭದಲ್ಲಿ ಸರ್ಕಾರಿ ಹಣವನ್ನು ವಿದೇಶ ಪ್ರವಾಸಕ್ಕೆ ಬಳಸಬಾರದು. ಅದಕ್ಕಾಗಿ ಮುಂದಿನ ಎರಡು ತಿಂಗಳ ಅವಧಿಗೆ ಎಲ್ಲ ವಿದೇಶ ಪ್ರವಾಸಗಳನ್ನು ನಿರ್ಬಂಧಿಸಲಾಗಿದೆ ಎಂದು. ನಿರ್ಬಂಧಿಸಬೇಕು ಎಂಬ ಸೂಚನೆ ಸರ್ವಪಕ್ಷಗಳ ಸಭೆಯಲ್ಲೇ ವ್ಯಕ್ತವಾಗಿತ್ತು. ಆದರೆ ಮುಖ್ಯಮಂತ್ರಿಯವರ ಆದೇಶ ಹೊರಬೀಳುತ್ತಿದಂತೆ ಅದನ್ನು ಉಲ್ಲಂಘಿಸಲಾಯಿತು. ಸಮಾಜ ಕಲ್ಯಾಣ ಸಚಿವ ಎ.ನಾರಾಯಣ ಸ್ವಾಮಿ, ಮುಖ್ಯಮಂತ್ರಿ ಆದೇಶಕ್ಕೆ ಸೆಡ್ಡು ಹೊಡೆದು ಇಟಲಿಗೆ ಹಾರಿಯೇ ಬಿಟ್ಟರು. ನಾರಾಯಣಸ್ವಾಮಿ, ಭೀಕರ ಬರಕ್ಕೆ ತುತ್ತಾಗಿರುವ ಕೋಲಾರ ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿದ್ದಾರೆ. ಇದು ಬಿಜೆಪಿ ಸರ್ಕಾರದ ಮತ್ತು ಅದರ ಮಂತ್ರಿಗಳ ಜವಾಬ್ದಾರಿ ನಿರ್ವಹಣೆಯ ವೈಖರಿ! ಈಗ ನಾರಾಯಣಸ್ವಾಮಿ ಅವರನ್ನು ವಾಪಸ್ ಕರೆಯಿಸಿಕೊಳ್ಳುವ ನಾಟಕ ನಡೆಯುತ್ತಿದೆ.

ಕೇಂದ್ರದ ಕಾಸಿಗೆ ಕಾಯುತ್ತಿರುವ ಬಕಪಕ್ಷಿ:

ರಾಜ್ಯ ಸರ್ಕಾರ ಕೇಂದ್ರದ ನೆರವಿಗೆ ಕಾಯಬಾರದು; ಕುಡಿಯುವ ನೀರನ್ನು ಹಾಗೂ ಜಾನುವಾರುಗಳಿಗೆ ಮೇವು ಒದಗಿಸಲು ಸರ್ಕಾರ ತನ್ನ ಬೊಕ್ಕಸದಿಂದ ಖರ್ಚು



ಮಾಡಲು ಹಿಂದೇಟು ಹಾಕಬಾರದು. ಸರ್ಕಾರಕ್ಕೆ ಇದು ಪ್ರಥಮ ಆದ್ಯತೆ ಆಗಬೇಕು ಎಂದು ಸರ್ವಪಕ್ಷಗಳ ಸಭೆಯಲ್ಲಿ ಬಲವಾದ ಒತ್ತಾಯ ವ್ಯಕ್ತವಾಗಿತ್ತು. ಸರ್ವಪಕ್ಷಗಳ ಈ ಒಮ್ಮತದ ಸಲಹೆಯನ್ನು ಡಿ.ವಿ. ಸದಾನಂದಗೌಡ ಸರ್ಕಾರವು ಕಡೆಗಣಿಸಿದೆ. ದೆಹಲಿಗೆ ಕರೆದೊಯ್ಯುವ ದಿನಾಂಕ ಇನ್ನೂ ನಿಗದಿಯಾಗಿಲ್ಲ. ಜಿಲ್ಲಾಧಿಕಾರಿಗಳ ಖಾತೆಗಳಲ್ಲಿ ರೂ. 178.85 ಕೋಟಿ ಲಭ್ಯವಿದೆ ಎಂಬ ಭರವಸೆಯೊಂದನ್ನು ಹೊರತು ಪಡಿಸಿ ಸರ್ವಪಕ್ಷಗಳ ಸಭೆಯ ನಂತರ ಬರ ನಿರ್ವಹಣೆಯ ವಿಷಯದಲ್ಲಿ ಒಂದು ಅಂಗುಲದಷ್ಟು ಸಹ ಮುಂದೆ ಹೋಗಿಲ್ಲ.

ಬರಪೀಡಿತ ಪ್ರದೇಶಗಳಲ್ಲಿ ದನಕರುಗಳಿಗೆ ಮೇವು, ನೀರು ಇಲ್ಲದೆ ಅವುಗಳನ್ನು ರೈತರು ಅಗ್ಗದ ಬೆಲೆಗೆ ಮಾರಿಕೊಳ್ಳುತ್ತಿರುವುದಾಗಲಿ, ಗ್ರಾಮೀಣ ಬಡವರು ಹೊಟ್ಟೆಪಾಡಿಗಾಗಿ, ಮಕ್ಕಳುಮರಿಗಳನ್ನು ಕಟ್ಟಿಕೊಂಡು ಪರ ರಾಜ್ಯಗಳಿಗೆ ವಲಸೆ ಹೋಗುತ್ತಿರುವುದಾಗಲಿ ಬಿಜೆಪಿ ಸರ್ಕಾರದ ಕಲ್ಲು ಹೃದಯವನ್ನು ಕರಗಿಸುವುದಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಲೂಟಿ ಮಾಡುವುದರಲ್ಲಿ ತಲ್ಲೀನವಾಗಿರುವ ಈ ಸರ್ಕಾರ ಪಕ್ಕಾ ಕಟುಕ ಸರ್ಕಾರವಾಗಿದೆ.

'ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆ ಪ್ರಾರಂಭವಾಗಿದೆ' ಎನ್ನುತ್ತಾರೆ ಮುಖ್ಯಮಂತ್ರಿ ಅಂದರೆ ಇವರ ಸರ್ಕಾರ ಬರದಿಂದ ತತ್ತರಿಸಿರುವ ಜನತೆ, ಸಂಕಷ್ಟದ ಈ ಕಾಲದಲ್ಲಿ ನೆರವು ನೀಡಲು ಧಾವಿಸುವ ಬದಲು, ಮಳೆಗಾಗಿ ಕಾಯುತ್ತಿದೆ. ಮಳೆ ಬಂದರೆ, ನಮ್ಮ ಮುಗ್ಧ ರೈತರು ಕಳೆದ ಒಂದು ವರ್ಷದಿಂದ ಅನುಭವಿಸಿದ ಎಲ್ಲಾ ಕಷ್ಟ ನಷ್ಟಗಳನ್ನು ಮರೆತು ಮತ್ತೆ ಭೂಮಿಯಲ್ಲಿ ಬೀಜ ಬಿತ್ತಿ ಬೆಳೆ ಬೆಳೆಯಲು ಮುಂದಾಗುತ್ತಾರೆ. ಆಗ ಬರ ನಿರ್ವಹಣೆಯ ಕುರಿತಾದ ಟೀಕೆ ಟಿಪ್ಪಣಿ ಸ್ತಬ್ಧವಾಗುತ್ತದೆ. ಲೂಟಿ ಮಾಡುವುದನ್ನು ನಿರಾತಂಕವಾಗಿ ಮುಂದುವರೆಸಲು ಇನ್ನೂ ಒಂದು ವರ್ಷ ಸಿಗುತ್ತದೆ ಎಂಬ ಕೆಟ್ಟ ಕನಸು ಕಾಣುತ್ತಿದೆ ಈ ಬಿಜೆಪಿ ಸರ್ಕಾರ. ರಾಜ್ಯದಲ್ಲಿ ಮುಂಗಾರು ಮಾತ್ರವಲ್ಲದೆ ಹಿಂಗಾರು ಮಳೆ ಕೂಡ ಕೈ ಕೊಟ್ಟಿರುವುದರಿಂದ ರೈತರು ಭಾರೀ ಹಾನಿ ಅನುಭವಿಸಿದ್ದಾರೆ. ಮುಖ್ಯಮಂತ್ರಿ ಸದಾನಂದಗೌಡ ರೈತರಿಗೆ ಅಗತ್ಯ ಇರುವ ಬಿತ್ತನೆ ಬೀಜ ಮತ್ತು ರಸಗೊಬ್ಬರವನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಮಾಡಲಾಗಿದೆ ಎಂದು ಹೇಳುತ್ತಾರೆ. ಆದರೆ ಅಷ್ಟು ಮಾಡಿದರೆ ಸಾಲದು. ರೈತರ ಎಲ್ಲಾ ಸಾಲ ಮನ್ನಾ ಮಾಡಬೇಕು. ಹೊಸ ಸಾಲ ನೀಡಲು ವ್ಯವಸ್ಥೆ ಮಾಡಬೇಕು. ಎಕರೆಗೆ 5 ರಿಂದ 10 ಸಾವಿರ ರೂ. ದರದಲ್ಲಿ ಬೆಳೆ ನಷ್ಟಪರಿಹಾರವನ್ನು ನೀಡಬೇಕು. ಈ ಬೇಡಿಕೆಗಳಿಗಾಗಿ, ಮಳೆ ಬಂದರೂ, ಹೋರಾಟ ಮುಂದುವರೆಯ ಬೇಕು.

ಬರಿದಾದ ಕೃಷ್ಣೆ :-

ಕೃಷ್ಣಾ ನದಿ ನಮ್ಮ ರಾಜ್ಯದ ಜೀವ ನದಿಗಳಲ್ಲಿ ಒಂದು. ಈ ನದಿಯ, ಅದರ ಉಪ ನದಿಗಳ ನೀರನ್ನು ಅವಲಂಬಿಸಿ ಲಕ್ಷಾಂತರ ಕುಟುಂಬಗಳು ಬದುಕುತ್ತಿವೆ. ಈ ಜೀವನದಿ ಬತ್ತಿಹೋಗಿದೆ ಎಂಬ ಆಘಾತದ ಸುದ್ದಿ ಹೊರಬಿದ್ದಿದೆ. ಕೃಷ್ಣಾ ನದಿ ಬರಿದಾಗಿರುವುದರಿಂದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರಕ್ಕೆ ನೀರಿನ ಕೊರತೆ ಉಂಟಾಗಿದ್ದು ವಿದ್ಯುತ್ ಉತ್ಪಾದಿಸುತ್ತಿದ್ದ 8 ಸ್ಥಾವರಗಳಲ್ಲಿ 4 ಸ್ಥಾವರಗಳನ್ನು ಸ್ಥಗಿತಗೊಳಿಸಲಾಗಿದೆ. ಇದು ಈ ಸಲದ ಬರದ

– ಪುಟ 13 ಕ್ಕೆ

ಕರ್ನಾಟಕಕ್ಕೆ ಬರ ಹೊಸದೇನು ಅಲ್ಲ. ಎರಡು ಮೂರು ವರ್ಷ ಸತತ ಬರಗಾಲವನ್ನು ಅನುಭವಿಸಿದ ರಾಜ್ಯವಿದು. ಆದರೆ ರಾಜ್ಯ ಸರ್ಕಾರ ತನ್ನ ಉದಾರೀಕರಣದ ನೀತಿಯ ಅಂಗವಾಗಿ ರಾಜ್ಯದ ನದಿಗಳಲ್ಲಿ ಹರಿಯುತ್ತಿರುವ ನೀರಿನ ಸದುಪಯೋಗ ಮಾಡಿಕೊಂಡು ಬರ ನಿರ್ವಹಣೆಗೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಲು ಮುಂದಾಗದಿರುವುದೇ ಇಂದಿನ ಈ ಆಘಾತಕ್ಕೆ ಕಾರಣವಾಗಿದೆ.

ಬರದ ಬೇಗೆಯಲ್ಲಿ ಬೇಯುತ್ತಿರುವ ರಾಯಚೂರು ಜನರ ಬದುಕು ಆಳುವ ಜನರಿಗೆ ದಸರಾ ಮೆರವಣಿಗೆಯ ಸ್ತಬ್ಧ ಚಿತ್ರದಂತೆ ಖುಷಿ ಕೊಡುತ್ತಿರಬಹುದು ಎನಿಸುತ್ತದೆ. ಆದರೆ ಬಾಯಾರಿದ ಗಂಟಲಿಗೆ ನಾಲ್ಕು ಹನಿ ನೀರು ಕೂಡ ಸಿಗುತ್ತಿಲ್ಲ ಎಂಬುದು ವಾಸ್ತವ.

ಮಲ್ಲಯ್ಯ ಜಾಲಹಳ್ಳಿ

ರಣಬಿಸಿಲ ಬೇಗೆಯಲ್ಲಿ ಹೋರಾಟದ ಬದುಕು

ರಾಯಚೂರು ಜಿಲ್ಲೆಗೂ ಬರಗಾಲಕ್ಕೂ ಬೆಂಬಿಡದ ನಂಟು. ಕಳೆದ 2 ವರ್ಷಗಳಿಂದ ಭಾಗಶಃ ಎಂಬಂತೆ ಆಕ್ರಮಿಸಿದ್ದ ಬರಗಾಲ ಈ ಬಾರಿ ಸಂಪೂರ್ಣವಾಗಿ ಆಕ್ರಮಿಸಿದೆ. ಮಳೆಯ ಪ್ರಮಾಣದಲ್ಲಾದ ಕುಸಿತದಿಂದಾಗಿ ತುಂಗಭದ್ರಾ ಜಲಾಶಯ ತುಂಬಲಿಲ್ಲ. ಪರಿಣಾಮವಾಗಿ ತುಂಗಭದ್ರಾ ಎಡದಂಡೆ ನಾಲೆಯ ನೀರು ಬಳಕೆ ಮಾಡಿ ಬೆಳೆ ಬೆಳೆಯುತ್ತಿದ್ದ ಸಿಂಧನೂರು, ಮಾನವಿ ಮತ್ತು ರಾಯಚೂರು ತಾಲೂಕುಗಳಲ್ಲಿ ಹಿಂಗಾರಿ ಬೆಳೆ ಇಲ್ಲವಾಯಿತು. ರೈತರಿಗೆ ಬೆಳೆ ನಷ್ಟವಾಗಿ ಬದುಕು ಅಸಹನೀಯವಾದರೆ ಕೂಲಿಕಾರರು ದಿಕ್ಕೆಟ್ಟು ಹೋದರು. ಹಿಂದೆಂದು ಗುಳೆ ಹೋಗದ ಈ ಭಾಗದ ಜನರು ದಂಡು ದಂಡಾಗಿ ಗುಳೆ ಹೋದರು.

ಈಗಾಗಲೇ ಪ್ರತಿದಿನ 40 ರಿಂದ 42 ಡಿಗ್ರಿ ಉಷ್ಣಾಂಶದಿಂದಾಗಿ ಜಿಲ್ಲೆ ಕೊತ ಕೊತ ಕುದಿಯುತ್ತಿರುವ ಹಾಗೆ ಭಾಸವಾಗುತ್ತಿದೆ. ಮಧ್ಯಾಹ್ನ ಮನೆಬಿಟ್ಟು ಹೊರಬಂದಂತಹ ಸ್ಥಿತಿ ಇದೆ. ಕಣ್ಣು ಬಿಟ್ಟರೆ ಕೊರೈಸುವ ಬಿಸಿಲು, ಉಸಿರು ಎಳೆದುಕೊಂಡರೆ ಬಿಸಿಲ ಧಗೆಯನ್ನೇ ಕುಡಿದ ಅನುಭವ. ಒಂಚೂರು ಗಾಳಿ ಬೀಸಿದರೆ ಎಂಬಾಶೆಯಿಂದ ಕಾಯುವ ಜನ ಕುಂತಲ್ಲಿ, ನಿಂತಲ್ಲಿ, ನಡೆದಲ್ಲಿ ಎಲ್ಲೆಲ್ಲೂ ಬೆವರಿನ ಜಲಿಗಳು, ಸಾಕಪ್ಪ ಸಾಕು ಅನ್ನುವಂತಹ ಕೆಟ್ಟ ಜೀವನ ಈ ಕಾಲದ ನಿತ್ಯದ ಗೋಳಾಗಿದೆ.

ಅಂತರ್ಜಲ ಕುಸಿದಿರುವದರಿಂದ ಕೊಳವೆಬಾವಿಗಳಿಗೆ ನೀರು ಸಿಕ್ಕುತ್ತಿಲ್ಲ. ರಿಪ್ಪೆಶರ್ ಮಾಡುವುದಾಗಿ ಹೇಳುತ್ತಿರುವ ಜಿಲ್ಲಾಡಳಿತ ಅದಕ್ಕಾಗಿ ಪ್ರತಿ ತಾಲೂಕಿಗೆ 25 ಲಕ್ಷ ಬಂದಿದೆ. 30 ಲಕ್ಷ ಬಂದಿದೆ ಎಂದು ಹೇಳುತ್ತಿದೆಯೇ ಹೊರತು ಕೆಲಸ ಮಾತ್ರ ನಡೆಯುತ್ತಿಲ್ಲ. ಜಿಲ್ಲೆಯಲ್ಲಿ ಪ್ರತಿದಿನ ಮೂರ್‍ನಾಲ್ಕು ಗ್ರಾಮ ಪಂಚಾಯತ್‌ಗಳ ಮುಂದೆ ನಮ್ಮ ಕೊಳವೆ ಬಾವಿಯಲ್ಲಿ ನೀರು ಬರುತ್ತಿಲ್ಲ. ದುರಸ್ತಿ ಮಾಡಿಸಿ ಎಂದು ಬರಿಕೊಡ ಹೊತ್ತು ಬರುವ ಮಹಿಳೆಯರ ಹೋರಾಟಗಳ ವರದಿ ಪತ್ರಿಕೆಗಳಲ್ಲಿ ಕಾಣಬಹುದು. 800 ಕ್ಕೂ ಹೆಚ್ಚು ಗ್ರಾಮಗಳಿರುವ ಜಿಲ್ಲೆಯಲ್ಲಿ ಸರಕಾರಿ ಮತ್ತು ಖಾಸಗಿ ಕೆರೆಗಳು ಸೇರಿದರೆ 600ಕ್ಕೂ ಹೆಚ್ಚಿವೆ. ಜಿಲ್ಲಾಡಳಿತ ಯೋಜನೆ ರೂಪಿಸಿಕೊಂಡು ಸರಿಯಾಗಿ ಕೆಲಸ ಮಾಡಿ ಆ 600ಕ್ಕೂ ಹೆಚ್ಚಿರುವ ಕೆರೆಗಳನ್ನೆಲ್ಲಾ ತುಂಬಿಸಿದ್ದರೆ ಜನಗಳಿಗೂ ಮತ್ತು ಜಾನುವಾರಗಳಿಗೂ ನೀರಿನಭಾವ ತಕ್ಕಮಟ್ಟಿಗೆ ಸಿಗುತ್ತಿತ್ತು.

ಆದರೆ ಜಿಲ್ಲಾಡಳಿತದ ನಿರಂತರ ವೈಫಲ್ಯದಿಂದಾಗಿ ಕುಡಿಯುವ ನೀರಿಗೆ ಆಹಾಕಾರವಾಗುತ್ತಿದೆ. ಜನಗಳಿಗೆ ನೀರು ಸಿಗದಂತ ಸ್ಥಿತಿ ಇರುವಾಗ ಇನ್ನು ಜಾನುವಾರಗಳಿಗೆಲ್ಲಿ ನೀರು? ಎಂಬಂತಾಗಿದೆ.

ಕುಡಿಯುವ ನೀರಿಗೂ ಮತ್ತು ವಿದ್ಯುತ್‌ಗೂ ಸಂಬಂಧವಿದೆ. ಗ್ರಾಮೀಣಭಾಗದಲ್ಲಿ ವಿದ್ಯುತ್ ಬಂದರೆ ಬೋರವೆಲ್‌ಗಳು ಕೆಲಸ ಮಾಡುತ್ತವೆ. ನೀರು ಸಿಗಲು ಸಾಧ್ಯವಾಗುತ್ತದೆ. ಆದರೆ ಗ್ರಾಮೀಣ ಭಾಗದಲ್ಲಿ ಕರೆಂಟು ಎಂಬುದು ಕನಸಿನ ಗಂಟು ಎಂದಾಡುವುದು ಸಹಜವಾಗಿದೆ. ದಿನದಲ್ಲಿ ಒಂದೆರಡು ಸಾರಿ ಆಗೊಮ್ಮೆ ಈಗೊಮ್ಮೆ ಬರುವ ಅವಧಿ ಎಂಬಂತೆ ಕರೆಂಟ್ ಬರುತ್ತದೆ. ಕರೆಂಟ್‌ನ ಸ್ಥಿತಿ ಗೊತ್ತಿರುವ ಜಿಲ್ಲಾಡಳಿತ ಕುಡಿಯುವ ನೀರಿಗಾಗಿ ಕರೆಂಟ್ ಇಲ್ಲದಿರುವ ಕಡೆ ಜನರೇಟರ್ ವ್ಯವಸ್ಥೆ ಮಾಡುವೆ ಎಂದು ವೀರಾವೇಶದಿಂದ ಹಾರಾಡಿತು. ಆದರೆ ಆ ಡೀಸೆಲ್ ಜನರೇಟರ್ ಎಂಬುದು ಹೇಗಿರುತ್ತದೆಂದು ಜಿಲ್ಲೆಯ 99 ಹಳ್ಳಿಗಳಲ್ಲಿ ಗಂಭೀರವಾಗಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಯಾವೊಂದು ಹಳ್ಳಿಯಲ್ಲಿ ಆ ಡೀಸೆಲ್ ಜನರೇಟರ್ ನೋಡಿಲ್ಲ. ಇನ್ನು ಶೋಭಕ್ಕನ ತಡೆರಹಿತ ವಿದ್ಯುತ್ ಪೂರೈಕೆ ಘೋಷಣೆ ಕೇವಲ ಘೋಷಣೆಯಾಗಿದೆ ಅಷ್ಟೇ.

ಕುಡಿಯುವ ನೀರಿನ ಬಗ್ಗೆ ದೊಡ್ಡ ದೊಡ್ಡ ಮಾತನಾಡುವ ಜಿಲ್ಲಾಡಳಿತ ಮೇವಿನ ಬಗ್ಗೆ ಸಹ ಸಾಕಷ್ಟು ಮಾತಾಡಿದೆ. ಆದರೆ ರೈತರಿಗೆ ನೇರ ಸಬ್ಸಿಡಿ ಎಂಬ ಮಾತು ಎಲ್ಲೂ ಜಾರಿಗೆ ಬಂದಿಲ್ಲ. ಪಂಚಾಯತಿಗೊಂದು ಮೇವು ಕೇಂದ್ರ ಆರಂಭಿಸಿ ಎಂಬ ಬೇಡಿಕೆಗೆ ಮನ್ನಣೆ ಸಿಕ್ಕಿಲ್ಲ. ಹೋಬಳಿಗೊಂದು ಗೋಶಾಲೆ ಆರಂಭಿಸುವ ವಿಚಾರ ಆಡಳಿತ ಕೈಬಿಟ್ಟಂತೆ ಕಾಣುತ್ತದೆ. ಮೇವು ತರಲು ರೈತರು ದೂರದ ಜಿಲ್ಲೆಗಳವರೆಗೂ ಓಡಾಡುತ್ತಿದ್ದುದು ನೋಡಿದರೆ ಇಲ್ಲಿ ರೈತರನ್ನು ಕಾಪಾಡುವ ಸರಕಾರವಿಲ್ಲ. ಬದಲು ರೈತರನ್ನೇ ಕಾಡುವ ಸರಕಾರವಿದೆ ಎನ್ನಿಸುತ್ತದೆ.

ಬಡವರಿಗೆ ಬದುಕಲು ಕೆಲಸಕೊಡಿ ಎಂದು ಕೇಳಿದರೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಕೇಳಿ ಎನ್ನುತ್ತಾರೆ. ಹೋಗಲು ಅಂತ ಅಲ್ಲಿ ಕೆಲಸಕ್ಕೆ ಅರ್ಜಿ ಹಾಕಲು ಹೋದರೆ ಪಂಚಾಯತಿಗಳಲ್ಲಿ ಸಿಬ್ಬಂದಿ ಇರುವುದಿಲ್ಲ. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪಂಚಾಯತಿಗೆ ಬರಬೇಕೆಂದು ಹೋರಾಟ ಮಾಡಬೇಕು. ಆತ ಬಂದು ಅರ್ಜಿ ಪಡೆದು ಇನ್ನು ಕ್ರಿಯಾ ಯೋಜನೆ ಆಗಿಲ್ಲವಾದ್ದರಿಂದ ಆದ ತಕ್ಷಣ ಕೆಲಸ ಕೊಡುವುದಾಗಿ ಹೇಳ್ತಾನೆ. ದುಡಿವ ಜನ ಖಾಲಿ ಹೊಟ್ಟೇಲಿ ಕಾಯುತ್ತ ಬರದ ಬಿಸಿಲಿನಲ್ಲಿ ಬೇಯುತ್ತಾ



ಕೂಡುವಂತಾಗುತ್ತದೆ. ಜೀವ ಹಿಡಿದುಕೊಂಡಿರಲು ಗಂಜಿಕೇಂದ್ರ ತೆಗೆಯಿರಿ ಇಲ್ಲವೆ ವಿಶೇಷ ಆಹಾರ ಪ್ಯಾಕೇಜ್ ಘೋಷಣೆ ಮಾಡಿ ಧಾನ್ಯ ವಿತರಣೆ ಮಾಡಿ ಎಂದು ಹಲವು ಹೋರಾಟಗಳನ್ನು ಮಾಡಲಾಗಿದೆ. ಸರಕಾರದಿಂದ ಇದಕ್ಕೆ ಶೂನ್ಯ ಪ್ರತಿಕ್ರಿಯೆ.

ಜಿಲ್ಲೆಯ ಪ್ರಕೃತಿ ವಿಕೋಪದ ನಿಧಿಯಲ್ಲಿ 6 ಕೋಟಿ ಹಣ ಇದೆ. ಬರ ಎದುರಿಸಲು ಯಾವ ತೊಂದರೆಯೂ ಇಲ್ಲ ಎಂದು 2 ತಿಂಗಳಿಂದ ಜಿಲ್ಲಾಧಿಕಾರಿ ಶ್ರೀಮತಿ ವಿ.ಎಂ. ಸಾವಿತ್ರಿಯವರು ಪ್ರತಿದಿನ ಸುದ್ದಿಗೋಷ್ಠಿಯಲ್ಲಿ ಹೇಳ್ತಾನೆ ಇದ್ದಾರೆ. ಕಳೆದ 2 ತಿಂಗಳಲ್ಲಿ 6 ಕೋಟಿಯಲ್ಲಿ ಒಂದು ಲಕ್ಷ ಸಹ ಕಮ್ಮಿ ಆಗ್ತಾ ಇಲ್ಲಾ ಎಂದರೆ ಅದು ತೋರಿಸಲಿಕ್ಕೆ ಇರುವ ಹಣವೆ? ಅದು ಕುಡಿಯುವ ನೀರಿಗೆ ಮೇವಿಗೆ, ಗಂಜಿಕೇಂದ್ರಕ್ಕೆ ಖರ್ಚು ಮಾಡಬಹುದಲ್ಲವೆ? ಆದರೆ ಖರ್ಚು ಮಾಡುತ್ತಿಲ್ಲ ಅಂದರೆ ಹಣದ ಕೊರತೆ ಇಲ್ಲ ಎಂದು ತೋರಿಸಲಿಕ್ಕೆ ಮಾತ್ರ ಆ ಹಣ ಇದು ಜಿಲ್ಲಾಡಳಿತದ ವೈಖರಿ.

ಸನ್ಮಾನಗಳ ಸುರಿಮಳೆಯಲ್ಲಿ ಮೀಯುತ್ತಿದ್ದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಮಾಧ್ಯಮದವರು, ಜನರೂ ಈ ಬರಗಾಲದಲ್ಲಿ ನಿನಗಿದೆಂಥ ಹುಚ್ಚು ಎಂದು ಕ್ಯಾಕರಿಸಿ ಉಗಿದ ಮೇಲೆ ಗ್ನಾನೋದಯವಾಗಿ ಸೀದಾ ಬಂದದ್ದೇ ನಮ್ಮ ಜಿಲ್ಲೆಗೆ ಬಂದ ಈ ವಯ್ಯ ಏನಾದರೂ ಮಾಡಿಯಾನು ಎಂದು ಕಾಯುತ್ತಿದ್ದ ಜನರ ಮುಂದೆ ತನಗೆ ಮುಖ್ಯ ಮಂತ್ರಿ ಖುರ್ಚಿ ಕೊಡಲಿಲ್ಲ ಎಂದು ಗೊಳೋ ಎಂದು ಅತ್ತಿದ್ದೆ ಒಂದು ಸಾಧನೆ. ಈ ಗೋಳು ನೋಡು ಜನ ಈ ಎಪ್ಪಗೆ ಆ ಮುಖ್ಯಮಂತ್ರಿ ಖುರ್ಚಿ ಹುಚ್ಚು ಹಿಡಿದಿದೆ, ಧಾರವಾಡದ ಮೆಂಟಲ್ ಆಸ್ಪತ್ರೆಗೆ ಕಳಿಸೋದು ಬಿಟ್ಟು ಇಲ್ಲಿಗ್ಯಾಕ ಕಳಿಸ್ಯಾರ ಸರಕಾರದವರು ಎಂದು ಗೊಣಗುವಂತಾಯ್ತು.

ಇನ್ನು ಸರಕಾರದಿಂದ ಬರ ಅಧ್ಯಯನಕ್ಕಾಗಿ ಸಚಿವ ಬಸವರಾಜ ಬೊಮ್ಮಾಯಿ ತಂಡ ಬರುತ್ತದೆ ಎಂದು ಕಾದು ಕುಳಿತವರಿಗೆ ಎಂದಿನಂತೆ ಈ ಜಿಲ್ಲೆ ಮಲತಾಯಿ ಧೋರಣೆ ಬಲಿ ಎಂದು ಕೂಗಾಡಲು ಅವಕಾಶ ನೀಡಿ ತಂಡ ಬರಲಿಲ್ಲ.

ಬಳ್ಳಾರಿ ಪಾದಯಾತ್ರೆ ಮುಗಿಸಿ ನಿದ್ದೆ ಹೋಗಿದ್ದ ಸಿದ್ರಾಮಯ್ಯನವರು ಎದ್ದು ಬರನೋಡಲು ಜಿಲ್ಲೆಗೆ ಬಂದರು. ತಮ್ಮ ಕೇಂದ್ರ ಸರಕಾರ ಸಾಕಷ್ಟು (ಎಷ್ಟು) ದುಡ್ಡು ಕೊಟ್ಟಿದೆ ಆದರೆ ಬಿಜೆಪಿಗೆ ಬಳಸಿಕೊಳ್ಳುವ ತಾಕತ್ತಿಲ್ಲ ಎಂದು ಗುಡುಗಿ ಹೋದರು.

ನೂರಾರು ಕೋಟಿ ರೂಪಾಯಿಗಳ ಬೆಳೆನಷ್ಟ ಹೊಂದಿದ ರೈತರು ಆಂಧ್ರದ ಮಾದರಿಯಲ್ಲಿ ಬೆಳೆನಷ್ಟ ಪರಿಹಾರ ನೀಡಿ ಎಂದು ಕೇಳಿದರೆ ಸರಕಾರದಿಂದ ಶೂನ್ಯ ಪ್ರತಿಕ್ರಿಯೆ ಬದಲು ಕಂದಾಯ ಮನ್ನಾ ಮಾಡಿದ್ದೆ ದೊಡ್ಡ ಸಾಧನೆ ಎಂಬಂತೆ ತೋರಿಕೆ ಬೇರೆ.

ಬೆಳೆ ಇಲ್ಲ. ಕೆಲಸ ಇಲ್ಲ, ಕುಡಿಯಲು ಸಹ ನೀರಿಲ್ಲ. ಮೇವು ಇಲ್ಲ, ವಿದ್ಯುತ್ ಇಲ್ಲ ಈ ಎಲ್ಲಾ ಇಲ್ಲಗಳ ಮಧ್ಯ ಬೇಡವೆಂದರೂ ಬಿಡದ ಬಿಸಿಲು, ರಣಬಿಸಿಲು ಮತ್ತು ನಿರಂತರವಾದ ಬೆವರು ಈ ಅವಳಿ ಕಾಟಗಳ ಜೊತೆ ಇಲ್ಲಿಯವರೆಗೆ ಗೊತ್ತಿಲ್ಲ 8 ಚಿತ್ರ ವಿಚಿತ್ರವಾದ ರೋಗ ರುಜಿನಿಗಳು. ಈ ಎಲ್ಲಾ ಕಷ್ಟಗಳ ನಡುವೆಯೂ ಬದುಕಿಗಾಗಿ ದಿನ ನಿತ್ಯ ಹೋರಾಟದ ಕಣದಲ್ಲಿ ಜನರು.

ಜನಶಕ್ತಿ
ಕನ್ನಡ ವಾರಪತ್ರಿಕೆ


ಗಣಿ ಮಾಫಿಯಾದ ರಾಜಕೀಯ ಯಾತ್ರೆ...

ಪುಟ 3 ರಿಂದ

ಈ 'ಪಾದಯಾತ್ರೆ' ಪಾವಿತ್ರ್ಯಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೇ?. ಹೊರಗೆ ಬರದ ಕಾರಣ, ರೆಡ್ಡಿಯ ದಂಡನಾಯಕನಿಗೆ ಗುರಾಣಿ!, ಹಲವು ಕಳಂಕಗಳ ಮಸಿ ಮುಖಕ್ಕೆ ಮೆತ್ತಿಕೊಂಡವರಿಗೆ ಶರಣರೊಂದಿಗೆ ಸಮೀಕರಿಸಿ ಮುಖ ಉಳಿಸಿಕೊಳ್ಳುವ ಹುನ್ನಾರ ಒಂದಂತೂ ಸ್ಪಷ್ಟ. ಶ್ರೀರಾಮುಲು ಪಾದಯಾತ್ರೆ ಬರದ ಬಗ್ಗೆ ಸರಕಾರದ ನಿರ್ಲಕ್ಷ್ಯದ ವಿರುದ್ಧವೆಂದಾಗಲೀ ದುರಾಡಳಿತದ ಕೋಮುವಾದಿ ಬಿಜೆಪಿ ಪಕ್ಷಕ್ಕೆ ಪರ್ಯಾಯ ಶಕ್ತಿಯಾಗಲು ಪ್ರಯತ್ನ ಎಂದಾಗಲೀ ಭಾವಿಸಿದರೆ ಅದು ಮೂರ್ಖರ ಸ್ವಪ್ನಲೋಕ ವಿಹಾರವೆಂದೇ ಹೇಳಬೇಕಾಗುತ್ತದೆ.

ಅಕ್ರಮ ಗಣಿಗಾರಿಕೆ–ಸಾಗಾಣಿಕೆಯ ಹಗರಣಗಳ ಪ್ರಕರಣದಲ್ಲಿ ರೆಡ್ಡಿ–ಶ್ರೀರಾಮುಲು ಗ್ಯಾಂಗ್ ಸಿಕ್ಕಿಹಾಕಿಕೊಂಡಿದೆ. ಸಿಬಿಐ ತನಿಖೆಯ ಕುಣಿಕೆ 'ರೆಡ್ಡಿ ಗುಂಪಿ'ನ ಕತ್ತನ್ನು ಅಮುಕುತ್ತಿದೆ. ಅವರ ಲೂಟಿಯಲ್ಲಿ ಪಾಲು ಪಡೆದ ಬಿಜೆಪಿ ನಾಯಕರು, ರಾಜ್ಯ ಬಿಜೆಪಿ ಸರ್ಕಾರ, ದೇಶಭಕ್ತ ಚೆಡ್ಡಿಗಳು ಮೆತ್ತಗೆ ಕೈ ಜಾಡಿಸಿಕೊಂಡು ಬಚಾವಾಗಲು 'ದೂರ' ನಿಂತಂತೆ ಸೋಗಿನ ನಾಟಕವನ್ನಾಡುತ್ತಿವೆ. ಈಗ ತನಿಖೆಯಲ್ಲಿ ಹೊರ ಬಂದ ಸಂಗತಿಗಳೇ ಭ್ರಷ್ಟತೆಯ ವ್ಯಾಪಕತೆಯನ್ನು ತೋರಿಸಿದೆ. ಕೇಂದ್ರದ ಕಾಂಗ್ರೆಸ್ ಸರಕಾರ ತನ್ನ ರಾಜಕೀಯ ಉಳಿವಿಗಾಗಿ ಜನಾರ್ದನರೆಡ್ಡಿ–ಜಗನ್‌ಮೋಹನರೆಡ್ಡಿಗಳನ್ನು ಬಗ್ಗಿಸಲು ತನಿಖೆಯಲ್ಲಿ ಹೆಚ್ಚು ಗಮನ ಕೇಂದ್ರೀಕರಿಸಿದೆ. ಹೀಗಾಗಿ ಆ ಪ್ರಕರಣಗಳು ಅಷ್ಟು ಸುಲಭವಾಗಿ ಇತ್ಯರ್ಥವಾಗುವ ಸಂಭವಗಳಂತೂ ಸದ್ಯ ಇಲ್ಲ. ರೆಡ್ಡಿಗಳ ರಾಜೀ ಸಂಧಾನದ ಪ್ರಯತ್ನಗಳೂ ಫಲ ನೀಡಿಲ್ಲ, ಹೀಗಾಗಿ ಈ ಗಣಿ ಮಾಫಿಯಾಕ್ಕೆ ರಾಜಕೀಯ ಆಶ್ರಯ–ನೆಲೆ, ಜನರ ಬೆಂಬಲ ಜರೂರಾಗಿ ಬೇಕಾಗಿದೆ. ಅದಕ್ಕಾಗಿಯೇ ಹಿಂದಿನಿಂದಲೂ ಬಳಸುತ್ತಾ ಬಂದಂತೆ ಜಗನ್–ಜನಾರ್ದನರೆಡ್ಡಿಗಳ ಬಂಧೂಕಿಗೆ ಹೆಗಲಾಗಿ , ಬಡಿದಾಟದ ಗುರಾಣಿಯಾಗಿರುವುದೂ ಹಿಂದಿನಂತೆ ಈಗಲೂ ಶ್ರೀರಾಮುಲುವೇ..

ರಾಜಕೀಯ ತಂತ್ರ



ಹೀಗಾಗಿ ತಮ್ಮ ನೆಲೆ, ಬಲ ತೋರಿಸದೇ ರೆಡ್ಡಿ ಗ್ಯಾಂಗ್‌ನ ಆಟಗಳು ಹೆಚ್ಚು ನಡೆಯುವುದಿಲ್ಲ, ಆದ್ದರಿಂದಲೇ ಈ ಹಂತದಲ್ಲಿ ತಮಗಿರುವ ರಾಜಕೀಯ– ಸಂಘಟನಾ ನೆಲೆಯನ್ನು ಕ್ರೋಡೀಕರಿಸಿಕೊಳ್ಳಲು ಈ ಸ್ವಾಭಿಮಾನಿಗಳು (!?) ಸ್ವತಂತ್ರ ಪಕ್ಷವನ್ನು ಆರಂಭಿಸಿರುವುದು. ಗದಗ್‌ನಲ್ಲಿ ಉತ್ತರಕ್ಕಾಗಿ ಉಪವಾಸ ನಡೆಸಿದ್ದು, ರಾಜ್ಯದಲ್ಲಿ ಬಿಜೆಪಿ ಸರ್ಕಾರದ ದುರಾಡಳಿದ ವಿರುದ್ಧ ಬೆಳೆಯುತ್ತಿರುವ ಜನರ ಅತೃಪ್ತಿ, ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳ ನಿಷ್ಕ್ರೀಯತೆಯ ಸನ್ನಿವೇಶ, ಬಿಜೆಪಿಯೊಳಗಿನ ಹಲವು ಗುಂಪುಗಳ ಕಿತ್ತಾಟದ ಸಂದರ್ಭವನ್ನು ಬಳಸಿಕೊಂಡು ಬೆಳೆಯಲು ಪ್ರಯತ್ನಿಸುತ್ತಲಿರುವುದು. ಮುಖ್ಯವಾಗಿ ರಾಜಕೀಯ ಶಕ್ತಿಗಳಲ್ಲಿ ಸಡಿಲ ಸ್ಥಿತಿಯಿರುವ ಮತ್ತು ಮೈನಿಂಗ್ ಮಾಫಿಯಾ ಸಾಮ್ರಾಜ್ಯವಿರುವ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದ ಪ್ರದೇಶಕ್ಕೆ ಹೆಚ್ಚು ಗಮನವನ್ನು ರೆಡ್ಡಿ ಗ್ಯಾಂಗ್ ಕೇಂದ್ರೀಕರಿಸಿದೆ. ಅದಕ್ಕಾಗಿ 'ಅಹಿಂದ' ಜಾತಿ ರಾಜಕಾರಣದೊಂದಿಗೆ ಲಿಂಗಾಯತ ಜಾತಿಯ ಒಂದು ವಿಭಾಗವನ್ನೂ ಸೆಳೆಯುವ ತಂತ್ರ ರೂಪಿಸಿದೆ. ಇದಕ್ಕೆ ಲೂಟಿ ಹೊಡೆದ ಹಣದ ಸಾಥ್ ಇದ್ದೇ ಇದೆ.

ಮುಂಬರುವ ಚುನಾವಣೆಯಲ್ಲಿ ಕನಿಷ್ಠ 20–25 ಸ್ಥಾನ ಗಳಿಸಿದರೂ ಸರ್ಕಾರದ ರಚನೆಯಲ್ಲಿ ತಮ್ಮದೂ ಒಂದು ಮುಖ್ಯ ಪಾತ್ರವಿರುತ್ತದೆಯೆಂದೂ ರೆಡ್ಡಿ ಗುಂಪು ಲೆಕ್ಕಾಚಾರ ಹಾಕಿದೆ. ಬಿಜೆಪಿಯೊಂದಿಗೆ ಹೊಂದಾಣಿಕೆಯಾಗದಿದ್ದರೆ ಯಡಿಯೂರಪ್ಪನವರ ಬಣ, ಇಲ್ಲವೇ ಕುಮಾರಸ್ವಾಮಿಯವರ ಜೆಡಿ(ಎಸ್)ಗಳೊಂದಿಗೆ ಮೈತ್ರಿ ಸಾಧಿಸುವ ಸಾದ್ಯತೆಗಳನ್ನು ತೆರೆದಿಟ್ಟಿದೆ. ರಾಜಕೀಯವನ್ನು ಡೀಲ್ ಆಗಿ ಪರಿಗಣಿಸಿದವರಿಗೆ ಅಸಾದ್ಯವಾದುದು ಇರಲಿಕ್ಕಿಲ್ಲ. ಯಾವುದೂ ಇದಕ್ಕೂ ಹೆಚ್ಚಿಗೆ ಗಂಭೀರವಾಗಿ ಅದು ಸಿಬಿಐ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಕಾಂಗ್ರೆಸ್‌ನೊಂದಿಗೆ ಚೌಕಾಸಿ/ಬ್ಲಾಕ್ ಮೇಲ್ ನಡೆಸಲು ಉತ್ಸುಕವಾಗಿದೆ. ಅದಕ್ಕೂ ಅಗತ್ಯವಾದದ್ದು ಈಗಲೂ ತಮಗೆ ರಾಜಕೀಯ ಬಲವಿದೆಯೆಂದು ತೋರಿಸುವ ಅನಿವಾರ್ಯತೆ. ಹೀಗಾಗಿ ಎಲ್ಲಾ ದಿಕ್ಕುಗಳಿಂದಲೂ ರೆಡ್ಡಿ ಗುಂಪು ರಾಜಕೀಯ, ಸಂಘಟನಾತ್ಮಕವಾಗಿ ಕಾರ್ಪೊರೇಟ್ ಶೈಲಿ ಕಾರ್ಯಾಚರಣೆಗೆ ಇಳಿದೆ. ಅದಕ್ಕಾಗಿ ನೂರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡುತ್ತಿದೆ. ಅದರ ಒಂದು ಹನಿ 'ನಾಡಿನ ಕೆಲವು ಚಿಂತಕರ ನಾಲಿಗೆ'ಗೂ ರವಾನೆಯಾಗುತ್ತಿದೆ!.

ಹೀಗೆ ಬಹುಮುಖಿ ದುಷ್ಟ ರಾಜಕೀಯ ಅಜೆಂಡಾಗಳ ಹಿತಾಸಕ್ತಿ ಇರಿಸಿಕೊಂಡು ಮತ್ತೇ ರಾಜ್ಯವನ್ನು , ಪ್ರಜಾಪ್ರಭುತ್ವವನ್ನು ನಾಶಗೊಳಿಸಲು ಶಕ್ತಿ ವೃದ್ಧಿಸಿಕೊಳ್ಳಲು ಹೆಣಗುತ್ತಿರುವ ಈ 'ಗಣಿ ಮಾಫಿಯಾ'ಕ್ಕೆ ಕೆಲವು ಭಟ್ಟಂಗಿಗಳು ಉಸಿರು ಕಟ್ಟಿ ಅರಚುತ್ತಿರುವಂತೆ ಕರ್ನಾಟಕದ ಶರಣ ಪರಂಪರೆಯ ವಾರಸುದಾರಗಲೀ, ಸಾಮಾಜಿಕ ನ್ಯಾಯದ ಹರಿಕಾರರಾಗಲು , ಭವಿಷ್ಯದ ಭರವಸೆಯಾಗುವುದು ಸಾದ್ಯವೇ?.

ಪರ್ಯಾಯ ರೂಪಿಸಲು

ಹೀಗಿರುವಾಗಲೂ, ಶ್ರೀರಾಮುಲು ಪಾದಯಾತ್ರೆಯ ಕಾರ್ಯಕ್ರಮ ಬೀರಬಹುದಾದ ಒಟ್ಟು ಪರಿಣಾಮವನ್ನು ನಿರ್ಲಕ್ಷಿಸಬೇಕಿಲ್ಲ. ರಾಜ್ಯದಲ್ಲಿನ ರಾಜಕೀಯ ಗೊಂದಲದ ಸ್ಥಿತಿಯಲ್ಲಿ ಜನರ ಅತೃಪ್ತಿಯನ್ನು ಬಳಸಲು ಅವರಿಗೆ ಅವಕಾಶ ಕಲ್ಪಿಸುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಎಡ ,ಪ್ರಜಾಸತ್ತಾತ್ಮಕ ಶಕ್ತಿಗಳು ಜನತೆಯ ನಡುವೆ ಸಮಸ್ಯೆಗಳಾಧಾರದಲ್ಲೂ, ರಾಜಕೀಯವಾಗಿಯೂ ತುರ್ತು, ನಿರಂತರ ಸಮರಶೀಲ ಮಧ್ಯ ಪ್ರವೇಶ ಮಾಡಬೇಕು. ಹೀಗಾದಲ್ಲಿ ಮಾತ್ರವೇ ದೊರೆಯುತ್ತಲಿರುವ ರಾಜಕೀಯ ಸನ್ನಿವೇಶ ಬಳಸಿ ನೈಜ ಜನಪರ ಪರ್ಯಾಯ ರೂಪಿಸಲು ಸಾದ್ಯ.

ಬಾಲಂಗೋಚಿ:

ವಿಚಿತ್ರವೆಂದರೆ ಲೋಹಿಯಾವಾದೀ ಚಿಂತಕರೂ, 'ಅಹಿಂದಾ' ಸೂತ್ರ ಪ್ರತಿಪಾದಕರೂ ಆದ ಸಿ.ಎಸ್.ದ್ವಾರಕಾನಾಥ್, ರವೀಂದ್ರ ರೇಶ್ಮೆ, ಅಲ್ಲದೇ ನಟಿ ರಕ್ಷತಾ ಮುಂತಾದವರು ತಮ್ಮ ಅಮೂಲ್ಯ ಚಿಂತನೆಗಳನ್ನೊತ್ತು ರಾಮುಲುನ ಬೆನ್ನು ಹತ್ತಿದ್ದಾರೆ!. ವಿಮೋಚನೆಗಾಗಿ ಕಾದ ಶಬರಿಯಂತೆ. ರಾಮುಲುಗೆ ಸಲಹೆಗಾರರಾಗಿರುವ ಅವರು ಸಲಹೆ ನೀಡುವುದು ತಪ್ಪೇನಲ್ಲ! . ಆದರೆ ಇಲ್ಲಿ ಸಲಹೆಗಳೂ ಉಚಿತ ಅಲ್ಲವಂತೆ!. ಕಾರ್ಪೊರೇಟ್ ವ್ಯವಹಾರದಲ್ಲಿ ಒಂದು ಕೊಂಡರೆ ಒಂದು ಫ್ರೀ ಇರಬಹುದಲ್ಲದೇ ಟೋಟಲ್ ಫ್ರೀ ಇರಲು ಹೇಗೆ ಸಾದ್ಯವಯ್ಯಾ?.

ಪಿ.ಸುಂದರಯ್ಯ ಜನ್ಮಶತಮಾನೋತ್ಸವ

ಪುಟ 7ರಿಂದ

ಮತ್ತು ನಕ್ಸಲೈಟ್ ಚಳವಳಿಯ ಪುಟ್ಟ ಬಂಡವಾಳಶಾಹಿ(ಪೆಟ್ಟಿ ಬೂರ್ಜ್ವಾ) ಕ್ರಾಂತಿಕಾರಕತನವನ್ನು ಸುಲಭವಾಗಿ ಗ್ರಹಿಸುವುದು ಸಾಧ್ಯವಾಯಿತು.

ಪಕ್ಷ ಮತ್ತು ಚಳವಳಿಗಾಗಿ ಕಾರ್ಯಕರ್ತರನ್ನು ತಿದ್ದಿ ತೀಡಿ ಹದಗೊಳಿಸಿ ಬೆಳೆಸುವುದು ಸುಂದರಯ್ಯನವರ ಮತ್ತೊಂದು ಅಸಾಮಾನ್ಯ ಗುಣವಾಗಿತ್ತು. ಅವರು ವಿವಿಧ ಸಂದರ್ಭ, ಹಂತಗಳಲ್ಲಿ ನಾಯಕತ್ವ ವಹಿಸಿದ್ದ ಸಂದರ್ಭಗಳಲ್ಲಿ ಸಮರ್ಥ ಕಾರ್ಯಕರ್ತರನ್ನು ಗುರುತಿಸುತ್ತಿದ್ದರು. ಅವರ ಶಕ್ತಿ ಸಾಮರ್ಥ್ಯ ಅಳೆದು ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡುತ್ತಿದ್ದರು. ಅವರನ್ನು ಪಾಲಿಸಿ ಬೆಳೆಸುತ್ತಿದ್ದರು. ಪಿಎಸ್ ಅವರ ಈ ವಿಶಿಷ್ಠ ಗುಣ ಮತ್ತು ಸಾಮರ್ಥ್ಯ ಹಲವು ಪ್ರಮುಖ ಕಮ್ಯೂನಿಸ್ಟ್ ನಾಯಕರನ್ನು ರೂಪಿಸಿತು. ಇದು ಅವರಲ್ಲಿದ್ದ ಅನನ್ಯ ಸಾಮರ್ಥ್ಯವಾಗಿದೆ.

ಪಿಎಸ್ ಅವರ ಸಮಕಾಲೀನರಲ್ಲಿ ಹಲವಾರು ಕಮ್ಯೂನಿಸ್ಟ್ ನಾಯಕರು ಸ್ವಂತ–ಸಮರ್ಪಣಾ ಶೀಲ ಮತ್ತು ಬದ್ಧ ನಾಯಕರಾಗಿದ್ದಾರೆ. ಆದರೆ ಪಿಎಸ್ ಅವರು ತಮ್ಮ ಸರಳತೆ, ಸಮರ್ಪಣಾ ಮನೋಭಾವ ಮತ್ತು ಸಂಪೂರ್ಣ ಬದ್ಧತೆಯಿಂದ ಅವರೆಲ್ಲರ ನಡುವೆ ವಿಶಿಷ್ಟರಾಗಿದ್ದಾರೆ. ಸುಂದರಯ್ಯನವರು ಆಂಧ್ರಪ್ರದೇಶದ ಹಳ್ಳಿಗಳಲ್ಲಿ ಸಾವಿರಾರು ಮೈಲಿ ಸೈಕಲ್ ತುಳಿದಿದ್ದಾರೆ. ತೆಲಂಗಾಣದ ದಟ್ಟ ಅಡವಿಗಳ ನಡುವೆ ಸಂಚರಿಸಿದ್ದಾರೆ. ಇದಿಷ್ಟೆ ಅಲ್ಲ ಹಲವಾರು ವರ್ಷಕಾಲ ಜೈಲಿನಲ್ಲಿದ್ದರೂ ಅತ್ಯಂತ ಶಿಸ್ತಿನ ಜೀವನವನ್ನು ಅವರು ಸಾಗಿಸಿದ್ದಾರೆ.

ಅವರ ದೈಹಿಕ ಶಕ್ತಿ ಸಾಮರ್ಥ್ಯಕ್ಕೆ ಹಾಗೂ ಅವರ ತಾಳಿಕೊಳ್ಳುವ ಸಾಮರ್ಥ್ಯಕ್ಕೆ ಸರಿಸಾಟಿಯಾಗಿ ನಿಲ್ಲುವವರು ತುಂಬಾ ವಿರಳ ಅಂತಲೇ ಹೇಳಬಹುದು. ಪಕ್ಷದ ವಿಚಾರಕ್ಕೆ ಬಂದರೆ ಅವರೆಂದೂ ಸ್ವಾರ್ಥಿಯಾಗಿದ್ದವರಲ್ಲ, ಅವರು ಸದಾ ಇತರರಿಗೆ ಅನುಕರಣೀಯ ಮಾದರಿಯಾಗಿದ್ದಾರೆ. ಅವರ ಈ ಸರಳತೆ ಮತ್ತು ತ್ಯಾಗ ಮನೋಭಾವಗಳಿಂದಾಗಿ ಆಂಧ್ರಪ್ರದೇಶದಲ್ಲಿ ಕಮ್ಯೂನಿಸ್ಟರಲ್ಲದವರೂ ಅವರನ್ನು ಕಮ್ಯೂನಿಸ್ಟ್ ಋಷಿ ಎಂದು ಕರೆದಿದ್ದಾರೆ.

ಪಿ.ಸುಂದರಯ್ಯನವರ ಜನ್ಮ ಶತಮಾನೋತ್ಸವನ್ನು ಇಡೀ ವರ್ಷ ಆಚರಿಸಬೇಕೆಂದು ಸಿಪಿಐ(ಎಂ)ನ 20ನೇ ಮಹಾಧಿವೇಶನ ಕರೆ ನೀಡಿದೆ. ಈ ಶತಮಾನೋತ್ಸವನ್ನು ಪಕ್ಷವನ್ನು ಬಲಿಷ್ಠವಾಗಿ ಕಟ್ಟಲು ನಿಟ್ಟಿನಲ್ಲಿ ಪ್ರಚಾರಾಂದೋಲನಗಳನ್ನು ಕೈಗೊಳ್ಳಲು ಬಳಕೆ ಮಾಡಿಕೊಳ್ಳಬೇಕು. ಸಿಪಿಐ(ಎಂ) ಪಾಲಿಟ್‌ಬ್ಯೂರೋ ಶೀಘ್ರದಲ್ಲಿ ಈ ಕುರಿತು ಕೈಗೊಳ್ಳಬೇಕಾದ ಕಾರ್ಯಕ್ರಮಗಳ ನ್ನು ಪ್ರಕಟಿಸಲಿದೆ.

ಕನ್ನಡಕ್ಕೆ: ಅಪ್ಪು

ಬಿಜೆಪಿ ದರ್ಬಾರ್

ಆರ್. ರಾಮಕೃಷ್ಣ

ಅಜ್ಜಿಗೆ ಅರಿವೆ ಚಿಂತೆ ಮೊಮ್ಮಗಳಿಗೆ... ಚಿಂತೆ !!

ರಾಜ್ಯದ ಜನರ ಬದುಕಿನ ಜ್ವಲಂತ ಸಮಸ್ಯೆಗಳ ಬಗೆಗೆ ಚರ್ಚೆ ನಡೆದು ಅದಕ್ಕೆ ಪರಿಹಾರವನ್ನು ರೂಪಿಸಬೇಕಾದ ಮಹತ್ವದ ಕೆಲಸ ಆಗಬೇಕಿರುವುದು, ರಾಜ್ಯದ ಸರ್ವತೋಮುಖವಾದ ಬೆಳವಣಿಗೆಗೆ ಅಭಿವೃದ್ಧಿಗೆ ಪೂರಕವಾದ ಯೋಜನೆ ರೂಪಿಸುವ ಕುರಿತ ಗಂಭೀರ ಚರ್ಚೆ ನಡೆಯಬೇಕಿರುವುದು, ಈ ಹಿನ್ನೆಲೆಯಲ್ಲಿ ಅಗತ್ಯವಾದ ಶಾಸನಗಳನ್ನು ರಚಿಸಬೇಕಿರುವುದು ರಾಜ್ಯ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳಲ್ಲಿ.

ವರ್ಷದಲ್ಲಿ ಕನಿಷ್ಟ 60 ದಿನಗಳ ಕಾಲವಾದರೂ ಕಲಾಪಗಳು ನಡೆದರೆ ಮಾತ್ರ ಇಂತಹ ಒಂದಷ್ಟು ಅರ್ಥಪೂರ್ಣವಾದ ಚರ್ಚೆ ಸಾಧ್ಯವಾಗುತ್ತದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳೇ ಆಗಿ ಹೋಗಿದೆ. ಅಂದರೆ ಕನಿಷ್ಟ 240 ದಿನಗಳ ಕಾಲವಾದರೂ ಅಧಿವೇಶನ ನಡೆಯಬೇಕಾಗಿದ್ದಿತು. ಆದರೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವುದು ಕೇವಲ 142 ದಿನಗಳ ಕಲಾಪ. ಇದು ಬರಿ ಅಂಕಿ ಸಂಖ್ಯೆಗಳ ಮಾಹಿತಿ. ಇನ್ನು ಅಧಿವೇಶನದ ಕಲಾಪ ನಡೆದ ಅವಧಿಯಲ್ಲಿ ಚರ್ಚೆಯ ಗುಣಮಟ್ಟ, ಅಧಿವೇಶನ ನಡೆದ ಸೊಗಸು, ಸೊಬಗಿನ ಕುರಿತು ಬಣ್ಣಿಸಲು ಪದಗಳು ಸಾಲವು. ಅಧಿವೇಶನದೊಳಗೆ ಆಳುವ ಪಕ್ಷದ ಜನರ ಗುಂಪುಗಳ ನಡೆವೆಯೇ ಭಿನ್ನಮತದ ಕಿತ್ತಾಟಗಳು, ಬಡಿದಾಟಗಳು, ಸದನದೊಳಗೆ 'ನೀಲಿ ಚಿತ್ರ' ನೋಡುವ ಸಚಿವರ ಮಹಾತ್ಮರು, ಬಜೆಟ್ ಅಧಿವೇಶನಕ್ಕೇ ಬರದೇ ರೆಸಾರ್ಟ್‌ಗಳಲ್ಲಿ ಬೀಡು ಬಿಡುವ ಬಿಜೆಪಿ ಮಂತ್ರಿ ಮಹಾಶಯರು... ಸಭಾಧ್ಯಕ್ಷ ಸ್ಥಾನದ ನಿರ್ಲಜ್ಜ ದುರುಪಯೋಗ...ಶಾಸಕರ ಮೇಲೆ ದಬ್ಬಾಳಿಕೆ...ಪೋಲಿಸ್ ಬಲ ಬಳಸುವ ಯತ್ನ...ಚರ್ಚೆಯೇ ಇಲ್ಲದೇ ಎಷ್ಟೋ ಶಾಸನ, ವಿಧೇಯಕಗಳ ಸಗಟು ಅಂಗೀಕಾರ....ಓ ಹೋ ಹೋ. ಬಣ್ಣಿಸಲಸದಳ. ರಾಜ್ಯದ ಅಭಿವೃದ್ಧಿಯ ಕುರಿತ ಚರ್ಚೆ ಆ ಕಡೆ ಇರಲಿ ಇಂಥ ನಾಚಿಗೆಗೇಡಿ ಸರ್ಕಾರದ ಅವಧಿಯಲ್ಲಿ ಅಧಿವೇಶನದ ಅವಧಿ ಎಷ್ಟು ಕಡಿಮೆ ನಡೆದರೂ ಅಷ್ಟು ಒಳ್ಳೆಯದು ಎಂದು ರಾಜ್ಯದ ಮಾನವಂತ ಜನಕ್ಕೆ ಅನಿಸಿದ್ದರೆ ಆಶ್ಚರ್ಯವೇನು ಇಲ್ಲ. ಅಲ್ಲವೇ?

★

ವಿದ್ಯುತ್ ಸಮಸ್ಯೆ ಉಲ್ಬಣ

ರಾಜ್ಯದ ವಿದ್ಯುತ್ ಬಿಕ್ಕಟ್ಟು ತೀವ್ರವಾಗಿ ಉಲ್ಬಣಿಸಿದೆ. ನಗರ ಪ್ರದೇಶದಲ್ಲಿಯೂ ಅನಿಯಮಿತ ವಿದ್ಯುತ್ ಕಡಿತ ಜಾರಿಗೆ ಬಂದಿದೆ. ಇನ್ನು ಗ್ರಾಮಾಂತರದ ಕತೆಯನ್ನು ಕೇಳುವುದೇ ಬೇಡ. ರಾಜ್ಯ ಸರ್ಕಾರದ ಹೊಣೆಗೇಡಿತನವೇ ವಿದ್ಯುತ್ ಸಮಸ್ಯೆ ಉಲ್ಬಣಿಸಲು ಪ್ರಧಾನ ಕಾರಣವಾಗಿರುವುದು ಮಾತ್ರ ವಿಷಾದನೀಯ ವಿಷಯ.

ರಾಯಚೂರಿನ ಶಾಖೋತ್ಪನ್ನ ವಿದ್ಯುತ್ ಘಟಕಗಳ ಪೈಕಿ ನಾಲ್ಕು ಘಟಕಗಳು ಈಗಾಗಲೇ ಅಗತ್ಯ ನೀರಿನ ಕೊರತೆಯಿಂದ ಸ್ಥಗಿತಗೊಂಡಿವೆ. ಕೃಷ್ಣ ನದಿಯ ನೀರನ್ನು ಮುಂದಾಲೋಚನೆಯಿಂದ ನಿರ್ವಹಿಸುವಲ್ಲಿ ಸರ್ಕಾರದ ವಿಫಲವಾಗಿದೆ. ಮತ್ತು ನೀರು ಖಾಲಿಯಾಗುವುದನ್ನು ಮುಂದಾಗಿಯೇ ಗುರುತಿಸಿ ಸಕಾಲಕ್ಕೆ ಪರ್ಯಾಯ ವ್ಯವಸ್ಥೆ ಮಾಡುವಲ್ಲಿಯೂ ಸರ್ಕಾರ ವಿಫಲವಾಗಿರುವುದು ಎದ್ದು ಕಾಣುತ್ತಿದೆ.

ವಿದ್ಯುತ್ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ವಿದ್ಯುತ್ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಗಂಭೀರ



ಕ್ರಮವನ್ನು ಕೈಗೊಳ್ಳದ ಸರ್ಕಾರ ಈಗ ವಿದ್ಯುತ್ ಖರೀದಿಗೆ 'ಆಸಕ್ತಿ' ತೋರುತ್ತಿದೆ ಎಂಬುದನ್ನು ಜನ ಗಮನಿಸುತ್ತಿದ್ದಾರೆ. ರಾಜ್ಯ ಬಿಜೆಪಿ ದರ್ಬಾರ್‌ನಲ್ಲಿ ವಿದ್ಯುತ್ ಖರೀದಿಗೆ ಒಂದು ವಿಶೇಷವಾದ ಕಾಳಜಿ ಉತ್ಸಾಹ ಇದೆ ಎಂಬುದು ಯಾರಿಗಾದರೂ ಎದ್ದು ಕಾಣುವ ವಿಷಯವಾಗಿದೆ. ಇದರ ಜೊತೆಗೆ ವಿದ್ಯುತ್ ಸರಬರಾಜು ಕಂಪನಿಗಳನ್ನು ಖಾಸಗೀಕರಣ ಮಾಡುವ ಲೆಕ್ಕಾಚಾರಗಳು ಸರ್ಕಾರದ ಮಟ್ಟದಲ್ಲಿ ನಡೆಯುತ್ತಿದೆ ಎಂದು ವರದಿಯಾಗಿದೆ.

ಆರೋಗ್ಯವಾಗಿರುವ ನಾಯಿಗೆ ಹುಚ್ಚು ನಾಯಿ ಎಂಬ ಹಣೆ ಪಟ್ಟಿ ಹಚ್ಚಿ ಕೊಲ್ಲುವ ಸಲುವಾಗಿಯೇ ವಿದ್ಯುತ್ ಉತ್ಪಾದನಾ ಘಟಕಗಳನ್ನು ಹಾಗೂ ವಿದ್ಯುತ್ ಸರಬರಾಜು ಕಂಪನಿಗಳನ್ನು ರೋಗಗ್ರಸ್ಥಗೊಳಿಸಲಾಗುತ್ತಿದೆ ಎಂದು ಹಲವು ತಜ್ಞರು ಹೇಳುತ್ತಿರುವುದು ಸುಳ್ಳಲ್ಲ ಅಂತ ಇವೆಲ್ಲವನ್ನೂ ನೋಡಿದಾಗ ಅನಿಸುತ್ತದೆ. ಆಳುವ ಜನರು ಇಂಧನ ಇಲಾಖೆಯನ್ನು ಬಳಸಿಕೊಂಡು ಭಾರಿ ಭ್ರಷ್ಟಾಚಾರ ನಡೆಸುತ್ತಾ ಬರುತ್ತಿದ್ದಾರೆ ಎಂಬುದು ಹಿಂದಿನಿಂದಲೂ ಇರುವ ಟೀಕೆ. ಈಗ ಖಾಸಗೀಕರಣದ ಪ್ರಯತ್ನ ನೋಡಿದರೆ ಚಿನ್ನದ ಮೊಟ್ಟೆ ಇಡುವ ಕೋಳಿಯನ್ನೇ ಕೊಯ್ಯಲು ಆಳುವ ಜನ ಹೊರಟಿದ್ದಾರೆ ಅನಿಸುತ್ತದೆ. ಹೌದಲ್ಲವೇ ?

★

ಕಟ್ಟುವುದ ಬಿಟ್ಟು ಕೆಡವಲು ನಿಂತಿರುವ 'ಬಿಬಿಎಂಪಿ' ಕತೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ –ಬಿಬಿಎಂಬಿ ಯು ನಿಯಮಾವಳಿಯಂತೆ ತನ್ನ ಬಜೆಟ್‌ನ ಒಟ್ಟು ಮೊತ್ತದಲ್ಲಿ ಶೇ.22.5 ರಷ್ಟು ಹಣವನ್ನು ದಲಿತ ಅಭಿವೃದ್ಧಿಗಾಗಿಯೇ ವೆಚ್ಚ ಮಾಡಬೇಕಾಗಿದ್ದು ಆ ಲೆಕ್ಕದಲ್ಲಿ ದಲಿತರಿಗೆ ಪ್ರಸಕ್ತ ಸಾಲಿನಲ್ಲಿ 10,000 ಮನೆಗಳನ್ನು ಕಟ್ಟಿ ಕೊಡಬೇಕಾಗಿತ್ತು. ಆದರೆ ಬಿಬಿಎಂಪಿ ಕಟ್ಟಿ ಕೊಟ್ಟಿರುವುದು ಕೇವಲ 3,000 ಮನೆಗಳು ಮಾತ್ರ. ಇದು ಬಿಬಿಎಂಪಿಯ ದಲಿತರ ಬಗೆಗಿನ ಕಾಳಜಿಗೆ ಸಾಕ್ಷಿಯಾಗಿದೆ. ಬಿಬಿಎಂಪಿಯ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಬಿಜೆಪಿ ಪಕ್ಷ ಅಂತ ಪ್ರತ್ಯೇಕವಾಗಿ ಬೇರೆ ಹೇಳಬೇಕಿಲ್ಲ.

ಆದರೆ ಮತ್ತೊಂದು ಕಡೆ ಬಿಬಿಎಂಪಿ ಮಾಡಲು ಹೊರಟಿರುವ ಘನಂದಾರಿ ಕೆಲಸ ನೋಡಿ. ಮಲ್ಲೇಶ್ವರ, ಕೆ.ಆರ್.ಪುರಂ, ಜಯನಗರ ಮುಂತಾದ ಬಡಾವಣೆಗಳ ಹಣ್ಣು, ತರಕಾರಿ ಮಾರುಕಟ್ಟೆಗಳಲ್ಲಿನ ಬಡವರ ಅಂಗಡಿಗಳನ್ನು ಕೆಡವಿ ಅಲ್ಲಿ ನೂರಾರು ಕೋಟಿ ವೆಚ್ಚದಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣಗಳನ್ನು ಕಟ್ಟಲು ಅದು ಯೋಜಿಸಿದೆ. ಖೋಡೆ, ಖೇಣಿ, ಮಲ್ಯರಂತಹವರ ಮಕ್ಕಳ್ಯಾರು ಇಲ್ಲಿ ತರಕಾರಿ ಹಣ್ಣು ಮಾರುವುದಿಲ್ಲ. ಇವರೆಲ್ಲ ಬಡವರು. ಬಡವರ ಅಂಗಡಿ ತಾನೇ– ಹೋಗಲಿ ಬಿಡಿ ಅನ್ನುವುದೇ ಬಿಬಿಎಂಪಿಯ ನೀತಿ. ಈ ಜನರಿಗೆ ಯಾವುದೇ ಪರ್ಯಾಯ ವ್ಯವಸ್ಥೆಯನ್ನು ಒದಗಿಸುವ ಲೆಕ್ಕವೂ ಬಿಬಿಎಂಪಿ ಬಳಿಯಲ್ಲಿಲ್ಲ.

★

ಪಟ್ಟಣ್ಣ ಚಿತ್ರ ಮಂದಿರವನ್ನೂ ಬಿಟ್ಟಿಲ್ಲ

ತರಕಾರಿ ಮಾರುಕಟ್ಟೆ ಜಾಗವನ್ನು ಒಡೆಯುವುದಲ್ಲದೇ 'ಜಯನಗರ ಕಾಂಪ್ಲೆಕ್ಸ್' ಎಂದೇ ಖ್ಯಾತವಾದ ಜಾಗದಲ್ಲಿರುವ ಪುಟ್ಟಣ್ಣ ಚಿತ್ರ ಮಂದಿರವನ್ನೂ ಒಡೆಯಲು ಬಿಬಿಎಂಪಿ ಯೋಜಿಸಿದೆ. 70–80 ಲಕ್ಷ ಜನಸಂಖ್ಯೆ ಇರುವ ಇಡೀ ಬೃಹತ್ ಬೆಂಗಳೂರು ಮಹಾನಗರಿಗೆ– ಸಜ್ಜನರು, ಮಾನವಂತರು ಕುಳಿತು ನೋಡುವಂತಹ ಸಿನಿಮಾಗಳಿಗೆ ಆದ್ಯತೆ ನೀಡುವ ಒಂದೇ ಒಂದು ಸಿನಿಮಾ ಮಂದಿರ ಇಲ್ಲ. ಕಡಿ, ಕೊಚ್ಚು, ಕೊಲ್ಲು ಎನ್ನುವ, ಇಲ್ಲವೇ ದ್ವಂದಾರ್ಥದ ಸಂಭಾಷಣೆಯನ್ನೇ ಬಂಡವಾಳ ಮಾಡಿಕೊಂಡ, ಅಥವಾ ಕೀಳು ಅಭಿರುಚಿಯನ್ನು ಬಿತ್ತುವ ವ್ಯಾಪಾರಿ ಸಿನಿಮಾಗಳ ಲಾಬಿಗಳನ್ನು ಎದುರಿಸಿ, ಈ ಬಲಾಢ್ಯ ಶಕ್ತಿಗಳ ತೋಳ್ಬಲವನ್ನು ಸೋಲಿಸಿ, 'ಗರಂ ಮಸಾಲಾ' ಇಲ್ಲದ ಸದಭಿರುಚಿಯ ಚಲನ ಚಿತ್ರವನ್ನು ಒಂದೇ ಒಂದು ವಾರ ಸಿನಿಮಾ ಥಿಯೇಟರ್‌ಗಳಲ್ಲಿ ಉಳಿಸಿಕೊಳ್ಳುವುದು ದೊಡ್ಡ ಸಾಹಸವೇ ಸರಿ. ಇಂಥ ಸಂದರ್ಭದಲ್ಲಿ ಸಿನಿಮಾ ರಂಗದ ತಿಮಿಂಗಲಗಳ ಒತ್ತಡಗಳಿಲ್ಲದ ಮತ್ತು ಖಾಸಗಿ ಸಿನಿಮಾ ಥಿಯೇಟರ್‌ಗಳ ಮಾಲೀಕರ ಹಂಗಿಲ್ಲದ ಒಂದು ಸಾರ್ವಜನಿಕ ಚಲನ ಚಿತ್ರ ಮಂದಿರವನ್ನು ರೂಪಿಸಿ ಜನತೆ ಸದಭಿರುಚಿಯ ಸಿನಿಮಾ ನೋಡುವ ಅವಕಾಶ ಮಾಡಿಕೊಡಬೇಕಾದ ಜವಾಬ್ದಾರಿ ಬಿಬಿಎಂಪಿಗೆ ಇತ್ತು ಮತ್ತು ಇದೆ. ಚಿತ್ರರಂಗದ ಹಾಗೂ ಸಾಂಸ್ಕೃತಿಕ ರಂಗದ ಹಲವು ಪ್ರಜ್ಞಾವಂತರು ಈ ಬಗೆಗೆ ದನಿ ಎತ್ತಿದ್ದರು. ಪುಟ್ಟಣ್ಣ ಚಿತ್ರ ಮಂದಿರವನ್ನು ಇಂತಹ ಒಂದು ಸದಭಿರುಚಿಯ ಸಿನಿಮಾಗಳ ಮಂದಿರವಾಗಿ ರೂಪಿಸುವ ಅವಕಾಶ ಇತ್ತು. ಆದರೆ ಈ ಬಗೆಗೆ 'ಖಬರೇ' ಇಲ್ಲದ ಬಿಬಿಎಂಪಿ ತನ್ನ ಒಡೆತನದ ಒಂದು ಸಿನಿಮಾ ಮಂದಿರವಾದ ಪಟ್ಟಣ್ಣ ಚಿತ್ರ ಮಂದಿರವನ್ನು ಒಡೆದು ಹಾಕಲು ಹೊರಟಿದೆ. ಏನೇನೋ ಕುಂಟು ನೆಪ ಹೇಳಿ ಜಯನಗರದ ಈ ಚಿತ್ರ ಮಂದಿರವನ್ನು ಬಿಬಿಎಂಪಿ ಬಹಳ ದಿನದಿಂದ ಮುಚ್ಚಿತ್ತು. ಈಗ ಆ ಕಟ್ಟಡಕ್ಕೆ ಹಾರೆ ಹಾಕುತ್ತಿದೆ.

★

ಬರವಾದರೇನು? ಗರ ಬಡಿದರೇನು? ಬಿಜೆಪಿಗರ 'ನೆಮ್ಮದಿ'ಗೆ ಭಂಗವಿಲ್ಲ

ರಾಜ್ಯದಲ್ಲಿ ಭೀಕರ ಬರ ತಾಂಡವವಾಡುತ್ತಿದೆ. ಮುಂಗಾರು ಪೂರ್ವ ಮಳೆ ಸುರಿದ ಕೆಲವೆಡೆ ಬಿರುಗಾಳಿ ಬೀಸಿ ಸಿಡಿಲು ಬಡಿದು ಸಾವು, ನೋವು, ಹಾನಿ ಸಂಭವಿಸಿವೆ. ಏನಾದರೇನು ಈ ಬಿಜೆಪಿ ಸರ್ಕಾರದ ಸಚಿವರು, ಶಾಸಕರು ಹಾಗೂ ಕಾರ್ಪೋರೇಟರುಗಳ ನೆಮ್ಮದಿಗೆ ಭಂಗವಿಲ್ಲ. ಅವರ ಆಮೋದ ಪ್ರಮೋದಗಳ ಖಯಾಲಿಗೂ ದೇಶೀಯ, ವಿದೇಶೀಯ ಪ್ರವಾಸಗಳ ಮೋಜುವಾನಿಗಳಿಗೂ ಕಡಿವಾಣವಿಲ್ಲ. ಭಿನ್ನಮತೀಯ ಬಡಿದಾಟಗಳಿಗೂ ಬಿಡುವಿಲ್ಲ. ಅನುಮಾನವಿದ್ದರೆ ಈ ಉದಾಹರಣೆಗಳನ್ನು ನೋಡಿ.

ಪ್ರವಾಸದ ಮೋಜು

ಚಿಕ್ಕಬಳ್ಳಾಪುರ ಒಂದು ಬರ ಪೀಡಿತ ಜಿಲ್ಲೆ. ನಾರಾಯಣ ಸ್ವಾಮಿ ಜಿಲ್ಲೆಯ ಉಸ್ತುವಾರಿ ಸಚಿವರು. ಮತ್ತು ಅವರು ಸಮಾಜ ಕಲ್ಯಾಣ ಇಲಾಖೆಯ ಸಚಿವರು. ಅವರು ಬರ ಪರಿಹಾರ ಕಾಮಗಾರಿಗಳ ಉಸ್ತುವಾರಿ ನಡೆಸಬೇಕಾದ ಹೊತ್ತಲ್ಲಿ ತಮ್ಮ ಕುಟುಂಬ ವರ್ಗದೊಂದಿಗೆ ಇಟಲಿ ಪ್ರವಾಸಕ್ಕೆ ಹೋಗಿದ್ದರು.

– ಪುಟ 12 ಕ್ಕೆ

ಉಪ್ಪುಂದ : ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ಮಂಡಳಿಯ ಗುರುತಿನ ಚೀಟಿ ವಿತರಣೆ

ರಾಷ್ಟ್ರೀಯ [illegible] ವರದಿ ಪ್ರಕಾರ ಕಟ್ಟಡ [illegible] ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕರ ಪೈಕಿ ಪ್ರತಿ 10 ನಿಮಿಷಗಳಿಗೆ ಒಬ್ಬ ವ್ಯಕ್ತಿ ಅಪಘಾತಕ್ಕೆ ಬಲಿಯಾಗುತ್ತಾನೆ. ರಾಷ್ಟ್ರೀಯ ಮಾದರಿ ಸಮೀಕ್ಷೆ (National sample survey) ಪ್ರಕಾರ 2.57 ಕೋಟಿ ಕಾರ್ಮಿಕರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಸಂಖ್ಯೆ ಈಗ ಮೂರು ಕೋಟಿ ದಾಟಿರಬಹುದು. ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಪ್ರತಿ ವರ್ಷ 7,500 ಕಾರ್ಮಿಕರು ಆಕಸ್ಮಿಕವಾಗಿ ಬಿದ್ದು, ಇಲ್ಲವೇ ಗಾಯಗೊಂಡು ಸಾವಿನ ಮನೆ ಸೇರುತ್ತಾರೆ ಎಂದು ಸಿಐಟಿಯು ಮುಖಂಡ ವೆಂಕಟೇಶ ಕೋಣಿ ಹೇಳಿದರು ಅವರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು) ಉಪ್ಪುಂದ ಘಟಕದ ಆಶ್ರಯದಲ್ಲಿ ಉಪ್ಪುಂದ ಕಾಸಾನಡಿ ದೈವಸ್ಥಾನ ವಠಾರದಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಯ ಗುರುತಿನ ಚೀಟಿ ವಿತರಣಾ ಸಮಾರಂಭಾದಲ್ಲಿ ಅತಿಥಿ ಯಾಗಿ ಮಾತನಾಡಿ [illegible] ಹೇಳಿದರು. ಅಡಿಪಾಯ ಹಾಕುವವರ ಬಾಳಿಗೆ ಇಲ್ಲ ಅಡಿಪಾಯ ಎಂದು ನೊಂದು ನುಡಿದರು.

ಕಾರ್ಮಿಕ ನಿರೀಕ್ಷಕ ಕುಂದಾಪುರ ವೃತ್ತ, ಜೀವನ್‌ಕುಮಾರ್ ಕಟ್ಟಡ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯಿಂದ ಕಾರ್ಮಿಕ ಕಲ್ಯಾಣ ಮಂಡಳಿಯ ಗುರುತಿನ ಚೀಟಿ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು, ಕಟ್ಟಡ ಕಾರ್ಮಿಕರು ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿವಿಧ ಸೌಲಭ್ಯ ಪಡೆಯುದರೊಂದಿಗೆ, ಕೇಂದ್ರ ಸರಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಸ್ವಾಸ್ಥ್ಯ ಬೀಮ ಯೋಜನೆಯ ಪಲಾನುಭವಿಯಾಗಿ ಕುಟುಂಬದ ಸದಸ್ಯರಿಗೆ ಆರೋಗ್ಯ ವಿಮಾ ಸೌಲಭ್ಯ ಒಂದು ಉತ್ತಷ್ಟ ಯೋಜನೆ ಸೌಲಭ್ಯವನ್ನು ಪಡೆಯಲು ಕಟ್ಟಡ ಕಾರ್ಮಿಕರು ಮುಂದಾಗಬೇಕೆಂದು ಕಾರ್ಮಿಕ ನಿರೀಕ್ಷಕ ಜೀವನ್ ಕುಮಾರ್ ಕರೆ ಕೊಟ್ಟರು. ಅಖಿಲ ಭಾರತ ನಿರ್ಮಾಣ ಕಾರ್ಮಿಕರ ಫೆಡರೇಷನ್(CWFI) ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರದಲ್ಲಿ ದುಡಿಯುವ ಎಲ್ಲಾ ಕಾರ್ಮಿಕರನ್ನು ವಿಶಾಲ ತಳಹದಿಯಲ್ಲಿ ರಾಷ್ಟ್ರವ್ಯಾಪಿ ಸಂಘಟಿಸುತ್ತದೆ. ಇಂತಹ ಅಖಿಲ ಭಾರತ ಬೃಹತ್ ಸಂಘಟನೆಯಲ್ಲಿ ಉಪ್ಪುಂದ ಕಟ್ಟಡ ಕಾರ್ಮಿಕರು ಸದಸ್ಯರಾಗುವುದು ನಮಗೆಲ್ಲ ಹೆಮ್ಮೆಯ ವಿಚಾರ ಎಂದು ಸಿಐಟಿಯು ಮುಖಂಡ ಯು.ದಾಸಭಂಡಾರಿ ಸಮಾರಂಭದಲ್ಲಿ ಮಾತನಾಡುತ್ತಾ ಅಭಿಪ್ರಾಯ ಪಟ್ಟರು. ಉಪ್ಪುಂದ ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಶೀಲ ಗಾಣಿಗ, ಸಾಮಾಜಿಕ ಕಾರ್ಯಕರ್ತ ಎನ್.ಮಾಧವ ಕುಮಾರ್ ಉಪಸ್ಥಿತರಿದ್ದರು. ಮೇ 1 ವಿಶ್ವ ಕಾರ್ಮಿಕ ದಿನಾಚರಣೆಯನ್ನು ಕುಂದಾಪುರದಲ್ಲಿ ಕಾರ್ಮಿಕರ ಬೃಹತ್ ರ‍್ಯಾಲಿ ಸಾರ್ವಜನಿಕ ಸಭೆ ಯಶಸ್ವಿ ಮಾಡುವುದಕ್ಕೆ ಸಭೆಯಲ್ಲಿ ತಿರ್ಮಾನಿಸಲಾಯಿತು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು) ಉಪ್ಪುಂದ ಘಟಕದ ಅಧ್ಯಕ್ಷ ಹಾಗೂ ಸ್ಥಳೀಯ ಗ್ರಾಮ ಪಂಚಾಯತ್ ಸದಸ್ಯ ಮಾಧವ ದೇವಾಡಿಗ ಸಮಾರಂಭದ ಅಧ್ಯಕ್ಷತೆ ವಹಿಸಿದರು. ಕಾರ್ಯದರ್ಶಿ ಶ್ರೀಧರ ದೇವಾಡಿಗ ಕಾರ್ಯಕ್ರಮ ನಿರೂಪಿಸಿದರು.

ಉಪ್ಪುಂದ: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಕಾರ್ಯಾಕಾರಿ ಸಮಿತಿ ಆಯ್ಕೆ

ಅಖಿಲ ಭಾರತ ನಿರ್ಮಾಣ ಕಾರ್ಮಿಕರ ಫೆಡರೇಷನ್ (CWFI) ನೊಂದಾಣಿಗೊಂಡ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು) ಭಾಗವಾದ ಕುಂದಾಪುರ ತಾಲ್ಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದಡಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಉಪ್ಪುಂದ ಘಟಕದ ಸಾಮಾವೇಶದಲ್ಲಿ ಈ ಕೆಳಕಂಡ ವಿವರದಂತೆ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಮಾಧವ ದೇವಾಡಿಗ (ಅಧ್ಯಕ್ಷ), ಅಣ್ಣಪ್ಪ ಗಾಣಿಗ, ಮಹಾದೇವ ಬಿ (ಉಪಾಧ್ಯಕ್ಷರು), ಶ್ರೀಧರ ದೇವಾಡಿಗ (ಕಾರ್ಯದರ್ಶಿ), ಹೇಮಂತ ದೇವಾಡಿಗ, ಭಾಸ್ಕರ ದೇವಾಡಿಗ (ಜೊತೆ ಕಾರ್ಯದರ್ಶಿಗಳು), ಚಂದ್ರ ದೇವಾಡಿಗ (ಕೋಶಾಧಿಕಾರಿ), ವೆಂಕಟೇಶ, ಗಣೇಶ ಆರ್ ದೇವಾಡಿಗ, ರವಿ ಗಾಣಿಗ, ದಿವಾಕರ ದೇವಾಡಿಗ, ಮಂಜುನಾಥ, ಶಾರದಾ, ಮಂಜುನಾಥ ಅಂಬಾಗಿಲು ಇವರು ಸಮಿತಿ ಸದಸ್ಯರಾಗಿ ಆಯ್ಕೆಯಾದರು

ಅಜ್ಜಿಗೆ ಅರಿವೆ ಚಿಂತೆ ಮೊಮ್ಮಗಳಿಗೆ..........

ಪುಟ 11 ರಿಂದ

ಮುಖ್ಯಮಂತ್ರಿಗಳು ಯಾವ ಸಚಿವರಿಗೂ ವಿದೇಶ ಪ್ರವಾಸಕ್ಕೆ ಅನುಮತಿ ಇಲ್ಲ ಎಂದ ಮೇಲೂ ಅವರು ಹೋಗಿದ್ದರು. ಅದು ಖಾಸಗಿ ಪ್ರವಾಸ ಎಂದು ಒಂದು ಹಂತದಲ್ಲಿ ಸಮರ್ಥಿಸಿಕೊಳ್ಳಲಾಯಿತು. ಖಾಸಗಿ ಪ್ರವಾಸವೇ ಆದರೂ ಇತ್ತ ಬರ ಪರಿಹಾರ ಕಾಮಗಾರಿ ನೋಡುವವರು ಯಾರು ? ವಿದೇಶಿ ಪ್ರವಾಸಕ್ಕೆ ಇದೇ ಸಮಯ ಬೇಕೇ ?

ಇನ್ನು ಬಿಬಿಎಂಪಿಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ 10 ಸದಸ್ಯರು ಇದೇ ಏಪ್ರಿಲ್ 16 ರಿಂದ ಇದೇ ರೀತಿಯಾಗಿ ಉತ್ತರ ಭಾರತ ಪ್ರವಾಸವನ್ನು ಸಾಂಗವಾಗಿ ನಡೆಸಿದ್ದಾರೆ. ಅದಕ್ಕೆ ಮೊದಲು ತೋಟಗಾರಿಕಾ ಸ್ಥಾಯಿ ಸಮಿತಿ ಸದಸ್ಯರು ಭಾರತ ಪ್ರವಾಸ ಮಾಡಿ ಬಂದಿದ್ದಾರೆ.

★

ಶಾಸಕರ ಕ್ಲಬ್‌ಗೆ 'ಬಾಲಬ್ರೂಯಿ'ಯನ್ನೆ ಕೊಡಿ

ರಾಜ್ಯದ ಸರ್ಕಾರದ ಅಧಿಕಾರಿಗಳ ಆಟ, ಮನರಂಜನೆಗೆ ಒಂದು ಕ್ಲಬ್ ಇದೆ.... ಶಾಸಕರಿಗೆ ಇಂಥ ಒಂದು ಕ್ಲಬ್ ಇಲ್ಲದೇ ಶಾಸಕರು ತುಂಬಾ ನೊಂದಿದ್ದಾರೆ. ಆದ್ದರಿಂದ ಸರ್ಕಾರದ ಅತಿಥಿ ಗೃಹವಾದ ಸು. 150 ವರ್ಷಗಳ ಇತಿಹಾಸ ಉಳ್ಳ ಭರ್ಜರಿ 'ಬಾಲಬ್ರೂಯಿ' ಕಟ್ಟಡವನ್ನೇ ಅದಕ್ಕೆ ಕೊಡಿ ಅಂತ ಈಗ ಸರ್ಕಾರದ ಮುಂದೆ ಹಲವು ಶಾಸಕರು ವರಾತ ಇಟ್ಟಿದ್ದಾರೆಂದು ತಿಳಿದುಬಂದಿದೆ. ಇದರ ನಾಯಕತ್ವ ವಹಿಸಿರುವುದು ಬಿಜೆಪಿ ಶಾಸಕರ ಸಿ.ಟಿ. ರವಿ ಎಂಬುದನ್ನು ವಿಶೇಷವಾಗಿ ಗಮನಿಸಬೇಕಿದೆ. ರಾಜ್ಯ ಪ್ರವಾಸ ಹೋದರೆ ದರಿದ್ರ ಬರಪೀಡಿತ ಜನಗಳ ಕಾಟ. ಹಾಗಾಗಿ ಪಾಪ ನಮ್ಮ ಶಾಸಕರಿಗೆ ರೇಸಾರ್ಟ್‌ನೊಳಗೆ, ಇಲ್ಲ ಕ್ಲಬ್‌ನೊಳಗೆ 'ತಣ್ಣಗೆ' 'ನೆಮ್ಮದಿ'ಯಾಗಿ ಕೂರಲು ಸೂಕ್ತವಾದ ಜಾಗ ಬೇಕೇ ಬೇಕು.

★

ಮೂರನೇ ಬಣ ರಚನೆ – ಭಿನ್ನಮತದ ಬಡಿದಾಟ

ಬಿಜೆಪಿಯ ಯುವ ಶಾಸಕ ಸಿ.ಟಿ. ರವಿಯವರು ಬರೀ ಶಾಸಕರ ಕ್ಲಬ್‌ಗಾಗಿ ಮಾತ್ರವೇ ದನಿ ಎತ್ತಿಲ್ಲ. ಅವರೀಗ ಬಿಜೆಪಿಯೊಳಗೆ ಮೂರನೇ ಬಣದ ರಚನೆಗೆ ನಾಯಕತ್ವ ನೀಡುತ್ತಿದ್ದಾರೆ. ಸಮಾನ ಮನಸ್ಕರ ಬಣ ಎನ್ನಲಾದ ಈ ಮೂರನೆ ಬಣ ಯಾಕಾಗಿ ಗೊತ್ತೇ ? ಸು. 20 ಖಾತೆಗಳನ್ನು ಹೊತ್ತ ಸದಾನಂದರ ಗೌಡರು ಬಳಲಿದ್ದಾರೆ. ರಾಜ್ಯ ಸಚಿವ ಸಂಪುಟವನ್ನು ವಿಸ್ತರಣೆ ಮಾಡುವ ಕುರಿತು ಮಾತುಕತೆಗಳು ನಡೆಯುತ್ತಿವೆ. ಇದರಲ್ಲಿ ಮೂಲ ಬಿಜೆಪಿಗೆ ಸಚಿವ ಖಾತೆಗಳು ಸಿಗಬೇಕು.... ಅವರಿಗೆ ಇಲ್ಲಿಯವರೆಗೆ ಅನ್ಯಾಯವಾಗಿದೆ... ಇದು ಕಾರಣ. ಅಂದ ಹಾಗೇ ಸಿ.ಟಿ. ರವಿಯವರು ಮೂಲ ಬಿಜೆಪಿಗರ ಪಟ್ಟಿಯಲ್ಲಿ ತಮ್ಮ ಹೆಸರನ್ನಿಟ್ಟುಕೊಂಡು ಸಚಿವ ಖಾತೆಗಾಗಿ ಸೀಟಿ ಊದುತ್ತಿದ್ದಾರೆ ಎಂಬುದು ಸ್ಪಷ್ಟ. ಅಜ್ಜಿಗೆ ಅರಿವೆ ಚಿಂತೆ ಮೊಮ್ಮಳಿಗೆ ಬೇರೇನೋ ಚಿಂತೆ ಅಂತ ಒಂದು ಗಾದೆ ಇದೆ. ಅದು ನೆನಪಾಗುತ್ತಿದೆ ಅಲ್ಲವಾ ?

ಬಿಜೆಪಿ ಸಚಿವರ ವಿದೇಶಿ ಪ್ರವಾಸ ಖಂಡಿಸಿ ಸಿ.ಪಿ.ಐ.(ಎಂ) ನಿಂದ ರಸ್ತೆ ತಡೆ–ಭೂತ ದಹನ

ರಾಜ್ಯ ಬರದಿಂದ ತತ್ತರಿಸುತ್ತಿರುವಾಗ, ಬರ ಪರಿಹಾರ ಕೈಗೊಳ್ಳದೇ ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು ವಿದೇಶಿ ಪ್ರವಾಸ ಮಾಡಿದನ್ನು ಖಂಡಿಸಿ, ಸಚಿವರ ರಾಜಿನಾಮೆಗೆ ಒತ್ತಾಯಿಸಿ ಸಿ.ಪಿ.ಐ(ಎಂ.) ಆನೇಕಲ್ ತಾಲ್ಲೂಕು ಸಮಿತಿಯಿಂದ ನೂರಾರು ನಾಗರೀಕರು ಆನೇಕಲ್ ಪಟ್ಟಣದ ಚೌಡರೆಡ್ಡಿ ವೃತ್ತದಲ್ಲಿ ರಸ್ತೆ ತಡೆ ನಡೆಸಿ, ಸಚಿವರ ಭೂತ ದಹನ ಮಾಡಲಾಯಿತು.

ಈ ಸಂದರ್ಭದಲ್ಲಿ ಸಿ.ಪಿ.ಐ.(ಎಂ) ನ ತಾಲ್ಲೂಕು ಕಾರ್ಯದರ್ಶಿ ಬಿ.ಎನ್.ಮಂಜುನಾಥ್ ಮಾತನಾಡಿ, ಕೂಡಲೇ ಸಚಿವರ ಸ್ಥಾನಕ್ಕೆ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಿದರು.

ನಂತರ ಸಿಪಿಐ (ಎಂ) ತಾಲ್ಲೂಕು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಹದೇಶ್ ಮಾತನಾಡಿ ರಾಜ್ಯದಲ್ಲಿ ಮತ್ತು ಸಚಿವರ ಉಸ್ತುವಾರಿ ಜಿಲ್ಲೆಯಾದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಇದೆ. ರಾಜ್ಯ ಸರ್ಕಾರದ ಸಚಿವರು ವಿದೇಶಿ ಪ್ರವಾಸ ಮಾಡಬಾರದೆಂದು ಸೂಚಿಸಿದ್ದರೂ ಸಹ ಸಚಿವರು ವಿದೇಶಿ ಪ್ರವಾಸ ಮಾಡಿರುವುದು ಜನರ ಬಗ್ಗೆ ಅವರಿಗೆ ಕಾಳಜಿ ಎಷ್ಟು ಇದೆ ಎಂಬುದನ್ನು ತೋರಿಸುತ್ತದೆ. ಕೂಡಲೇ ಮುಖ್ಯಮಂತ್ರಿಗಳು ಅವರನ್ನು ಸಂಪುಟದಿಂದ ವಜಾ ಮಾಡಬೇಕು, ಇಲ್ಲದಿದ್ದರೆ ಮುಂದಿನ ಚುನಾವಣೆಯಲ್ಲಿ ಜನ ತಕ್ಕ ಪಾಠ ಕಲಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ತಾಲ್ಲೂಕು ಮುಖಂಡರಾದ ಅಶೋಕ್‌ಕುಮಾರ್, ರಾಮಕೃಷ್ಣ, ಮೋಹನ್, ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಅಧ್ಯಕ್ಷರಾದ ನಾರಾಯಣಪ್ಪ, ಕಾರ್ಯದರ್ಶಿ ಬಾಲರಾಜ್, ಡಿವೈಎಫ್‌ಐ ನ ತಾಲ್ಲೂಕು ಕಾರ್ಯದರ್ಶಿ ಮಧುರಾಜು, ಉಪಾಧ್ಯಕ್ಷರಾದ ಸುರೇಶ್, ಸಿಐಟಿಯು ನ ತಾಲ್ಲೂಕು ಮುಖಂಡರಾದ ಚಂದ್ರಶೇಖರ್, ಪ್ರಕಾಶ್, ಅಣ್ಣಯ್ಯಪ್ಪ ಮತ್ತಿತರರು ಭಾಗವಹಿಸಿದ್ದರು.



ರಾಜ್ಯದ ಕಾರ್ಮಿಕರನ್ನು ನಿರ್ಲಕ್ಷ್ಯ : ಸರಕಾರದ ಧೋರಣೆ ವಿರೋಧಿಸಿ ಪ್ರತಿಭಟನಾ ರ್‍ಯಾಲಿ

ಸಿಐಟಿಯುವಿನ ರಾಜ್ಯ ಸಮಿತಿಯ ಕರೆಯ ಮೇರೆಗೆ ವಿಜಾಪುರ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ವಿಜಾಪುರ ನಗರದ ಕೋರಿ ಚೌಕದಿಂದ ಮೆರವಣಿಗೆ ಹೊರಟು ಶ್ರೀ ಸಿದ್ಧೇಶ್ವರ ಗುಡಿ ಗಾಂಧಿವೃತ್ತ, ಬಸವೇಶ್ವರ ವೃತ್ತದಿಂದ ಘಾಯ್ದು ಘೋಷಣೆ ಕೂಗುತ್ತಾ ಅಂಬೇಡ್ಕರ ಸರ್ಕಲ್ ಮುಖಾಂತರ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು.

ರ್‍ಯಾಲಿಯ ಮುಖಂಡತ್ವವನ್ನು ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಭೀಮಶಿ ಕಲಾದಗಿ ವಹಿಸಿ ಮಾತನಾಡುತ್ತಾ ಬಿಜೆಪಿ ಸರಕಾರ ಆಶ್ವಾಸನೆ ಕೊಟ್ಟಂತೆ 2ರೂಗೆ ಕೆಜಿ ಅಕ್ಕಿ ಕೊಡದೇ ಇದ್ದುದು ಇದು ಜನತೆಗೆ ಮಾಡಿದ ಅನ್ಯಾಯ ಎಂದು ಹೇಳಿದರು. ಅನೇಕ ಹೋರಾಟಗಾರರ ಮೇಲೆ ದಾಖಲಿಸಿದ ಪ್ರಕರಣಗಳನ್ನು ಹಿಂದಕ್ಕೆ ಪಡೆಯಬೇಕು, ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದರು. ಲಾರಿ ಹಮಾಲರ ಸಂಘದ ಮುಖಂಡರಾದ ಮನ್ನುಸಾಬ ಕಲಾದಗಿ ಮಾತನಾಡಿ ಲಾರಿ ಹಮಾಲರಿಗೆ ನಿವೇಶನ ಮಂಜೂರಿ ಮಾಡಿ ಅದನ್ನು ನಗರಸಭೆಗೆ ವರ್ಗಾಯಿಸಿ ಅವರಿಗೆ ನಿವೇಶನದ ಹಕ್ಕುಪತ್ರಗಳನ್ನು ವಿತರಿಸಬೇಕೆಂದು ಒತ್ತಾಯಿಸಿದರು. ಲಕ್ಷ್ಮಣ ದೊಡಮನಿ, ಕಾರ್ಮಿಕ ಮುಖಂಡರಾದ ವ್ಹಿ.ಎಂ. ಸೊನ್ನದ, ಅಂಗನವಾಡಿ ಕಾರ್ಯಕರ್ತೆಯರ ಮುಖಂಡರಾದ ಶ್ರೀಮತಿ ಸುನಂದಾ ನಾಯಕ, ಭಾರತಿ ವಾಲಿ, ಬಿಸಿಯೂಟದ ಕಾಳಮ್ಮ ಬಡಿಗೇರ, ಗ್ರಾಮ ಪಂಚಾಯತ ನೌಕರರ ಸಂಘದ ಕಾರ್ಯದರ್ಶಿ ಎಂ.ಬಿ. ಕೊರಬು, ಜನವಾದಿ ಮಹಿಳಾ ಸಂಘದ ಜಿಲ್ಲಾ ಅಧ್ಯಕ್ಷೆ ಶ್ರೀಮತಿ ಸುರೇಖಾ ರಜಪೂತ, ಸಮುದಾಯ ಸಂಘಟನೆಯ ಲಕ್ಷ್ಮಣ ಹಂದ್ರಾಳ, ಡಿವೈಎಫ್ಐನ ಸೋಮಪ್ಪ ಆಯಟ್ಟಿ, ರೈತ ಸಂಘದ ಮುಖಂಡ ಎ.ಎಚ್. ಹೊನ್ನುಟಗಿ, ಮಹಿಬೂಬ ನದಾಫ್, ಹುಸೇನ ಮುಲ್ಲಾ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬೇಡಿಕೆಗಳು

- ಸಾಮಾನ್ಯ ಕನಿಷ್ಠ ಕೂಲಿ ಅಕುಶಲ ಕಾರ್ಮಿಕರಿಗೆ ರೂ.10000/- ವನ್ನು 2008ರ ಬೆಲೆ ಸೂಚ್ಯಂಕ ಆಧರಿಸಿ ನೀಡಬೇಕು. ತಜ್ಞರ ಸಮಿತಿ ಈ ದಿಶೆಯಲ್ಲಿ ಕೂಡಲೇ ಅಂತಿಮ ತೀರ್ಮಾನ ಕೈಗೊಂಡು ರಾಜ್ಯ ಸರಕಾರ ಜಾರಿಗೊಳಿಸಬೇಕು. ಕೇಂದ್ರ ಸರಕಾರದ ಮಾದರಿಯಲ್ಲೇ 6 ತಿಂಗಳಿಗೊಮ್ಮೆ ತುಟ್ಟಿಭತ್ಯೆಯನ್ನು ಪುನರ್ ವಿಮರ್ಶೆ ಮಾಡಿ ಜಾರಿಗೊಳಿಸಬೇಕು.
- ಎಲ್ಲಾ ಗುತ್ತಿಗೆ/ದಿನಗೂಲಿ ನೌಕರರಿಗೆ ಕೈಗಾರಿಕಾ ಕನಿಷ್ಠ ವೇತನವನ್ನು ಜಾರಿಗೊಳಿಸಬೇಕು. ಸುಪ್ರೀಂ ಕೋರ್ಟ ಆದೇಶದಂತೆ ಎಲ್ಲಾ ಸರಕಾರಿ ಇಲಾಖೆ/ಸಂಸ್ಥೆಗಳಲ್ಲಿ ದುಡಿಯುತ್ತಿರುವ 10ವರ್ಷ ಪೂರೈಸಿರುವ ಎಲ್ಲಾ ಗುತ್ತಿಗೆ/ದಿನಗೂಲಿ ನೌಕರರನ್ನು ಖಾಯಂಗೊಳಿಸಬೇಕು. ಸರಕಾರಗಳ ವಿವಿಧ ಯೋಜನೆಗಳಲ್ಲಿ ನೇಮಕವಾಗಿರುವ ಅಂಗನವಾಡಿ, ಅಕ್ಷರ ದಾಸೋಹ (ಬಿಸಿಯೂಟ), ಆಶಾ ಮುಂತಾದ ನೌಕರರಿಗೂ ಅನ್ವಯಿಸಿ ಖಾಯಂಗೊಳಿಸಬೇಕು. ಕೇಂದ್ರ ಸರಕಾರದ ದಿನಗೂಲಿ ನೌಕರರಿಗೆ ಜಾರಿಯಲ್ಲಿರುವ 1993 ಯೋಜನೆಯನ್ನು ರಾಜ್ಯ ಸರಕಾರವೂ ಅಳವಡಿಸಿ ಜಾರಿಗೊಳಿಸಬೇಕು.
- ಗ್ರಾಮ ಪಂಚಾಯತಿ ನೌಕರರಿಗೆ ರಾಜ್ಯ ಸರಕಾರ ಪ್ರಕಟಿಸಿದ ಕನಿಷ್ಠ ವೇತನವನ್ನು ಗ್ರಾಮ ಪಂಚಾಯತಿಗಳಿಗೆ ಅಗತ್ಯವಾದ ಹಣ ಮಂಜೂರು ಮಾಡಿ ಜಾರಿಗೊಳಿಸಬೇಕು. ಕಾರ್ಯದರ್ಶಿ ಹುದ್ದೆಗಳ ಬಡ್ತಿಯನ್ನು ಕೂಡಲೇ ಜಾರಿಗೊಳಿಸಬೇಕು.
- ಪೆಟ್ರೋಲ್, ಡೀಸೆಲ್ ಮತ್ತು ಅಟೋ ಗ್ಯಾಸ್ ಮೇಲಿನ ತೆರಿಗೆಗಳನ್ನು ತೀವ್ರವಾಗಿ ಕಡಿತ ಮಾಡಬೇಕು. ಬೆಲೆ ಏರಿಕೆ ನಿಯಂತ್ರಿಸಲು ಕ್ರಮಗಳನ್ನು ಕೈಗೊಳ್ಳಬೇಕು.
- ದುಡಿಯುವ ಮಹಿಳೆಯರಿಗೆ 180 ದಿನ ಹೆರಿಗೆ ರಜೆ, ಮಕ್ಕಳ ಪಾಲನೆಗಾಗಿ ಶಿಶು ಪಾಲನಾ ಕೇಂದ್ರಗಳನ್ನು ನಿರ್ವಹಿಸಬೇಕು. ದುಡಿಯುವ ಮಹಿಳೆಯರಿಗೆ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆಯಲು ಸುಪ್ರೀಂಕೋರ್ಟ್ ನಿರ್ದೇಶನದಂತೆ ಸಮಿತಿಗಳನ್ನು ರಚಿಸಬೇಕು.



ಸಿಐಟಿಯುನ ಜಿಲ್ಲಾ ಸಂಚಾಲಕ ಅಣ್ಣಾರಾಯ ಈಳಗೇರ ಅವರು ಬೇಡಿಕೆಗಳ ಪತ್ರವನ್ನು ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಕಾಶಿನಾಥ ಪವಾರ ಅವರಿಗೆ ಓದಿ ಹೇಳಿ ಮನವಿ ಸಲ್ಲಿಸಿದರು.

–ಸೊಮಪ್ಪ ಆಯಟ್ಟಿ

ಬರ ನಿರ್ವಹಣೆ.......

ಪುಟ 8 ರಿಂದ

ತೀವ್ರತೆ ಮತ್ತು ಅದರ ಪರಿಣಾಮವಾಗಿ ಉಂಟಾಗಿರುವ ನೀರಿನ ಕೊರತೆಗೆ ಹಿಡಿದ ಕನ್ನಡಿಯಾಗಿದೆ. ಇದೊಂದು ಆಕಸ್ಮಿಕ ಬೆಳವಣಿಗೆಯಲ್ಲ. ಕಳೆದ ಮುಂಗಾರು ಮಳೆ ಕೈ ಕೊಟ್ಟಾಗಲೇ ಮುಂದಿನ ಅನಾಹುತದ ಮುನ್ನೆಚ್ಚರಿಕೆ ಲಭ್ಯವಾಗಿತ್ತು. ಹವಮಾನ ಇಲಾಖೆಯೂ ಮುಂಗಾರು ಮಾತ್ರವಲ್ಲ ಹಿಂಗಾರು ಮಳೆಯ ಅನಿಶ್ಚಿತತೆಯನ್ನು ಸೂಚಿಸುತ್ತಾ ಬಂದಿತು. ಆದರೆ ಮುಖ್ಯಮಂತ್ರಿ ಕುರ್ಚಿಗಾಗಿ ಬಿಜೆಪಿಯಲ್ಲಿ ನಡೆಯು ತ್ತಿದ್ದ ಅವಾಂತರಗಳಿಂದಾಗಿ ರಾಜ್ಯದಲ್ಲಿ ಒಂದು ಜವಾಬ್ದಾರಿಯುತ ಸರ್ಕಾರವೇ ಇಲ್ಲದಂತಾಗಿ ಹೊಸ್ತಿಲಲ್ಲಿದ್ದ ಬರವನ್ನು ಗಮನಿಸಿ ಅದನ್ನು ಎದುರಿಸುವ ಸಿದ್ಧತೆಯೇ ಇಲ್ಲವಾಯಿತು.

ಕರ್ನಾಟಕಕ್ಕೆ/ ಬರ ಹೊಸದೇನು ಅಲ್ಲ. ಎರಡು ಮೂರು ವರ್ಷ ಸತತ ಬರಗಾಲವನ್ನು ಅನುಭವಿಸಿದ ರಾಜ್ಯವಿದು. ಆದರೆ ರಾಜ್ಯ ಸರ್ಕಾರ ತನ್ನ ಉದಾರೀಕರಣದ ನೀತಿಯ ಅಂಗವಾಗಿ ರಾಜ್ಯದ ನದಿಗಳಲ್ಲಿ ಹರಿಯುತ್ತಿರುವ ನೀರಿನ ಸದುಪಯೋಗ ಮಾಡಿಕೊಂಡು ಬರ ನಿರ್ವಹಣೆಗೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಲು ಮುಂದಾಗದಿರುವುದೇ ಇಂದಿನ ಈ ಆಘಾತಕ್ಕೆ ಕಾರಣವಾಗಿದೆ.

ಸರ್ವಪಕ್ಷ ಸಮಿತಿಗಳ ರಚನೆಗೆ ಹಿಂದೇಟು:

ಸರ್ವಪಕ್ಷ ಸಭೆಯಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ಬೇರೆ ಎಲ್ಲಾ ಪಕ್ಷಗಳಿಗಿಂತ ಭಿನ್ನವಾದ, ನಿಖರವಾದ ಸಲಹೆಗಳನ್ನು ನೀಡಿತ್ತು. ಅವುಗಳಲ್ಲಿ ಮುಖ್ಯವಾಗಿ ಎಲ್ಲಾ ಬರಪೀಡಿತ ತಾಲ್ಲೂಕುಗಳಲ್ಲಿ ಬರ ನಿರ್ವಹಣೆಯ ಉಸ್ತುವಾರಿ ನೋಡಿಕೊಳ್ಳಲು ಸರ್ವಪಕ್ಷ ಸಮಿತಿಗಳನ್ನು ರಚಿಸಬೇಕೆಂಬುದು ಒಂದು ಸಲಹೆಯಾಗಿತ್ತು. ಹಿಂದೆ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಯಾಗಿದ್ದಾಗ ಇಂತಹ ಸಮಿತಿಗಳ ರಚನೆಯಿಂದ ಪ್ರಯೋಜನವಾಗಿತ್ತು ಎಂಬುದನ್ನು ನೆನಪು ಮಾಡಿಕೊಡಲಾಗಿತ್ತು. ಆದರೆ ಮುಖ್ಯಮಂತ್ರಿ ಸದಾನಂದ ಗೌಡರು ಈ ಬಗ್ಗೆ ತೀರ್ಮಾನ ಕೈಗೊಂಡಿಲ್ಲ. ಇದರಿಂದ ಸರ್ಕಾರಕ್ಕೆ ಬರ ಪೀಡಿತ ಜನಗಳ ಸಂಕಷ್ಟಗಳಿಗೆ ಸ್ಪಂಧಿಸುವ ನಿಜವಾದ ಕಾಳಜಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಬರ ಪರಿಸ್ಥಿತಿಯನ್ನು ಕೇಂದ್ರ ಕಾಂಗ್ರೇಸ್ ಸರ್ಕಾರದ ವಿರುದ್ದ 'ಬಳಸಿಕೊಳ್ಳುವ ರಾಜಕೀಯದಲ್ಲಿ ಮಾತ್ರ ರಾಜ್ಯ ಬಿಜೆಪಿಗೆ ಆಸಕ್ತಿ. ಕೇಂದ್ರ ಸರ್ಕಾರವೂ ಸಹ ರಾಜ್ಯಕ್ಕೆ ಇಂತಹ ರಾಷ್ಟ್ರೀಯ ದುರಂತಗಳು ಸಂಭವಿಸಿದಾಗ ನೆರವು ನೀಡುವಲ್ಲಿ ಅನುಸರಿಸುತ್ತಿರುವ ವಿಳಂಬ ನೀತಿಯೂ ಖಂಡನಾರ್ಹವಾಗಿದೆ. ಕೇಂದ್ರ ಸರ್ಕಾರವೂ ಸಹ ಕರ್ನಾಟಕದ ಜನತೆ ರಾಜ್ಯ ಸರ್ಕಾರದ ವಿರುದ್ಧ ದಂಗೆ ಏಳುವುದನ್ನು ನೋಡಲು ಕಾಯುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂದು ರಾಜ್ಯದಲ್ಲಿ ಉಂಟಾಗಿರುವ ಕ್ಷೋಭೆಗೆ ಕಾರಣರಾಗಿದ್ದು ರಾಜ್ಯದ ಜನತೆ ಇದನ್ನು ಗಮನಿಸದೆ ಇರಲಾರರು. ಕುಡಿಯುವ ನೀರಿಗಾಗಿ, ಜಾನುವಾರುಗಳಿಗೆ ಮೇವು ಮತ್ತು ಪಶು ಆಹಾರಕ್ಕಾಗಿ, ರೈತರ ಮತ್ತು ಕೂಲಿಕಾರರ ಸಾಲ ಮನ್ನಾ ಹಾಗೂ ಉದ್ಯೋಗ ಖಾತ್ರಿಯಲ್ಲಿ ಕೂಲಿಕಾರರು ಬಯಸುವಷ್ಟು ದಿನಗಳ ಕೆಲಸ ಮತ್ತು ಸರಿಯಾಗಿ ಕೂಲಿಹಣ ಪಾವತಿ ಮಾಡಲು ಒತ್ತಾಯಿಸಿ ಸ್ಥಳೀಯ ವಾಗಿ ಸಮರ ಶೀಲ ಹೋರಾಟಗಳ ಮೂಲಕ ಮಾತ್ರ ಬರಪೀಡಿತ ಜನತೆ ನ್ಯಾಯ ಪಡೆಯಬಹುದು.

ತುಮಕೂರು ವಿಶ್ವವಿದ್ಯಾಲಯದ ರಗಳೆ......

ಪುಟ 5 ರಿಂದ

ಡಾ.ವಿ.ಎಸ್.ಆಚಾರ್ಯ ಅವರ ಹೆಸರನ್ನು ಬ್ಲಾಕ್‌ವೊಂದಕ್ಕೆ ಇಡಲಾಗಿದೆ. ಇದು ಕೂಡ ಜಾತಿ ಪ್ರೀತಿಯ ದ್ಯೋತಕವೇ ಆಗಿದೆ. ಕನ್ನಡ ಅಧ್ಯಯನ ಕೇಂದ್ರವನ್ನು ಡಾ.ಡಿ.ವಿ.ಗುಂಡಪ್ಪ ಅಧ್ಯಯನ ಕೇಂದ್ರವೆಂದು ಮರು ನಾಮಕರಣ ಮಾಡುವ ಮೂಲಕ ಕುಲಪತಿ ಶರ್ಮಾ ಹೀನ ಬುದ್ಧಿ ಪ್ರದರ್ಶಿಸಿದ್ದಾರೆ. ವಿವಿ ಆರಂಭದಲ್ಲಿ ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ, ಸಂವಿಧಾನ ಶಿಲ್ಪಿ ಅಂಬೇಡ್ಕರ್, ಹಸಿರು ಕ್ರಾಂತಿ ಹರಿಕಾರ ಬಾಬು ಜಗಜೀವನ ರಾಂ ಅಧ್ಯಯನ ಪೀಠಗಳನ್ನು ಆರಂಭಿಸಲು ತೀರ್ಮಾನಸಲಾಗಿತ್ತು. ಆದರೆ ಇಂದಿಗೂ ಈ ಪೀಠಗಳನ್ನು ಆರಂಭಿಸಿಲ್ಲ. ಬದಲಿಗೆ ಡಿ.ವಿ.ಗುಂಡಪ್ಪ ಅಧ್ಯಯನ ಪೀಠ ಆರಂಭಿಸಿ ಕೆಲಸ ಮಾಡುತ್ತಿರುವುದು ವಿವಿ ಯಾವ ದಿಕ್ಕಿನತ್ತ ಸಾಗಿದೆ ಎಂಬುದುನ್ನು ಸೂಚಿಸುತ್ತದೆ. ಕಳೆದ ಡಿಸೆಂಬರ್‌ನಲ್ಲಿ ಮೂರು ದಿನಗಳ ಅಂತಾರಾಷ್ಟ್ರೀಯ ವೇದಾಂತ ಕಾರ್ಯಾಗಾರವನ್ನು ಆಯೋಜಿಸಿದ್ದು, ಬ್ರಾಹ್ಮಣ ಸ್ವಾಮೀಜಿಗಳು, ವೇದಾಂತ ಪಂಡಿತರು ಆಗಮಿಸಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಜೀವ ವಿರೋಧಿ ವಿಚಾರಗಳ ಬೀಜಗಳನ್ನು ಬಿತ್ತಿ ಹೋಗಿದ್ದಾರೆ. ಇದಕ್ಕೆ ವೇದಿಕೆ ಕಲ್ಪಿಸಿದ್ದು ಡಾ.ಶರ್ಮಾ.

ಲಿಂಗಾಯತರನ್ನು ಮತ್ತು ಸಿದ್ದಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿಯನ್ನು ಮೆಚ್ಚಿಸಲು ವಿವಿ ಆವರಣದಲ್ಲಿ ಬಸವ ವನ ನಿರ್ಮಿಸಿ, ಬಸವ ಪ್ರತಿಮೆ ಅನಾವರಣಗೊಳಿಸಲಾಗಿದೆ. ಇದರ ಜೊತೆಗೆ ಯೋಗ ಮಂದಿರವನ್ನು ಸಹ ಕಟ್ಟಿಸಿದ್ದು ಸರ್ವ ರೀತಿಯಲ್ಲೂ ವಿವಿಯನ್ನು ಅಧೋಗತಿಗೆ ಕೊಂಡೊಯ್ಯಲಾಗಿದೆ.

ವಿದ್ಯಾರ್ಥಿಗಳ ಉಚ್ಚಾಟನೆ

ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜುಗಳು ಇದ್ದ ಸಂದರ್ಭದಲ್ಲಿ 5000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಿದ್ದರು. ಬಹುತೇಕ ಬಡ ಮಧ್ಯಮ ವರ್ಗದ ಹಾಗೂ ಗ್ರಾಮಾಂತರ ಪ್ರದೇಶದ ರೈತರ ಮಕ್ಕಳು ಇದೇ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಇಂದು ಉನ್ನತ ಹುದ್ದೆಗಳನ್ನು ಹೊಂದಿದ್ದಾರೆ. ಆದರೆ ಶರ್ಮಾ ಎಂಬ ಅನಿಷ್ಠ ವಿವಿಯೊಳಗೆ ಕಾಲಿಡುತ್ತಿದ್ದಂತೆ ಮೊದಲು ಮಾಡಿದ ಕೆಲಸ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿತಗೊಳಿಸಿದ್ದು. ವಿದ್ಯಾರ್ಥಿ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು ಹೋರಾಟ ಮಾಡಿದರೂ ಕಿವಿಗೊಡದ ವಿದ್ಯಾರ್ಥಿ ವಿರೋಧಿ ಮಾನವ ದ್ವೇಷಿ ಕುಲಪತಿ ಶರ್ಮಾ ತಾನು ಅಂದುಕೊಂಡದ್ದನ್ನು ಮಾಡಿಯೇ ಬಿಟ್ಟರು. ಗುಣಮಟ್ಟದ ಶಿಕ್ಷಣ ನೀಡುವ ನೆಪದಲ್ಲಿ ಕಡಿಮೆ ವೆಚ್ಚದಲ್ಲಿ ಉನ್ನತ ಶಿಕ್ಷಣ ಪಡೆಯಬೇಕೆಂಬ ಸಾವಿರಾರು ಬಡ ವಿದ್ಯಾರ್ಥಿಗಳ ಹಕ್ಕನ್ನು ಕುಲಪತಿಗಳು ಮತ್ತು ಆಯೋಗ್ಯ ಸಿಂಡಿಕೇಟ್ ಸದಸ್ಯರು ಕಸಿದುಕೊಂಡಿದ್ದಾರೆ.

ಇಂದು ಕೇವಲ 660 ವಿದ್ಯಾರ್ಥಿಗಳಿಗೆ ಮಾತ್ರ ಇವೆರಡು ಕಾಲೇಜಿನಲ್ಲಿ ಅವಕಾಶ ಕಲ್ಪಿಸಿದ್ದು, ಇಲ್ಲಿ ಹೇಳಿಕೊಡುವುದು ಸನಾತನ ಹಿಂದೂ ಸಂಸ್ಕೃತಿಯ ಏಕಮುಖೀ ವಿಚಾರಧಾರೆಯನ್ನು ಮಾತ್ರ. ತುಮಕೂರು ವಿವಿಯಲ್ಲಿ ಸಂವಿಧಾನದ ಆಶಯಗಳಾದ ಜಾತ್ಯತೀತತೆ ಮತ್ತು ವೈಚಾರಿಕತೆಗೆ ಎಳ್ಳುನೀರು ಬಿಡಲಾಗಿದೆ.

ಕವಿಗೋಷ್ಠಿ ನಡೆಸಿದ ಬೋಧಕರಿಗೆ ನೋಟಿಸ್ ನೀಡಿರುವುದು, ಜಿಲ್ಲೆಯ ಯಾವುದೇ ಪತ್ರಕರ್ತರು, ಗಣ್ಯರು ಹಾಗೂ ಜನಪ್ರತಿನಿಧಿಗಳ ಜೊತೆಗೆ ಸಂಪರ್ಕ ಇಟ್ಟುಕೊಳ್ಳಬಾರದೆಂದು ಶರ್ಮಾ ಫರ್ಮಾನು ಹೊರಡಿಸಿದ್ದಾರೆಂಬ ಮಾತುಗಳು ವಿವಿಯಿಂದ ಕೇಳಿ ಬರುತ್ತಿರುವುದನ್ನು ನೋಡಿದರೆ ವಿವಿಯಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಘೋಷಿಸಿದಂತಿದೆ.

ಅಷ್ಟೇ ಅಲ್ಲ ವಿವಿಯ ಎಲ್ಲಾ ಮೂಲೆಗಳನ್ನು 'ಗೋಮೂತ್ರ'ದಿಂದ ತೊಳೆದು 'ಶುದ್ದೀಕರಿಸುವ' ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ದಲಿತ ವಿದ್ಯಾರ್ಥಿಗಳು ತಮ್ಮ ಹಕ್ಕುಗಳನ್ನು ಕೇಳಿದರೆ, ರಜಾ ಕಾಲದ ಹಾಸ್ಟೆಲ್ ಹಣವನ್ನು ಕೇಳಿದ 35ಕ್ಕೂ ಹೆಚ್ಚು ವಿದ್ಯಾರ್ಥಿಗಳ ಮೇಲೆ ದೂರು ದಾಖಲಿಸಲಾಗಿದೆ. ಹಕ್ಕುಗಳನ್ನು ಕೇಳುವ ವಿದ್ಯಾರ್ಥಿಗಳಿಗೆ, ವಿವಿ ಸಿಬ್ಬಂದಿಗೆ ಕುಲಪತಿ ಶರ್ಮಾ ಎಫ್‌ಐಆರ್ ಎಂದರೆ ಗೊತ್ತ ಎಂದು ಪ್ರಶ್ನಿಸುತ್ತಾ ವಿವಿಯಿಂದ ಹೊರಗೆ ಹಾಕುವ ಬೆದರಿಕೆವೊಡ್ಡಲಾಗುತ್ತಿದೆ.

ಒಟ್ಟಾರೆ ತುಮಕೂರು ವಿವಿ ಕೇಸರಿಮಯವಾಗಿದೆ. ವಿಷದ ಬೀಜಗಳನ್ನು ಬಿತ್ತುತ್ತಿರುವ ಕುಲಪತಿ ಶರ್ಮಾ ಎಂಬ ಕ್ರಿಮಿಯನ್ನು ಬೀಜಗಳು ಮೊಳಕೆ ಒಡೆಯುವ ಮೊದಲೇ ಇಲ್ಲಿಂದ ಓಡಿಸಬೇಕಾದ ಅಗತ್ಯವಿದೆ.

ಇಂಟರ್ನೆಟ್ ಸೆನ್ಸಾರ್ ರದ್ದು ಪಡಿಸಲು ಆಗ್ರಹಿಸಿ ಟೌನ್ ಹಾಲ್ ಬಳಿ ಪ್ರತಿಭಟನೆ : "ಅಸ್ಪಷ್ಟ ನಿಯಮಗಳನ್ನು ಬಳಸಿಕೊಂಡು ಬ್ಲಾಗ್ ಬರೆಯುವ ನಮ್ಮ ಹಕ್ಕನ್ನು ಕಿತ್ತುಕೊಳ್ಳಬೇಡಿ"

ಭಾರತಕ್ಕೆ ಸ್ವಾತಂತ್ರ್ಯ ದೊರಕುವ ಮೊದಲು ಬ್ರಿಟಿಷರು ಭಾರತೀಯರನ್ನು ಗುಲಾಮಾರಾಗಿ ಆಳುತಿದ್ದರು. ಆ ಕಾಲದಲ್ಲಿ ನಮಗೆ ಯಾವುದೇ ರೀತಿಯ ಹಕ್ಕುಗಳು ಇರಲಿಲ್ಲ ಮತ್ತು ಬ್ರಿಟಿಷರ ವಿರುದ್ಧ ಯಾರೇ ಏನಾದರು ಮಾಥನಡಿದರೆ ಅವರಿಗೆ ಕಠಿಣ ಶಿಕ್ಷೆ ಒದಗಿಸಲಾಗುತ್ತಿತ್ತು. ಜನರಿಗೆ ತಮ್ಮ ಅಭಿಪ್ರಾಯಗಳನ್ನು ಹೇಳಿಕೊಲ್ಲುವುದಿಕ್ಕೆ ಹಕ್ಕುಗಳು ಇರಲಿಲ್ಲ. ಭಾರತ ಸ್ವಾತಂತ್ರ್ಯವಾದ ಮೇಲೆ ಈ ಹಕ್ಕುಗಳು ಎಲ್ಲರಿಗೂ ಸಿಗುವುದಾಗಿ ನಮ್ಮ ಸಂವಿಧಾನವನ್ನು ರಚಿಸಲಾಗಿತು. ಇಂದಿನ ಕಾಲದಲ್ಲಿ ಇಂಟರ್ನೆಟ್ ನಮ್ಮೆಲ್ಲರ ಜೀವನಗಳಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸಿದೆ. ಇದು ಸಾಮಾನ್ಯ ಜನತೆಯ ಒಂದು ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಆದರೆ ಸರ್ಕಾರವು ಸೂಚಿಸಿರುವ ುಟಿಜಿಂಡಿಟಚಿಣುಂಟಿ ಣಜಛಿ-ಟಿಂಟಂಠಿ (ುಟಿಣಜಡಿಟಜಜುಚಿಡಿುಜ ಠಿಣುಜಜಟುಟಿಜ) ಖಿಣಟಜ, 2011 ಎಲ್ಲ ಇಂಟರ್ನೆಟ್ ಸಂಬಂಧಪಟ್ಟ ಕಂಪನಿಗಳು ಮತ್ತು ಸೇವೆಗಳಿಗೆ ಮಾರ್ಗದರ್ಶಕ ತತ್ವಗಳನ್ನು ನಿಗದಿ ಮಾಡಿದೆ. ಈ ನಿಯಮಗಳ ಮೂಲಕ ನಮ್ಮ ಸರ್ಕಾರವು ನಮ್ಮ ಹಕ್ಕುಗಳನ್ನು ನಿಗ್ರಹಿಸುವ ಪ್ರಯತ್ನದಲ್ಲಿ ಮತ್ತೆ ಬ್ರಿಟಿಷರು ನಡೆದ ಹಾದಿಯಲ್ಲಿ ನಡೆಯುತ್ತಿದೆ.

ಭಾರತ ಸರ್ಕಾರವು ಪ್ರಸ್ತಾಪಿಸಿರುವ ಹೊಸ ಮಧ್ಯವರ್ತಿಗಳ ನಿಯಮಗಳ ಅಡಿಯಲ್ಲಿ ಭಾರತದ ದೂರಸಂಪರ್ಕ ಕಂಪನಿಗಳು, ಇಂಟರ್ನೆಟ್ ಸೇವೆ ಒದಗಿಸುವರು, ಸಾಮಾಜಿಕ ಟಿಜಣತಿಠಡಿಇಟಿರಿ ಸೈಟುಗಳು ಮತ್ತು ಇತರರು ಬರುವರು. ಈ ನಿಯಮಗಳ ಪ್ರಕಾರ "ಯಾವುದೇ ರೀತಿಯಲ್ಲಿ ಕಿರಿಯರಿಗೆ ಹಾನಿಕಾರಿಯಾಗಿರುವ" ವಿಷಯಗಳಿಂದ ಹಿಡಿದು "ಹಾನಿಕಾರಕ ಅಥವಾ ಬೆದರಿಸುವಂಥ" ವಿಷಯಗಳನ್ನು ನಿಷೇಧಿಸಲಾಗಿದೆ. ಆದರೆ ಇದರಲ್ಲಿ ಕೆಲವು ನಿಯಮಗಳು ಎಷ್ಟು ಅಸ್ಪಷ್ಟವಾಗಿದೆ ಅಂದರೆ ಕಾನೂನಿನ ಸರಿ ಬದಿಯಲ್ಲಿ ಇರಲು ಮಧ್ಯವರ್ತಿಗಳು ಅತಿ ಕಡಿಮೆ ವಿವಾದಾತ್ಮಕ ವಿಷಯಗಳನ್ನು ಇಂಟರ್ನೆಟ್ಟಿನಿಂದ ತೆಗೆಯಬೇಕಗಬೋಹುದೆಂದು ಪವನ್ ದುಗ್ಗಲ್, ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಸೈಬರ್ ನಿಯಮಗಳ ಸಮಾಲೋಚಕರು ಮತ್ತು ವಕೀಲ ಹೇಳಿದರು.

ಭಾರತದ ಸಂವಿಧಾನದ ಪ್ರಕಾರ ಭಾಷಣ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ನಮ್ಮ ಪ್ರಮುಖ ಹಕ್ಕುಗಳಲ್ಲಿ ಒಂದಾಗಿದೆ. ಆದರೆ ಸರ್ಕಾರವು ಪ್ರಸ್ತಾಪಿಸಿರುವ ಹೊಸ ನಿಯಮಗಳು ಈ ಪ್ರಮುಖ ಹಕ್ಕನ್ನು ಉಲ್ಲಂಘಿಸುತ್ತದೆ. ಈ ನಿಯಮಗಳು ಸರ್ಕಾರಕ್ಕೆ ನಮ್ಮ ಫೇಸ್-ಬುಕ್ ಪೋಸ್ಟುಗಳು, ಚಾಟ್-ಗಳು, ಬ್ಲಾಗ್-ಗಳು ಹಾಗು ನಮ್ಮ ಖಾಸಗಿ ಛಾಯಾಚಿತ್ರಗಳನ್ನು ಓದಿ, ಸೆನ್ಸಾರ್ ಮಾಡುವ ಪರಿಪೂರ್ಣ ಹಕ್ಕು ಕೊಡುವುದು. ಈ ನಿಯಮಗಳು ಜಾರಿಗೆ ಬಂದರೆ ನಾಗರೀಕರ ಖಾಸಗೀತನವನ್ನು ಭಂಗಪಡಿಸುವುದು. ಈ ಕಾನೂನಿನ ಪ್ರಕಾರ



ಯಾವುದೇ ವ್ಯಕ್ತಿ ಅಥವಾ ಸಂಸ್ಥಾನದ ಮೇಲೆ ಅಪಖ್ಯಾತಿಕರ ವಿಷಯಗಳನ್ನು ಇಂಟರ್ನೆಟ್ ಇಂದ ತೆಗೆಯಲಾಗುವುದು. ಆದರೆ ಯಾವ ವಿಷಯಗಳು ಅಪಖ್ಯಾತಿಕರವೆಂದು ನಿರ್ಧರಿಸುವ ಮಧ್ಯವರ್ತಿಗಳು ಯಾವುದೇ ಪಕ್ಷಪಾತವಿಲ್ಲದೆ ತೀರ್ಮಾನಿಸುವವರೆಂದು ಹೇಗೆ ಹೇಳುವುದು? ಇದೇ ರೀತಿಯ ಹಲವಾರು ನ್ಯೂನತೆಗಳು ಈ ಬಿಲ್ಲಿನಲ್ಲಿ ತುಂಬಿವೆ. ಸರ್ಕಾರವು ಬ್ಲಾಗ್, ಬ್ಲಾಗ್ ಮಾಡುವವರು ಮತ್ತು ಇಂಟರ್ನೆಟ್ಟಿನ ಮೇಲೆ ಯಾವುದೇ ರೀತಿಯಾ ನಿಯಂತ್ರಣವನ್ನು ವಿಧಿಸಿದರೆ, ಅದು ನಮ್ಮ ಹಕ್ಕುಗಳ ವಿರುದ್ಧವಾಗುವುದು. ನಮ್ಮ ಹಕ್ಕುಗಳನ್ನು ರಕ್ಷಿಸಲು ಇರುವ ಸಂಸ್ಥೆಯೇ ನಮ್ಮ ಹಕ್ಕುಗಳನ್ನು ಭಂಗಪದಿಸುತ್ತಿದೆ. ಈ ರೀತಿಯ ಸೆನ್ಸರ್ಶಿಪ್ ಇಂದ ಅಂತಿಮವಾಗಿ ಸಂಪೂರ್ಣ ಇಂಟರ್ನೆಟ್ಟನ್ನೆ ಮುಚ್ಚುವುದಾಗಿ ಆಗುವುದ, ಯಾಕೆಂದರೆ ಇಂಟರ್ನೆಟ್ ಅಲ್ಲಿ ಇರುವ ವಿಷಯಗಳು ಒಬ್ಬರಿಗಲ್ಲ ಇನ್ನೊಬ್ಬರಿಗಾದರೂ ಆಕ್ರಮಣಕಾರಿಯಾಗಿ ಇರಬೊಹುದು. ಇಂಟರ್ನೆಟ್ ಮೇಲೆ ಇಂತಹ ಮಿತಿಗಳು ಹಲವಾರು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಕಂಪನಿ ಹಾಗು ಸೇವೆಗಳ ಬೆಳೆವಣಿಗೆಗೆ ತಡೆಹಾಕುವುದು. ಇದಷ್ಟೆಯೇ ಅಲ್ಲ, ಇದು ನಮ್ಮ ಖಾಸಗಿತನವನ್ನು ಅತಿಕ್ರಮಿಸುವುದು.

ನಾವು ಸರ್ಕಾರಕ್ಕೆ ಈ ರೀತಿಯ ಅಸ್ಪಷ್ಟವಾಗಿ ವ್ಯಖ್ಯಿನಿಸಲಾಗಿದ ಕಾನೂನುಗಳಿಂದ ನಮ್ಮ ಭಾಷಣ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಮ್ಮಿಂದ ತೆಗೆದುಕೊಳ್ಳುವುದಕ್ಕೆ ಆಗುವುದಕ್ಕಿಲ್ಲವೆಂದು ಹೇಳಲು ಬೆಂಗಳೂರಿನ ಟೌನ್ ಹಾಲ್ ಕೊಠಡಿಯ ಎದುರು ಪ್ರತಿಭಟನೆ ನಡಿಸಿದೆವು. ಈ ಪ್ರಥಿಬತನೆಯಲ್ಲಿ ಹಲವಾರು ವಿಧ್ಯಾರ್ಥಿಗಳು ಮತ್ತು ಇತರರು ಸೇರಿ ಇಂಟರ್ನೆಟ್ ಸ್ವಾತಂತ್ರ್ಯದ

ಪುಟ 15 ಕ್ಕೆ

ಮಳೆ ನೀರ ತಿರುವೇ ಹೊರತು....

ಪುಟ 6 ರಿಂದ

ನದಿಕೊಳ್ಳಗಳನ್ನು ವಶೀಕರಿಸುವ ಮೂಲಕ ಇನ್ನೊಂದೆಡೆ ಬಹುರಾಷ್ಟ್ರೀಯ ಕಂಪೆನಿಗಳು ನೀರನ್ನು ಸ್ವಾಧೀನಪಡಿಸಲು ಪ್ರಯತ್ನಿಸುತ್ತಿವೆ.

ಪಶ್ಚಿಮ ಘಟ್ಟದ ನೀರನ್ನು ಕರಾವಳಿ ಜಿಲ್ಲೆಗಳಲ್ಲಿ ವರ್ಷದುದ್ದಕ್ಕೂ ಉಳಿಸಿಕೊಳ್ಳುವುದು ಮತ್ತು ಇನ್ನೊಂದೆಡೆ ಹೆಚ್ಚಿಗೆ ಲಭ್ಯ ನೀರನ್ನು ಅಗತ್ಯವಿರುವವರಿಗೆ ಒದಗಿಸುವ ಬಗ್ಗೆ ಚರ್ಚೆ ನಡೆಸಿ ಯೋಗ್ಯ ಪರಿಹಾರಗಳನ್ನು ರಾಜ್ಯ ಸರಕಾರಕ್ಕೆ ಸೂಚಿಸಬೇಕಾಗಿದೆ.

ಕರಾವಳಿ ಜಿಲ್ಲೆಗಳ ನೀರಿನ ಸಮಸ್ಯೆಗೆ ಪರಿಹಾರ ಹೇಗೆಂದರೆ ಅಲ್ಲಿ ಲಭಿಸುವ ಮಳೆ ನೀರನ್ನು ಶೇಖರಣೆ ಮಾಡಿ ಇಟ್ಟುಕೊಳ್ಳಬೇಕು. 3 ಜಿಲ್ಲೆಗಳಲ್ಲಿ 76 ಟಿಎಂಇ ನೀರು ಸಂಗ್ರಹಣೆ ಮಾಡಬಹುದಾಗಿದ್ದು ಇದಕ್ಕಾಗಿ ಕೃತಕ ಸರೋವರಗಳ ನಿರ್ಮಾಣಕ್ಕಾಗಿ ರೂ.25,000 ಕೋಟಿ ಬೇಕಾಗಬಹುದು. ಮತ್ತು ಈ ನಿರ್ಮಾಣಗಳ ರಚನಾ ಅವಧಿ ಕನಿಷ್ಟ 15 ವರ್ಷಗಳಾದರೂ ಬೇಕಾಗಬಹುದು. ಕರಾವಳಿ ಜಿಲ್ಲೆಗಳಲ್ಲಿ ಇಂಥ 50 ಕೃತಕ ಜಲಾಶಯಗಳನ್ನು ಮಾಡಬಹುದಾಗಿದೆ.

ಕಿಂಡಿ ಅಣೆಕಟ್ಟುಗಳಿಗಿಂತ ಕೃತಕ ಸರೋವರಗಳು ಹೆಚ್ಚು ನೀರು ಸಂಗ್ರಹಿಸಬಹುದಾದ ಯೋಜನೆಗಳಾಗಿವೆ. ಹೀಗೆ ಸಂಗ್ರಹಿಸಿದ ನೀರನ್ನು ಬೇರೆ ಜಿಲ್ಲೆಗಳಿಗೂ ಒದಗಿಸಲು ಸಾಧ್ಯವುಂಟು. ಹೀಗೊಂದು ಯೋಜನೆಯನ್ನು ಕೈಗೊಂಡಾಗಲೂ ಅದು ನೇತ್ರಾವತಿ ನದಿ ತಿರುವು ಅಲ್ಲವೇ ಅಲ್ಲ ಎಂದು ಜನರಿಗೆ ಮನಗಾಣಿಸಬೇಕಾಗಿದೆ. ಕರಾವಳಿಯ 3 ಜಿಲ್ಲೆಯವರು 76 ಟಿಎಂಸಿ ನೀರಿನ ಯೋಜನೆಗಳಿಗಾಗಿ ಹೋರಾಟ ಕಾರ್ಯಕ್ರಮ ರೂಪಿಸಬೇಕಾಗಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರ ಸೂಚನೆಗಳು ಮೇಲಿನವು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಹಿರಿಯ ರೈತ ಕಾರ್ಮಿಕ ಮುಖಂಡರಾದ ಕೆ.ಆರ್.ಶ್ರೀಯಾನ್, ಇಲ್ಲಿ ಕರಾವಳಿ ಜಿಲ್ಲೆಗಳವರು ತಮ್ಮ ಜಿಲ್ಲೆಗಳಿಗೆ ಸಂಬಂಧಿಸಿದಂತೆ ನೀರಿನ ಸಮಸ್ಯೆ ಪರಿಹಾರಕ್ಕೆ ಚರ್ಚೆ ನಡೆಸಿದಂತೆ ಉಳಿದ ಜಿಲ್ಲೆಗಳವರೂ ತಮ್ಮ ಜಿಲ್ಲೆಯ ಹಕ್ಕಿನ ಪ್ರಮಾಣದ ನೀರನ್ನು ಪಡೆದುಕೊಳ್ಳುವ ಬಗ್ಗೆ ಚರ್ಚಿಸಿ ಜನತೆಯ ಮುಂದೆ ಆ ಮೂಲಕ ಸರ್ಕಾರದ ಮುಂದೆ ಪ್ರಸ್ತಾವಗಳನ್ನು ಮಂಡಿಸಲು ಕರೆ ನೀಡಿದರು.

ಪಕ್ಷದ ದ.ಕ.ಜಿಲ್ಲಾ ಸಮಿತಿ ಸೆಕ್ರೆಟಾರಿಯಟ್ ಸದಸ್ಯ ವಸಂತ ಆಚಾರಿ ಸ್ವಾಗತಿಸಿದರು. ಇನ್ನೊಬ್ಬ ಸೆಕ್ರೆಟಾರಿಯಟ್ ಸದಸ್ಯ ಜೆ.ಬಾಲಕೃಷ್ಣಶೆಟ್ಟಿ ವಂದಿಸಿದರು.

ಇಂಟರ್ನೆಟ್ ಸೆನ್ಸಾರ್ ರದ್ದು ಪಡಿಸಲು ಆಗ್ರಹ....

ಮೇಲೆ ಪ್ರಸ್ತಾಪಿಸಿರುವ ಹಲವಾರು ನಿರ್ಬಂಧಗಳ ವಿರುದ್ಧ ಘೋಷಣೆಗಳನ್ನು ಕೂಗಿ ಸಾಮಾನ್ಯ ಜನತೆಗೆ ಈ ವಿಷಯದ ಬಗ್ಗೆ ಅರಿವನ್ನು ನೀಡಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಹಲವಾರು ಪ್ರತಿಭಟನಾಕಾರರು ಈ ವಿಷಯವಾಗಿ ತಮ್ಮ ಭಾವನೆಗಳನ್ನು ಭಾಷಣೆಗಳು, ಸಣ್ಣ ನಾಟಕಗಳು ಹಾಗು ಪೋಸ್ಟರ್-ಗಳನ್ನು ಉಪಯೋಗಿಸಿ ಇಂಟರ್ನೆಟ್ ಸೆಂಸೋರ್ಶಿಪ್ ಬಗ್ಗೆ ಜಾಗೃತಿಯನ್ನು ಹರಡಿದರು. ಈ ಪ್ರತಿಭಟನೆಯಲ್ಲಿ ಇಂಟರ್ನೆಟ್ ಹಾಗು ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಹಲವಾರು ಸಂಸ್ಥೆಗಳೂ ಭಾಗವಹಿಸಿದರು.

ಇಂಟರ್ನೆಟ್ ಯಾವ ಒಬ್ಬ ವ್ಯಕ್ತಿ ಅಥವೆ ಸಂಸ್ಥೆಯದ್ದು ಅಲ್ಲ, ಅದು ಎಲ್ಲರಿಗೂ ಸೇರ್ಪತ್ತಿದ್ದು, ಯಾರಿಗೂ ಅದರ ಮೇಲೆ ನಿರ್ಬಂಧಗಳನ್ನು ವಿಧಿಸುವ ಹಕ್ಕುಗಳು ಇಲ್ಲ. ಈ ವಿಷಯವನ್ನು ನಮ್ಮ ಸರ್ಕಾರವು ತಿಳಿದುಕೊಂಡು ಈ ಹೊಸ ಕಾನೂನನ್ನು ಜಾರಿಗೆ ತರುವ ಮುನ್ನ ಅದು ಜನತೆಯ ಹಕ್ಕುಗಳಿಗೆ ಅಡ್ಡಿಯಾಗದಂತೆ ಖಚಿತಪದಿಸುವುದರಲ್ಲಿ ಎಲ್ಲರಿಗೂ ಲಾಭ ಉಂಟು.

ಸರ್ಕಾರವು ಕಾನೂನೊಂದನ್ನು ರೂಪಿಸಿದ್ದು ಅದರಿಂದ ಇಂಟರ್ನೆಟ್ ನಲ್ಲಿಯ ನಮ್ಮ ಬರಹಗಳನ್ನು ಸೆನ್ಸಾರ್ ಮಾಡಲು ಅವಕಾಶ ಕಲ್ಪಿಸಿದೆ. ನಮ್ಮ ಫೇಸ್ ಬುಕ್ ಬರಹಗಳನ್ನು ಸೆನ್ಸಾರ್ ಮಾಡಲು, ಸ್ಕೈಪ್ ನಂಥಹ ಆನ್ ಲೈನ್ ಮೂಲಕ ನಾವು ನಡೆಸುವ ಸಂಭಾಷಣೆಗಳನ್ನು ಕದ್ದು ಕೇಳಲು, ನಾವು ಮಾಡುವ ಣತಿಣಣಜಡಿ ಅಥವಾ ಬ್ಲಾಗ್ ಬರಹಗಳನ್ನು ನಿಯಂತ್ರಿಸಲು, ಅಥವಾ ನಾವು ಆನ್ ಲೈನ್ ನಲ್ಲಿ ಸಂಗ್ರಹಿಸಿಡುವ ಖಾಸಗಿ ಫೋಟೋ ಗಳನ್ನು ಮತ್ತು ಡಾಕುಮೆಂಟ್ ಗಳನ್ನು ತೆಗೆದುಕೊಳ್ಳುವ, ಅಥವಾ ನಮ್ಮ ಮೊಬೈಲ್ ಫೋನ್ ಗಳನ್ನು ಬಳಸಿಕೊಂಡು ನಾವಿರುವ ನೆಲೆಯನ್ನು ಟ್ರ್ಯಾಕ್ ಮಾಡಿ ತಿಳಿಯಲು ಮತ್ತು ನಮ್ಮೆಲ್ಲ ಆನ್ ಲೈನ್ ಚಟುವಟಿಕೆಗಳ ಮೇಲೆ ಬೇಹುಗಾರಿಕೆ ನಡೆಸಲು ಇದರಿಂದ ಸಾಧ್ಯವಾಗುತ್ತದೆ. ಅಸ್ಪಷ್ಟ ಮತ್ತು ನ್ಯೂನ್ಯತೆಯ ಕಾನೂನುಗಳನ್ನು ಬಳಸಿಕೊಂಡು ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳನ್ನು ಸರ್ಕಾರ ನಮ್ಮಿಂದ ಕಿತ್ತುಕೊಳ್ಳಲು ನಾವು ಬಿಡುವುದಿಲ್ಲ ಎಂದು ಹೇಳ ಬಯಸುತ್ತೇವೆ.

2011 ಎಪ್ರಿಲ್ 11 ರಂದು ಸರ್ಕಾರವು ಹೊಸ ಮಾಹಿತಿ ತಂತ್ರಜ್ಞಾನ (ಮಧ್ಯಸ್ಥವರ್ತಿಗಳ ಮಾರ್ಗದರ್ಶಿ) ನಿಯಮಾವಳಿ , 2011 ನ್ನು ಅಧಿಸೂಚನೆ ಹೊರಡಿಸಿತು. ಈ ಅಧಿಸೂಚನೆಯ ಮಾರ್ಗದರ್ಶಿ ತತ್ವಗಳನ್ನು ಎಲ್ಲ ಇಂಟರ್ನೆಟ್ ಸಂಭಂಧಿತ ಕಂಪನಿಗಳು ಪಾಲಿಸಬೇಕೆಂದು ಠರಾವು ಹೊರಡಿಸಿತು.

ಕರಾವಳಿ ಜಿಲ್ಲೆಗಳ ನೀರು ಪೂರೈಕೆ: ಸಂವಾದದಲ್ಲಿ ಬಂದ ಸೂಚನೆಗಳು

ಬಿ.ಮಾಧವ, ಜಿ.ವಿ.ಶ್ರೀರಾಮರೆಡ್ಡಿ ಮತ್ತು ಮಾರುತಿ ಮಾನ್ಪಡೆಯವರು ಕರಾವಳಿ ಜಿಲ್ಲೆಗಳ ನೀರು ಸಂಗ್ರಹದ ಬಗ್ಗೆ ಮುಂದಿಟ್ಟ ಸೂಚನೆಗಳನ್ನು ಅನುಮೋದಿಸಿ ಉಡುಪಿಯ ಅದಮಾರು ಶ್ರೀಪತಿ ಆಚಾರ್ಯ ಮಾತನಾಡಿದರು. ಕರಾವಳಿ ಜಿಲ್ಲೆಗಳ ಭೂಸ್ವರೂಪದಲ್ಲಿ ಮೇಲ್ಪದರದಲ್ಲಿ ಮರಳು ಮಿಶ್ರಿತ ಮಣ್ಣು, ಅದಕ್ಕೂ ಕೆಳಗೆ ಅರೆಮುರಕಲ್ಲು (ಲ್ಯಾಟರೈಟ್), ಬಳಿಕ ಗಟ್ಟಿ ಮುರಕಲ್ಲು, ಬಳಿಕ ಜೇಡಿ, ತೀರಾ ಆಳದಲ್ಲಿ ಗ್ರ್ಯಾನೈಟ್ ಪದರ ಇರುವುದು. ಗ್ರ್ಯಾನೈಟ್ ಪದರದ ಮೇಲೆಯೇ ನೀರು ಶೇಖರಣೆಯಾಗುತ್ತದೆ. ಎನ್ಐಟಿಕೆ ಸುರತ್ಕಲ್‌ನ ತಜ್ಞರೊಬ್ಬರು ಇಲ್ಲಿನ ನೆಲದಲ್ಲಿ ಮಳೆಕೊಯ್ಲು ಯಶಸ್ವಿಯಾಗದು, ಬೋರ್‌ವೆಲ್ ಸರ್ವತಾ ಕೂಡದು, ಕೆರೆಗಳನ್ನು (ಸರೋವರ)ಗಳನ್ನು ಮಾಡಬಹುದು – ಎಂದು ಅಭಿಪ್ರಾಯ ಕೊಟ್ಟಿದ್ದಾರೆ. ಸಣ್ಣ ದೊಡ್ಡ ಸರೋವರಗಳನ್ನು ನದೀ ಪಾತ್ರದಲ್ಲಿ ಮಾಡಬೇಕೆಂಬ ಡಾ.ಪರಮಶಿವಯ್ಯನವರ ಸೂಚನೆಗೆ ಇದು ತಕ್ಕುದಾಗಿಯೇ ಇದೆ. ಇಲ್ಲಿ ಎಲ್ಲ ಮಳೆನೀರನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಕಿಂಡಿ ಅಣೆಕಟ್ಟುಗಳು ಉತ್ತಮ. ಕೆರೆಗಳ ಹೂಳೆತ್ತುವುದು, ತೆರೆದ ಬಾವಿ ರಚಿಸಲು ಪ್ರೋತ್ಸಾಹಿಸುವುದು ಅಗತ್ಯ. ಕೈಬಿಟ್ಟಿರುವ ಟೇಲ್‌ರೇಸ್ ಯೋಜನೆ ಮಾಡಬಹುದು – ಎಂಬುದಾಗಿ ಅದಮಾರು ಶ್ರೀಪತಿ ಆಚಾರ್ಯ ಹೇಳಿದರು.

ಕರಾವಳಿ ಜಿಲ್ಲೆಗಳಲ್ಲಿ ಕಳೆದ ಕೆಲವು ದಶಕಗಳಿಂದ ಅನೇಕ ಕಾರಣಗಳಿಗಾಗಿ ಭತ್ತದ ಬೇಸಾಯ ಕಡಿಮೆಯಾಗುತ್ತಿದೆ. ಭತ್ತದ ಗದ್ದೆಗಳು ಪಕ್ಕದ ಗುಡ್ಡಗಳೂ ಅಡಿಕೆ, ತೆಂಗು ಇತ್ಯಾದಿ ವಾಣಿಜ್ಯ ಬೆಳೆಗಳ ಕೃಷಿಗೆ ದಾರಿ ಮಾಡಿಕೊಟ್ಟಿವೆ. ಉದ್ಯಮಗಳ ವಿಸ್ತರಣೆಯಿಂದ ವಸತಿ ಪ್ರದೇಶಗಳ ವಿಸ್ತೀರ್ಣ ಹೆಚ್ಚಿದೆ. ದೊಡ್ಡ ಗಾತ್ರದ ಅಣೆಕಟ್ಟುಗಳನ್ನು ಘಟ್ಟದ ಕೆಳಗಿನ ಭಾಗದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳಿಗೆ ಕಟ್ಟಿದರೆ, ದೊಡ್ಡ ಪ್ರಮಾಣದಲ್ಲಿ ಗದ್ದೆ ತೋಟಗಳೂ ವಸತಿ ಪ್ರದೇಶಗಳೂ ಮುಳುಗಡೆಯಾಗುವವು. ನಿರ್ವಸಿತರಿಗೆ ಬದಲಿ ಕೊಡಲು ಭೂಮಿಯ ಕೊರತೆ ಬಹಳವಿದೆ. ಆದುದರಿಂದ ಹೆಚ್ಚು ಭೂಮಿ ಮುಳುಗಡೆಗೆ ಅವಕಾಶವಿಲ್ಲದ ಅತಿ ಎತ್ತರವಲ್ಲದ ಅಣೆಕಟ್ಟುಗಳನ್ನು ಕರಾವಳಿಯ ಮುಖ್ಯ ನದಿ ಹಾಗೂ ಉಪನದಿಗಳಿಗೆ ಸಾಕಷ್ಟು ಅಂತರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಟ್ಟಿದ್ದೇ ಆದರೆ ಇಲ್ಲಿನ ಅಂತರ್ಜಲ ಮಟ್ಟ ಹೆಚ್ಚಿಗೆಯಾಗಲಿದೆ. ಸಂಗ್ರಹಿತ ನೀರು ಕುಡಿಯಲು ಹಾಗೂ ಕೃಷಿಗಾಗಿ ಲಭ್ಯವಾಗ ಬಹುದು. ಈಗಾಗಲೇ ಈ ಹೇಳಿದ ಗಾತ್ರದ ಅಣೆಕಟ್ಟುಗಳನ್ನು ವಿದ್ಯುತ್ ಯೋಜನೆ ಗಳಿಗಾಗಿ ಕಟ್ಟಲು ಖಾಸಗಿ ಸಂಸ್ಥೆಗಳಿಗೆ ಸರಕಾರ ಅವಕಾಶ ಮಾಡಿಕೊಟ್ಟಿದ್ದು ಬೆರಳೆಣಿಕೆಯ ಈ ಸಂಸ್ಥೆಗಳು ನೀರನ್ನು ತಮ್ಮ ನಿಯಂತ್ರಣದಲ್ಲಿಟ್ಟಿದ್ದು, ಸರಕಾರದ ಕುಡಿಯುವ ನೀರು ಯೋಜನೆಯ ಅಣೆಕಟ್ಟುಗಳಿಗೂ ಸಕಾಲದಲ್ಲಿ ಬಿಟ್ಟು ಬಿಡುತ್ತಿಲ್ಲ. ಸರಕಾರವೇ ಇಂಥ ಅಣೆಕಟ್ಟುಗಳನ್ನು ಕಟ್ಟಿ ನೀರಿನ ನಿಯಂತ್ರಣ ಇಟ್ಟುಕೊಳ್ಳಬೇಕು. ಅಂತೆಯೇ ತೋಡುಗಳಿಗೆ ಕಿಂಡಿ ಅಣೆಕಟ್ಟುಗಳನ್ನು ವ್ಯಾಪಕವಾಗಿ ರಚಿಸಿಕೊಳ್ಳುವುದೂ ಅಗತ್ಯ ಎಂಬುದಾಗಿ ಮಂಗಳೂರಿನ ವಾಸುದೇವ ಉಚ್ಚಿಲ ಅಭಿಪ್ರಾಯ ನೀಡಿದರು.

ಉತ್ತರ ಕನ್ನಡ ಜಿಲ್ಲೆಯನ್ನು ತೀರಾ ಕರಾವಳಿ ಜಿಲ್ಲೆ ಎನ್ನುವಂತಿಲ್ಲ. ನದಿ ನೀರಿಗೆ ತಿರುವು ಕೊಟ್ಟ ಯೋಜನೆಯೊಂದು ಉ.ಕ.ಜಿಲ್ಲೆಯಲ್ಲೂ ಇದೆ. ಪರಿಸರದ ಹೆಸರಿನಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಅಲ್ಲಿ ವಿರೋಧ ಇದೆ. ಮುಖ್ಯವಾಗಿ ಸ್ವರ್ಣವಲ್ಲಿ ಸ್ವಾಮಿಗಳು ಹಾಗೂ ಅನಂತ ಹೆಗಡೆ ಅಗೀಸರ ಅವರಿಂದ ಈ ಇಬ್ಬರೂ ಎಂದೂ ಕುಡಿಯುವ ನೀರಿನ ಪರವಾಗಲೀ ನೀರಾವರಿ ಪರವಾಗಲೀ ಇದ್ದವರಲ್ಲ ಎಂದು ಉ.ಕನ್ನಡದ ಯಮುನಾ ಗಾಂವ್ಕರ್ ತಿಳಿಸಿದರು.

ಜಯಂತ ಉಳ್ಳಾಲ, ವಸಂತ ಆಚಾರಿ, ನಾರಾಯಣ ಬಡಕಬೈಲ್, ವಿಶಾಲಾಕ್ಷಿ, ಕೃಷ್ಣಪ್ಪ ಸಾಲ್ಯಾನ್ ಚರ್ಚೆಯಲ್ಲಿ ಭಾಗವಹಿಸಿದರು. ಚರ್ಚೆಗೆ ಜಿ.ವಿ.ಶ್ರೀರಾಮರೆಡ್ಡಿಯವರು ಉತ್ತರಿಸುತ್ತಾ ನಾವು ಡಾ.ಪರಮಶಿವಯ್ಯ ವರದಿಯನ್ನು ಇನ್ನಷ್ಟು ವಿವರವಾಗಿ ಅಧ್ಯಯನ ಮಾಡೋಣ. ನೀರಿನ ಬಗ್ಗೆ ಪಕ್ಷ ಪ್ರಚಾರಾಂದೋಲನ ಮಾಡಬೇಕೆಂದು ಸಮಾವೇಶದಲ್ಲಿ ಮಾತನಾಡಿದ ಎಲ್ಲರೂ ಹೇಳಿದುದು ಒಟ್ಟು ಸಮಾವೇಶದ ಅಭಿಪ್ರಾಯವಾಗಿದ್ದು, ಅದು ನಮ್ಮ ಮುಂದಿನ ಕಾರ್ಯಾಚರಣೆಗೆ ದಿಕ್ಸೂಚಿಯಾಗಿದೆ ಎಂದು ತಿಳಿಸಿದರು.

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಮೇರಿ ಕ್ಯೂರಿ, ಐನ್‌ಸ್ಟೀನ್ ಸಾಲಿಗೆ ಸ್ಟೀವ್ ಜಾಬ್ಸ್‌ರನ್ನು ಸೇರಿಸಬಹುದೇ?

ಸ್ಟೀವ್ ಜಾಬ್ಸ್ ಎಂಬ ಕಂಪ್ಯುಟರ್ ತಂತ್ರಜ್ಞ ತೀರಿಕೊಂಡು ಎಷ್ಟೋ ದಿನಗಳಾದರೂ ಈಗಲೂ ಅವರ ಗುಣಗಾನ ವಾಪಕ ನಡೆದಿದೆ. ವಿಗ್ನಾನ -ತಂತ್ರಗ್ನಾನದ ಅವಿಷ್ಕಾರಗಳ ಪ್ರಯೋಜನ ಜನರಿಗೆ ಸಿಗಬೇಕೋ ಅಥವಾ ಲಾಭಕೋರ ಬಹುರಾಷ್ಟ್ರೀಯ ಕಂಪನಿಗಳ ಕಪಿಮುಷ್ಠಿಯಲ್ಲಿ ಬಂಧಿಯಾಗಬೇಕೋ ಎಂಬ ಪ್ರಶ್ನೆಗೆ ಉತ್ತರ ಹುಡುಕಿಕೊಂಡರೆ ಸ್ಟೀವ್ ಜಾಬ್ಸ್ ಏನೆಂದು ನಮಗೆ ಚೆನ್ನಾಗಿ ಅರ್ಥವಾಗುತ್ತಾರೆ.

ರಾಘವೇಂದ್ರ.ಎಸ್.

ಕಂಪ್ಯುಟರ್(ಗಣಕಯಂತ್ರ)ಗಳನ್ನು ಜನಸಾಮಾನ್ಯರು ಬಳಸಲು ಅನುಕೂಲವಾಗುವಂತೆ ತಯಾರಿಸುವುದಾಗಿ ಹೊರಟ ಆಪಲ್ ಕಂಪನಿಯು, ಕಂಪ್ಯುಟರ್ ಮತ್ತು ತನ್ನ ಇನ್ನಿತರ ಉತ್ಪನ್ನಗಳ ಸ್ವರೂಪಕ್ಕೆ ಅತಿ ಹೆಚ್ಚು ಪ್ರಾಮುಖ್ಯತೆ ಕೊಟ್ಟಿತು. ಈ ಕಾರಣ ಆಪಲ್ ಸೃಷ್ಟಿಸಿದ ತಂತ್ರಜ್ಞಾನವು ಗ್ರಾಹಕರಿಗೆ ಯಾವುದೇ ಸ್ವಾತಂತ್ರ್ಯ ಇಲ್ಲದಿರುವ, ಅತಿ ದುಬಾರಿಯಾದ ಉತ್ಪಾದನೆಗಳನ್ನು ತಯಾರಿಸಿ, ಗ್ರಾಹಕರಲ್ಲಿ ಇದನ್ನು ಬಳಸುವ ಆಭ್ಯಾಸವನ್ನು ಒಂದು ಚಟದಂತೆ ಬೆಳೆಸಿತು. ಇಂತಹ ಆಪಲ್ ಕಂಪನಿಯ ಸಂಸ್ಥಾಪಕರಲ್ಲಿ ಮುಖ್ಯರಾದವರು ಸ್ಟೀವ್ ಜಾಬ್ಸ್.

ಸ್ಟೀವ್ ಜಾಬ್ಸ್ ಅವರು ಇತ್ತೀಚಿಗೆ ಅನಾರೋಗ್ಯದಿಂದ ನಿಧನರಾದರು. ಸ್ಟೀವ್ ಜಾಬ್ಸ್ ಅವರ ಸಾವು ಅಕಾಲಿಕ ಮತ್ತು ದುರದೃಷ್ಟವಾದುದು. ಆದರೆ ಸ್ಟೀವ್ ಜಾಬ್ಸ್ ನಿಧನರಾದ ಮೇಲೆ ಅವರನ್ನು ಹೊಗಳುವ ಭರದಲ್ಲಿ ಜನರಿಗೆ ಹೇಳಬೇಕಾದ ಎಷ್ಟೋ ವಿಚಾರಗಳನ್ನು ನಮ್ಮ ಹೆಚ್ಚಿನ ಮಾಧ್ಯಮಗಳು ಹೇಳಲೇ ಇಲ್ಲ. ಸಾವಿನ ಸುದ್ದಿ ಹೊರಬಿದ್ದಂತೆ ಎಲ್ಲಾ ಮಾಧ್ಯಮಗಳಲ್ಲಿಯೂ ಅವರ ಕೀರ್ತನೆಯು ನದಿಯಂತೆ ಹರಿಯಲಾರಂಭಿಸಿತು. ಸ್ಟೀವ್ ಜಾಬ್ಸ್ 21ನೇ ಶತಮಾನದ ನ್ಯೂಟನ್ ಅಥವಾ ಐನ್‌ಸ್ಟೈನ್ ಎಂಬಂತಹ ಭಾವನೆ ಬರುವಷ್ಟು ಅವರನ್ನು ಅವರ ಕೊಡುಗೆಯನ್ನು ಹೊಗಳಿ ಅಟ್ಟಕ್ಕೇರಿಸಲಾಯಿತು. ಅದೇ ಸಮಯ ಹಲವಾರು ಚಿಂತಕರು ಸ್ಟೀವ್ ಜಾಬ್ಸ್ ರವರ ಕಾರ್ಯ ವೈಖರಿಗಳನ್ನು ಮತ್ತು ಅವರ ಸೃಜನಶೀಲತೆಯನ್ನು ತೀಕ್ಷ್ಣವಾಗಿ ಟೀಕಿಸಿದ್ದಾರೆ. ಅದಕ್ಕೆ ಹೆಚ್ಚಿನ ಪ್ರಚಾರ ಸಿಗಲಿಲ್ಲ.

ಸ್ಟೀವ್ ಜಾಬ್ಸ್ ರವರನ್ನು ಹೊಗಳುವುದೇ ? ಅಥವಾ ಟೀಕಿಸುವುದೇ?

ಸ್ಟೀವ್ ಜಾಬ್ಸ್‌ರವರ ಜೀವನ ಮತ್ತು ಕೆಲಸಗಳನ್ನು ಪರಿಶೀಲಿಸಿದರೆ, ಈ ಪ್ರಶ್ನೆಗೆ ಉತ್ತರ ಸುಲಭವಾಗಿ ಸಿಕ್ಕಿ ಬಿಡುತ್ತದೆ. ಒಬ್ಬ ಕಂಪ್ಯುಟರ್ ತಂತ್ರಜ್ಞಾನಿ ಆಪಲ್ ಮತ್ತು ಪಿಕ್ಸರ್‌ನಂತಹ ದೈತ್ಯ ಕಂಪ್ಪನಿಗಳನ್ನು ಬೆಳೆಸಿರುವುದು ಒಂದು ದೃಷ್ಟಿಕೋನದಲ್ಲಿ ದೊಡ್ಡ ಸಾಧನೆ. ಜೊತೆಗೆ ಕ್ಯಾನ್ಸರ್‌ನಂತಹ ರೋಗದಿಂದ ನರಳುತ್ತಿದ್ದಾಗಲೂ ಜೀವನದಲ್ಲಿ ಕುಗ್ಗದೇ ಹೋರಾಡಿ ಜನಸಾಮಾನ್ಯರಿಗೆ ಅವರು ಒಂದು ಸ್ಪೂರ್ತಿಯನ್ನು ಒದಗಿಸಿದ್ದಾರೆ.

ಆದರೆ ಇಲ್ಲಿ ಒಂದು ವಿಷಯವನ್ನು ಗಮನಿಸ ಬೇಕು. ಅವರು ತಮ್ಮ ತಾಂತ್ರಿಕ ಕ್ಷೇತ್ರದ ಈ ಸಾಧನೆಗಳನ್ನು ಮಾಡಿದ್ದು ಹೇಗೆ ?

ಅನುಕರಣೆ ಮತ್ತು ರಹಸ್ಯ ಪಾಲನೆ

ಕ್ರಿಯಾಶೀಲತೆ ಮತ್ತು ಸೃಜನಶೀಲತೆಯ ಪ್ರಶ್ನೆಯಲ್ಲಿ ಬೇರೆಯವರಿಂದ ಅನುಕರಣೆ ಮಾಡಿರುವುದೇ ತಮ್ಮ ಕಂಪನಿಯ



ಬೆಳವಣಿಗೆಗೆ ಕಾರಣವೆಂದು ಸ್ಟೀವ್ ಜಾಬ್ಸ್ ರವರೇ ಒಪ್ಪಿಕೊಂಡಿದ್ದಾರೆ. ಆದರೆ ಅವರ ಕಂಪನಿಯಲ್ಲಿ ಉತ್ಪಾದನೆಗೊಂಡ ಒಂದೊಂದು ಉತ್ಪನ್ನವೂ, ಅದರಲ್ಲಿರುವ ತಂತ್ರಾಂಶವು ಗ್ರಾಹಕರಿಗೆ ಕಡಿವಾಣ ಹಾಕಿದಂತೆ ಇವೆ. ಅವರು ಮಾಡಿದ ಅನುಕರಣೆ ಹಾಗು ಅದರಿಂದ ಪಡೆದ ಲಾಭವನ್ನು, ತಮ್ಮ ಗ್ರಾಹಕರು ಪಡೆದು, ಬೆಳೆಯದಂತೆ ಒಂದು 'ಕಾರಗ್ರಹ'ವನ್ನೇ ನಿರ್ಮಿಸಿದ್ದಾರೆ. ಅಂದರೆ ಬೇರೆಯವರ ಪರಿಶ್ರಮ, ಗ್ನಾನದ ಲಾಭವನ್ನು ತಾವು ಬಳಸಿಕೊಂಡು ಅದನ್ನು ಬೆಳೆಸಬಹುದು. ಆದರೆ ಬೇರೆಯವರು ತಮ್ಮ ಕೊಡುಗೆ, ಜ್ಞಾನವನ್ನು ಬಳಸಿಕೊಂಡು ಅದನ್ನು ಬೆಳೆಸುವಂತಿಲ್ಲ. ಸಮಾಜಕ್ಕೆ ಮತ್ತಷ್ಟು ಹೊಸ ಸಾಧ್ಯತೆ, ಸಂಶೋಧನೆಯ ಫಲ ಸಿಗುವಂತಿಲ್ಲ. ಇಲ್ಲಿ ಗ್ನಾನಕ್ಕೆ 'ದಿಗ್ಬಂಧನ'ವನ್ನೇ ನಿರ್ಮಿಸಿದ್ದಾರೆ.

ಸ್ವತಂತ್ರ ತಂತ್ರಾಂಶ ಆಂದೋಲನದ, ರಿಚರ್ಡ್ ಸ್ಟಾಲ್‌ಮನ್‌ರವರು ಸ್ಟೀವ್ ಜಾಬ್ಸ್‌ರವರನ್ನು ಕುರಿತು ಕಂಪ್ಯೂಟರ್ ಅನ್ನು 'ಕಾರಾಗೃಹ' ಮಾಡಿದ ಸ್ಟೀವ್ ಜಾಬ್ಸ್ ರವರು ನಿಧನರಾದ ಮೇಲಾದರೂ ಅವರ ಕಂಪನಿ ತಾಂತ್ರಿಕ ಸ್ವಾತಂತ್ರ್ಯವನ್ನು ತನ್ನ ಗ್ರಾಹಕರಿಗೆ ಒದಗಿಸಲಿ ಎಂದು ಆಶಿಸೋಣ " ಎಂದು ಹೇಳಿದರು. ಆ ಕೆಲಸ ಇಂದಿಗೂ ಆಗಿಲ್ಲ.

ಗ್ರಾಹಕರ ಸ್ವಾತಂತ್ರ್ಯದ ಬಗ್ಗೆ ಕಿಂಚಿತ್ತೂ ಆಲೋಚಿಸದೆ, ಲಾಭವೇ ತನ್ನ ಪ್ರಮುಖ ಗುರಿ ಎಂದು ಆಕಾಶದೆತ್ತರ ಬೆಳೆದು ನಿಂತಿರುವ ಆಪಲ್ ಕಂಪನಿಯಂತಹ ದೈತ್ಯವನ್ನು ಸೃಷ್ಟಿಸಿರುವ ಸ್ಟೀವ್ ಜಾಬ್ಸ್ ರವರಲ್ಲಿ ಬಂಡವಾಳಶಾಹಿ ಮಾಧ್ಯಮವು ತನಗೆ ಬೇಕಾದ ಒಬ್ಬ 'ಆದರ್ಶ ನಾಯಕ'ನನ್ನು ಕಂಡು ಪ್ರಚಾರ ಮಾಡುತ್ತಿದೆ. ಸ್ಟೀವ್ ಜಾಬ್ಸ್‌ರವರು ವೈಯುಕ್ತಿಕವಾಗಿ ಶ್ರಮಿಸಿ ತಮ್ಮ ಜೀವನದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ್ದಾರೆ ಎಂದು ಹೇಳಲಾಗಿದೆಯಾದರೂ ಆ ಸಾಧನೆಗಳ ಮೂಲ ಆಧಾರ ಎನು ? ಎಂಬುದು ಆಲೋಚಿಸ ಬೇಕಾದ ವಿಷಯ. ಕಂಪನಿಯೊಂದರ ಲಾಭಕೋರತನಕ್ಕೆ ಪೂರಕವಾಗಿ ತಂತ್ರಜ್ಞಾನದಲ್ಲಿ ಗೌಪ್ಯತೆಯನ್ನು ಸೃಷ್ಟಿಸಿದ ನಿರಂತರ ರಹಸ್ಯ ಪಾಲನೆಯನ್ನು ಮಾಡಿದ ತಂತ್ರಜ್ಞಾನಿ ಸ್ಟೀವ್ ಜಾಬ್ಸ್, ಎಂದು ಸಾಮಾಜಿಕ ಕಳಕಳಿ ಇರುವ ಯಾರೇ ಆದರೂ ಅರ್ಥ ಮಾಡಿಕೊಳ್ಳಬೇಕು. ಮನುಕುಲಕ್ಕೆ ಮಹಾನ್ ಉಪಕಾರಿಯಾದ ಎಕ್ಸರೇ ಮುಂತಾದ ತಂತ್ರಗ್ನಾನದ ಸಂಶೋಧನೆಯಲ್ಲಿ ತಮ್ಮ ಜೀವಕ್ಕೆ ಅಪಾಯ ಎದುರಾದರೂ ಎದೆಗುಂದದೇ ಶ್ರಮಿಸಿದ ಮೇರಿ ಕ್ಯೂರಿಯಂತಹ ವಿಗ್ನಾನಿಗಳ ಸಾಲಿನಲ್ಲಿ ಸ್ಟೀವ್ ಜಾಬ್ಸ್ ಎಲ್ಲಿ ನಿಲ್ಲುತ್ತಾರೆ. ? ಅವರೆಂದು ತಮ್ಮ ಸಂಶೋಧನೆಯ ಫಲವು ಇಡೀ ಮನುಕುಲಕ್ಕೆ ಪ್ರಯೋಜನಕಾರಿಯಾಗಬೇಕೆಂದು ಯೋಚಿಸಿದರು. ತಮ್ಮ ಸಂಶೋಧನೆಯಿಂದ ತಮ್ಮ ಬಳಿ ಹಣದ ರಾಶಿಯನ್ನು ಗುಡ್ಡೆ ಹಾಕಿಕೊಳ್ಳುವ ಬಗೆಗೆ ಅವರಿಗೆ ಚಿಂತೆ ಇರಲಿಲ್ಲ.

ತಿರುಗುತ್ತಿದೆ ಭೂಮಿ

ಭೂಮಿ ತಿರುಗುತ್ತಿದೆ
ತಿರುಗುತ್ತಲೇ ಇದೆ.
ನಿತ್ಯವೂ ಉದಯಿಸುತ್ತಿದ್ದಾನೆ
ಸೂರ್ಯ.
ಭುವಿಗೆ ಚೆಲ್ಲಿದ ಬೆಳಕಿಗೆ
ಯಾರೋ........ಮೂರ್ಖರು
ಕತ್ತಲೆಯ ಪರದೆಯ ಹಿಡಿದು
ಅಡ್ಡ ನಿಂತಿದ್ದಾರೆ.
ಯಾವುದೋ ಕರಿನೆರಳು
ಯಾರೋ ಹೆಣೆದ ಬಲೆಯಲ್ಲಿ
ನಲುಗುತ್ತಿರುವ ಜೀವಗಳು
ಎದೆಯ ಹುತ್ತದೊಳಗೆ
ಭುಸುಗುಡುವ ಹಾವುಗಳು
ಮಲ್ಲಿಗೆಯ ಮೊಗದಲ್ಲಿ
ನೆತ್ತರು ಕಲೆಗಳು
ವಸುಂಧರೆಯ ನಗೆಯನ್ನು
ಕದ್ದವರು ಯಾರು?
ಉದಯ ರವಿಯ
ಎದೆ ಬಿರಿಯುವಂತೆ
ಯಾರದೋ ಆಕ್ರಂದನ.
ಮರದ ಕೊಂಬೆಗಳಲ್ಲಿ
ನೇತಾಡುತ್ತಿರುವ
ಭೂಮಿ ತಾಯಿಯ
ಚೊಚ್ಚಲ ಮಗನ
ಹೆಣದ ಸಾಲುಗಳು.
ಹಸಿದೊಡಲ ಬೆಂಕಿಯಲ್ಲಿ
ಬೆಂದು ಹೋದ ಬದುಕು
ಕಣ್ಣ ಗುಡ್ಡೆಗಳಲ್ಲಿ
ಸುಟ್ಟು ಕರಕಲಾದ
ಕನಸುಗಳು.
ನಿಟ್ಟುಸಿರ ಬಿಟ್ಟ ಸೂರ್ಯ
ಪಡುವಣದತ್ತ ಓಡಿ
ಕಣ್ಮರೆಯಾದ.
ಇರುಳಲ್ಲಿ ತೇಲಿ ಬಂದ
ಚಂದ್ರನ ನಗೆಯನ್ನು
ಯಾರೋ ಕದ್ದಿದ್ದರು.
ನೋವನೊದ್ದು ಮಲಗಿದ್ದ ನೆಲ
ರಾತ್ರಿಯೆಲ್ಲಾ ನರಳುತ್ತಲೇ ಇತ್ತು
ಆದರೂ
ಭೂಮಿ ತಿರುಗುತ್ತಲೇ ಇದೆ.
ನಿಟ್ಟುಸಿರು ಬಿಡುತ್ತಿದ್ದಾನೆ ಸೂರ್ಯ
ಚಂದ್ರ ಬಿಕ್ಕುತ್ತಲೇ ಇದ್ದಾನೆ.
ಎಲ್ಲಿಂದಲೋ,
ಧ್ವನಿಯೊಂದು ಮೊಳಗುತ್ತಿದೆ
ಧಿಕ್ಕಾರ! ಧಿಕ್ಕಾರ!

– ಹುಲಿಕಟ್ಟೆ ಚನ್ನಬಸಪ್ಪ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH